# ಕರ್ನಾಟಕ ವಿಕಾಸ

# Karnataka Vikas

ಫೆಬ್ರವರಿ
February 2016




ದಿನಾಂಕ: 08.01.2016 ರಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಸುವರ್ಣಸೌಧ, ಬೆಳಗಾವಿಯಲ್ಲಿ ನೂತನವಾಗಿ ಆಯ್ಕೆಯಾದ ಸಹಾಯಕ ಇಂಜಿನಿಯರ್‌ಗಳ ಸಂಕಲ್ಪ ದಿನ ಕಾರ್ಯಕ್ರಮವನ್ನು ಉದ್ಘಾಟಿಸಿದರು.

# ಹಾವೇರಿ ತಾಲೂಕು ಹೋಬಳಿ ಮಟ್ಟದ ರೋಜ್‌ಗಾರ್ ದಿವಸ್ ಆಚರಣೆ

ಕರ್ಜಗಿ ಹೋಬಳಿ ಮಟ್ಟದ ಐ.ಇ.ಸಿ ಚಟುವಟಿಕೆಯಡಿ ರೋಜ್‌ಗಾರ್ ದಿನಾಚರಣೆಯಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀ. ಕೆ. ಬಿ. ಅಂಜನಪ್ಪ ಕೂಲಿ ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡುತ್ತಿರುವುದು.












# ಕರ್ನಾಟಕ ವಿಕಾಸ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾಸ ಪತ್ರಿಕೆ

ಫೆಬ್ರವರಿ 2016 | ಸಂಪುಟ : 57 | Volume : 57

February 2016 | ಸಂಚಿಕೆ : 03 | Issue : 03


## ಈ ಸಂಚಿಕೆಯೊಳಗೆ


| | | |
|---|---|---|
| 5. | ವಿಶೇಷ ಲೇಖನ | – ಹೆಚ್. ಆರ್. ಶ್ರೀಶ |
| 11. | ಲೇಖನ | – ಪ್ರಶಾಂತ್ ಎನ್.<br>– ಬಂಡೆಪ್ಪ ಜಿ. ತೇಲಿ |
| 16. | ಅಭಿವೃದ್ಧಿ ಅಧಿಕಾರಿಗಳ ಅಂಗಳದಿಂದ | – ಸುಬ್ಬರಾಜ ಅರಸ್ ವಿ.ಆರ್. |
| 18. | ಯಶೋಗಾಥೆ | – ರಾಜೇಶ್ವರಿ ಬಿ. ಎನ್.<br>– ಶ್ರೀನಿವಾಸ ಹೆಚ್. ಚಿತ್ರಗಾರ<br>– ಮಂಜುಳ<br>– ಅಂಬರೀಶ್<br>– ರವೀಂದ್ರನಾಥ ಎಂ.ಎಸ್. |
| 31. | ಕವಿಯಕ್ಷಪ್ರಶ್ನೆ | – ಉಮೇಶ್ ಹೆಚ್. ಸಿ. (ಹುಲಿಕುಂಟೆ) |
| 32. | ಕಾವ್ಯ ವಿಕಾಸ | – ಪಿ. ಶಿವರಾಮ ರೆಡ್ಡಿ |
| 33. | ಪಂಚತಂತ್ರ ವರದಿ | |
| 34. | ಸಕಾಲ ವರದಿ | |
| 35. | ಸುತ್ತೋಲೆ | |






ಪ್ರಕಾಶಕರು
**ಕೆ. ಯಾಲಕ್ಕಿ ಗೌಡ**
ನಿರ್ದೇಶಕರು (ಪಂ. ರಾಜ್ )
ಹಾಗೂ ಸರ್ಕಾರದ ಪದನಿಮಿತ್ತ
ಜಂಟಿ ಕಾರ್ಯದರ್ಶಿ

ಪ್ರಧಾನ ಸಂಪಾದಕರು
**ಬೂವನಹಳ್ಳಿ ನಾಗರಾಜ್**
ನಿರ್ದೇಶಕರು, ಸುವರ್ಣ ಗ್ರಾಮೋದಯ
ಯೋಜನೆ ಹಾಗೂ ಸರ್ಕಾರದ ಪದನಿಮಿತ್ತ
ಉಪ ಕಾರ್ಯದರ್ಶಿ

**ವೈ. ಮಹಾಂಕಾಳಪ್ಪ**
ಸಂಪಾದಕರು ಹಾಗೂ
ಸಾರ್ವಜನಿಕ ಸಂಪರ್ಕಾಧಿಕಾರಿ

ಸಹಾಯಕ ಸಂಪಾದಕರು
**ಡಾ. ಎಂ.ಎಸ್. ಮಂಜುನಾಥ**
**ನಾಗರಾಜ್. ಬಿ. ವಾಗಾ**

ವ್ಯವಸ್ಥಾಪಕರು
**ಹೆಚ್.ಬಿ. ಗುರುಸ್ವಾಮಿ**

### ವಾರ್ಷಿಕ ಚಂದಾ

ವ್ಯಕ್ತಿಗಳಿಗೆ ರೂ . 100/–
ಸಂಸ್ಥೆಗಳಿಗೆ ರೂ. 120/–
ಬಿಡಿ ಪ್ರತಿ ರೂ. 10/–
ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಿಮ್ಮ ಸ್ವಷ್ಟ ಅಂಚೆ ವಿಳಾಸ ಪಿನ್ ಕೋಡ್‌ನೊಂದಿಗೆ ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು.

### ಕಛೇರಿ ವಿಳಾಸ


ಸಂಪಾದಕರು ಕರ್ನಾಟಕ ವಿಕಾಸ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ. 1,
ಬಹು ಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ,
ಬೆಂಗಳೂರು – 560 001.
ದೂರವಾಣಿ : 080 – 22353857
www.rdpr.kar.nic.in
Email : kvrdpr@gmail.com

### ವಿಶೇಷ ಸೂಚನೆ

ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು.

ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.

# ಪತ್ರಿಕೆಯ ಕುರಿತು ನಿಮ್ಮ ನುಡಿ




ಮಾನ್ಯರೆ,

ಜನವರಿ–2016ರ 'ಕರ್ನಾಟಕ ವಿಕಾಸ' ಪತ್ರಿಕೆಯಲ್ಲಿ ಶ್ರೀ ಎನ್. ಆರ್. ಪಾಟೀಲರವರ ಬರ ಪರಿಹಾರ ಕೇವಲ ಸರ್ಕಾರದ ಕೆಲಸವಲ್ಲ. ನೀರಿನ ಉಳಿತಾಯ ನಮ್ಮ ಹೊಣೆ ಎಂಬ ಲೇಖನವು ನೀರನ್ನು ಉಪಯೋಗಿಸ ಬಹುದಾದ ರೀತಿ ಹಾಗೂ ನೀತಿಯನ್ನು ತಿಳಿಸಲ್ಪಡುತ್ತದೆ. ಎಲ್ಲದಕ್ಕೂ ಸರಕಾರವೆಂದರೆ ಹೇಗೆ? ಎಂಬ ಪ್ರಶ್ನೆಗೆ ಉತ್ತರ ನೀಡಿದಂತೆ ಪ್ರತಿಯೊಬ್ಬ ನಾಗರಿಕನಿಗೂ ತನ್ನ ಹೊಣೆಯನ್ನು ಅರಿತು ಸರ್ಕಾರದೊಂದಿಗೆ ಸಹಕಾರ ನೀಡಿದಲ್ಲಿ ಪ್ರಗತಿ ಸಾಧ್ಯ. ನೀರು ಜೀವನಾಧಾರ, ನೀರನ್ನು ಪೋಲು ಮಾಡುವುದು ಸುತಾರಾಂ ಸರಿಯಲ್ಲ. ಜನ ಜಾಗೃತಿಗೊಳಿಸುವಂತಹ ಚಿಂತನಪರ ಇಂತಹ ಲೇಖನಗಳು ಬಹುಪಯೋಗವಾಗಿವೆ. ಜೊತೆ ಜೊತೆಗೆ ಸರ್ಕಾರಿ ಆದೇಶಗಳು ಮತ್ತು ನಡವಳಿಗಳ ಪರಿಚಯವು ತುಂಬಾ ಚೆನ್ನಾಗಿ ಮೂಡಿಬಂದಿದೆ.

**ಶ್ರೀ ಕೊತ್ತಲ ಮಹದೇವಪ್ಪ**
ಲೇಖಕ, ವಿನಾಯಕನಗರ, ಲಕ್ಷ್ಮೇಶ್ವರ, ಗದಗ 582116

ಕರ್ನಾಟಕ ವಿಕಾಸ ಮಾಸ ಪತ್ರಿಕೆಯು ಓದುಗರ ಜ್ಞಾನಕೋಶವಾಗಿದೆ. ಜನವರಿ 2016 ರ ಸಂಚಿಕೆಯಲ್ಲಿ ಪ್ರಕಟವಾದ ಬರ ಪರಿಹಾರ ಕೇವಲ ಸರ್ಕಾರದ ಕೆಲಸವಲ್ಲ ನೀರಿನ ಉಳಿತಾಯ ನಮ್ಮ ಹೊಣೆ ಎಂಬ ಲೇಖನ ಓದುಗರ ಕಣ್ಣು ತೆರೆಸುವಂತಿತ್ತು, ಬರ ಪರಿಹಾರದ ಸಲುವಾಗಿ ಸರ್ಕಾರ ವಿವಿಧ ಯೋಜನೆ ಹಾಗೂ ಜನೋಪಯೋಗಿ ಕಾರ್ಯಗಳನ್ನು ಹಮ್ಮಿಕೊಂಡಿದೆ. ಈ ಯೋಜನೆಗಳನ್ನು ಸಾಕಾರಗೊಳಿಸಲು ಅಧಿಕಾರಿಗಳು ಕರ್ತವ್ಯ ದಕ್ಷತೆ ಮತ್ತು ಪ್ರಾಮಾಣಿಕತನದಿಂದ ಕಾರ್ಯಶೀಲರಾಗಬೇಕು. ಜೀವನ ಜಲವಾದ ಜೀವನವಶ್ಯಕವಾದ ನೀರನ್ನು ಎಲ್ಲ ಜನರು ಹಿತಮಿತವಾಗಿ ಬಳಸಬೇಕು. ಇದರಲ್ಲಿ ಸಾರ್ವಜನಿಕ ಪಾತ್ರ ಮಹತ್ವಪೂರ್ಣವಾಗಿದೆ. ಸಂಪೂರ್ಣ ಗ್ರಾಮ ನೈರ್ಮಲ್ಯ ಸಾಧಿಸಲು ಗ್ರಾಮೀಣ ಸಮುದಾಯಗಳ ಪಾತ್ರ ಮಹತ್ವದ್ದು ಎನ್ನುವ ಬಂಡೆಪ್ಪ ಜಿ.ತೇಲಿ ಯವರ ಲೇಖನವು ಪರಿಣಾಮಕಾರಿಯಾಗಿತ್ತು.

**ಶ್ರೀ ಬಸವರಾಜ ಹೂಗಾರ**
ಹಿರೇಸಿಂಗನಗುತ್ತಿ, ಮುಕ್ಕಾಂ ಅಂಚೆ,
ಹುನಗುಂದ ತಾಲೂಕು, ಬಾಗಲಕೋಟೆ 587154.

ಜನವರಿ 2016ರ ಕರ್ನಾಟಕ ವಿಕಾಸ ಮಾಸ ಪತ್ರಿಕೆಯ ಮುಖಪುಟವು ಬಹಳ ಸುಂದರವಾಗಿ ಮೂಡಿಬಂದಿದೆ. ಪತ್ರಿಕೆಯಲ್ಲಿನ ಲೇಖನಗಳು, ಯಶೋಗಾಥೆಗಳು, ಸುತ್ತೋಲೆಗಳು ಬಹಳ ಉಪಯುಕ್ತವಾಗಿದೆ. ಶ್ರೀ ಬಂಡೆಪ್ಪ ಜಿ.ತೇಲಿ ರವರ ಸಂಪೂರ್ಣ ಗ್ರಾಮೀಣ ನೈರ್ಮಲ್ಯ ಸಾಧಿಸಲು ಗ್ರಾಮೀಣ ಸಮುದಾಯಗಳ ಪಾತ್ರ ಮಹತ್ವದ್ದು ಎಂಬ ಲೇಖನವು ಚೆನ್ನಾಗಿ ಮೂಡಿಬಂದಿದ್ದು, ಗ್ರಾಮೀಣ ಜನರಲ್ಲಿ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸುವಲ್ಲಿ ಮಹತ್ವದ ಪಾತ್ರ ವಹಿಸಿದೆ. ಪತ್ರಿಕೆಯಲ್ಲಿ ಹೀಗೆ ಗ್ರಾಮೀಣ ಜನತೆಗೆ ಉಪಯುಕ್ತವಾಗುವಂತಹ ಲೇಖನಗಳು ಬಂದಲ್ಲಿ ಗ್ರಾಮದ ಜನರು ನಗರ ಪ್ರದೇಶದಂತೆ ಉತ್ತಮ ಜೀವನ ನಡೆಸಲು ಸಹಕಾರಿಯಾಗುತ್ತದೆ.

**ಶ್ರೀ ಗಂಗಲಕ್ಷ್ಮಿ**
ನಂ.6, 13ನೇ ಅಡ್ಡರಸ್ತೆ, ಕೇತಮಾರನಹಳ್ಳಿ,
ರಾಜಾಜಿನಗರ, ಬೆಂಗಳೂರು 560010

# ಹಳ್ಳಿಗಳಿಗೆ ಕೊನೆಗೂ ಬಂತು ಸ್ವರಾಜ್ಯ

ವಿಶೇಷ ಲೇಖನ

– ಹೆಚ್. ಆರ್. ಶ್ರೀಶ

ಗ್ರಾಮ ಪಂಚಾಯಿತಿ ಕಾಯ್ದೆಗೆ ಸಮಗ್ರ ತಿದ್ದುಪಡಿ ತರುವ ಮೂಲಕ ಹಳ್ಳಿಗಳಿಗೆ ಸ್ವರಾಜ್ಯ ತಂದು ಕೊಡುವ ಕೆಲಸವನ್ನು ಮಾಡಿರುವ ಶ್ರೀ ಸಿದ್ದರಾಮಯ್ಯ ಸರ್ಕಾರ ಕ್ರಾಂತಿಕಾರಿ ಹೆಜ್ಜೆಯನ್ನಿರಿಸಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಎಚ್. ಕೆ. ಪಾಟೀಲ ಅವರ ಇಚ್ಛಾಶಕ್ತಿ, ದೂರದೃಷ್ಟಿ ಹಾಗೂ ಪರಿಶ್ರಮದ ಫಲವಾಗಿ ಹೊರಹೊಮ್ಮಿರುವ ಈ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆ ರಾಷ್ಟ್ರ ಮಟ್ಟದ ಗಮನ ಸೆಳೆದಿದೆ. ಇದೀಗ ಹಳ್ಳಿಗಳಿಂದ ನಗರಕ್ಕೆ ಬಂದವರು ತಮ್ಮ ತಮ್ಮ ಹಳ್ಳಿಗಳ ಅಭಿವೃದ್ಧಿಗೆ ಕೈಜೋಡಿಸಬೇಕು.

ಸ್ಥಳೀಯರಿಗೆ ಸಂಪೂರ್ಣ ಅಧಿಕಾರ ನೀಡುವ ಬೃಹತ್ ಕಾರ್ಯವನ್ನು ಸರ್ಕಾರವು ಶಾಸನದ ಮೂಲಕ ಪೂರ್ಣಗೊಳಿಸಿದೆ. ಯುವ ಜನಾಂಗ ಮನಸ್ಸು ಮಾಡಿದರೆ ಹಳ್ಳಿ–ನಗರದ ನಡುವೆ ಇರುವ ಅಂತರವನ್ನು ಹೋಗಲಾಡಿಸಬಹುದು.

ಗಾಂಧೀಜಿಯವರ ಕನಸಿನ ಗ್ರಾಮ ಸ್ವರಾಜ್ಯದ ನೈಜ ಕಲ್ಪನೆಯನ್ನು ಜಾರಿಗೆ ತರುವುದು ಸರ್ಕಾರದ ಉದ್ದೇಶವಾಗಿದೆ.



ಗ್ರಾಮ ಸ್ವರಾಜ್ಯ ಎಂದ ಕೂಡಲೇ ನೆನಪಿಗೆ ಬರುವುದು ಮಹಾತ್ಮ ಗಾಂಧಿ. ಗಾಂಧೀಜಿ ಎಂದ ಕೂಡಲೇ ಚರಕ, ಖಾದಿ, ಗ್ರಾಮೋದ್ಯೋಗದ ಕಡೆ ಗಮನ ಹರಿಯುತ್ತದೆ. ಇದೀಗ ಇವು ಚಲಾವಣೆಯಲ್ಲಿ ಇಲ್ಲದ ನಾಣ್ಯಗಳಾಗಿವೆ. ಅದರೆ, ಗಾಂಧೀಜಿಯವರ ಸ್ವರಾಜ್ಯ ಕಲ್ಪನೆ ಬಹಳ ದೊಡ್ಡದು.


ಯಂತ್ರಗಳು ಬೇಡ, ಮನುಷ್ಯನ ಕೈಗಳಿಗೆ ಕೆಲಸ ಕೊಡಬೇಕೆಂಬುದು ಗಾಂಧೀಜಿಯವರ ಹೇಳಿಕೆ ಎಂದು ಅಪಪ್ರಚಾರ ಮಾಡುವವರೂ ಇದ್ದಾರೆ. ಕಂಪ್ಯೂಟರ್ ಯುಗದಲ್ಲಿ ಗಾಂಧೀಜಿ ಇದ್ದರೆ ಏನಾಗುತ್ತಿತ್ತು ಎಂದು ಪ್ರಶ್ನಿಸುವವರೂ ಇದ್ದಾರೆ. ಈಗ ಗಾಂಧೀಜಿ ಇದ್ದಿದ್ದರೆ ಕಂಪ್ಯೂಟರ್ ಕಲಿತುಕೊಳ್ಳುತ್ತಿದ್ದರು. ಅವರಿಗೆ ಜನರೊಂದಿಗೆ ಸಂಪರ್ಕ ಬೆಳೆಸಲು ಅನುಕೂಲವಾಗುತ್ತಿತ್ತು.

ಹಿರಿಯ ಪತ್ರಕರ್ತರು, ಸಂಖ್ಯೆ : 564/ಎ, 1 ನೇ ಅಡ್ಡ ರಸ್ತೆ, 7 ನೇ ಮುಖ್ಯ ರಸ್ತೆ,
ಬಿ. ಎಂ. ಶ್ರೀಕಂಠಯ್ಯ ರಸ್ತೆ, ಹನುಮಂತ ನಗರ,ಬೆಂಗಳೂರು – 560 019.

ಕೋಮು ಸೌಹಾರ್ದ ಮತ್ತು ಗ್ರಾಮೀಣ ಅಭಿವೃದ್ಧಿ ಎಂದರೆ ಗಾಂಧೀಜಿ ಕಡೆ ತಿರುಗುವುದು ಅನಿವಾರ್ಯ. ಗಾಂಧೀಜಿ ಈ ವಿಷಯದಲ್ಲಿ ಹಲವು ಪ್ರಯೋಗಗಳನ್ನು ನಡೆಸಿ ಎಲ್ಲಾ ವಿಷಯಗಳನ್ನು ಜನರ ಮುಂದಿಟ್ಟಿದ್ದಾರೆ.

ಇದುವರೆಗೆ ಯಾವ ಸರ್ಕಾರವೂ ಕೈಗೊಳ್ಳದ ಕೆಲಸವನ್ನು ಶ್ರೀ ಸಿದ್ದರಾಮಯ್ಯ ಕೈಗೊಂಡಿದ್ದಾರೆ. ಗ್ರಾಮೀಣ ಬದುಕಿಗೆ ಹೊಸ ರೂಪ ಕೊಡುವ ಕಾರ್ಯವನ್ನು ಅವರು ಮಾಡಿದ್ದಾರೆ. ಈಗಿನ ತಿದ್ದುಪಡಿಯನ್ನು ನೋಡಿದರೆ ನಗರಕ್ಕೆ ಬಂದು ಉನ್ನತ ಶಿಕ್ಷಣ ಪಡೆದು ಖಾಸಗಿ ಕಂಪನಿಗಳನ್ನು ಸೇರಿರುವ ಯುವಕರು ಮತ್ತು ಯುವತಿಯರು ತಮ್ಮ ತಮ್ಮ ಗ್ರಾಮಗಳಿಗೆ ಹಿಂತಿರುಗಿ ಹೊಸ ಅಲೋಚನೆಗಳ ಮೂಲಕ ತಮ್ಮ ಗ್ರಾಮದ ಚಿತ್ರಣವನ್ನೇ ಬದಲಿಸಬಹುದು. ಶ್ರೀ ಸಿದ್ದರಾಮಯ್ಯ ಸರ್ಕಾರ ಯುವ ಜನಾಂಗಕ್ಕೆ ಹಳ್ಳಿಗಳಲ್ಲಿ ಹೊಸ ಅವಕಾಶಗಳನ್ನು ಸೃಷ್ಟಿಸಿದೆ.

ಗಾಂಧೀಜಿಯವರ ಕನಸಿನ ಗ್ರಾಮ ಸ್ವರಾಜ್ಯದ ನೈಜ ಕಲ್ಪನೆಯನ್ನು ಜಾರಿಗೆ ತರುವುದು ಸರ್ಕಾರದ






ಉದ್ದೇಶವಾಗಿದೆ. ಗ್ರಾಮ ಸ್ವರಾಜ್ಯವನ್ನು ವಾಸ್ತವಿಕ ನೆಲೆಗಟ್ಟಿನ ಆಧಾರದ ಮೇರೆಗೆ ಅನುಷ್ಠಾನಗೊಳಿಸುವ ಉದ್ದೇಶದಿಂದ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಯನ್ನು "ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ ವಿಧೇಯಕ" ಎಂದು ಪುನರ್ ನಾಮಕರಣ ಗೊಳಿಸುವ 79 ತಿದ್ದುಪಡಿಗಳನ್ನು ತರಲಾಗಿದೆ.

ಈ ಮಸೂದೆಯಲ್ಲಿ ಹಲವಾರು ಕ್ರಾಂತಿಕಾರಕ ಅಂಶಗಳಿದ್ದು ಗ್ರಾಮೀಣ ಜನ-ಜೀವನ ಸುಧಾರಣೆಗೆ ಬಹುದೊಡ್ಡ ಕೊಡುಗೆಯನ್ನು ನೀಡುವ ಮೂರು ಹಂತದ ಪಂಚಾಯತಿ ವ್ಯವಸ್ಥೆಯ ಅಂಗಸಂಸ್ಥೆಗಳಾದ ಗ್ರಾಮ ಪಂಚಾಯತಿ - ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳನ್ನು ಮಾಜಿ ಪ್ರಧಾನ ಮಂತ್ರಿ ದಿವಂಗತ ರಾಜೀವ್ ಗಾಂಧಿ ಅವರ ಕನಸಿನ ಕೂಸಾದ 73ನೇ ಸಂವಿಧಾನ ತಿದ್ದುಪಡಿಯ ಸದಾಶಯಗಳನ್ನು ಸಂಪೂರ್ಣವಾಗಿ ಈಡೇರಿಸುವ ಬಹುದೊಡ್ಡ ಪ್ರಯತವಾಗಿದೆ.

### ಮುಕ್ತ ಸಮಾಜದತ್ತ

ಗ್ರಾಮಗಳನ್ನು ಶೋಷಣೆ ಮುಕ್ತ, ಭಯ ಮುಕ್ತ, ವ್ಯಾಜ್ಯ ಮುಕ್ತ, ಬಯಲು ಬಹಿರ್ದೆಸೆ ಮುಕ್ತ ಪರಿಸರಗಳನ್ನಾಗಿ ಪರಿವರ್ತಿಸುವ ಮೂಲಕ ಗ್ರಾಮೀಣ ಮಟ್ಟದಲ್ಲಿ ಸ್ವಯಂ ಆಡಳಿತ ಸಂಸ್ಥೆಗಳನ್ನು ಮತ್ತು ಗ್ರಾಮಸ್ಥರನ್ನು ಅಧಿಕಾರಯುಕ್ತರನ್ನಾಗಿ ಮಾಡಿ ಪ್ರಜಾಪ್ರಭುತ್ವದಲ್ಲಿ "ಪ್ರಜೆಗಳೇ ಪ್ರಭುಗಳು" ಎಂಬ ಆಶಯವನ್ನು ಕಾರ್ಯಗತಗೊಳಿಸುವ ಸಲುವಾಗಿ ಈ ಮಸೂದೆ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮಹತ್ತರ ಬದಲಾವಣೆಯನ್ನು ತರುತ್ತದೆ. ಪ್ರತಿ ಜನ ವಸತಿಯಿಂದ ಯೋಜನೆಗಳನ್ನು ರೂಪುಗೊಳಿಸಿ ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ ಕ್ರೋಢೀಕರಿಸಿ ರಾಜ್ಯ ಮಟ್ಟದಲ್ಲಿ ಪೂರ್ಣ ಸ್ವರೂಪ ನೀಡುವ

ಪರಿಣಾಮಕಾರಿ ಹೆಜ್ಜೆ ತಿದ್ದುಪಡಿ ಮೂಲಕ ಜಾರಿಗೆ ಬರಲಿದೆ.

ತನ್ಮೂಲಕ ಗ್ರಾಮೀಣ ಬದುಕಿನ ನೈಜ ಅಗತ್ಯಗಳನ್ನು ಪರಿಗಣಿಸುವ ವ್ಯವಸ್ಥೆ ಜಾರಿಗೆ ತರಲು ಈ ಕಾಯ್ದೆ ಸಾಧನವಾಗಿ ಕಾರ್ಯ ನಿರ್ವಹಿಸುತ್ತದೆ. ಈ ಉದ್ದೇಶ ಈಡೇರಿಕೆಗಾಗಿ ರಾಜ್ಯ ಹಣಕಾಸು ಆಯೋಗ ಶಿಫಾರಸ್ಸು ಮಾಡುವ ಅನುದಾನದಲ್ಲಿ ಪ್ರತಿಶತ 20 ರಷ್ಟು ಅನುದಾನವನ್ನು ಮುಕ್ತ ಅನುದಾನವಾಗಿ ನೀಡುವುದರ ಮೂಲಕ ಅವರ ಆಶಯಗಳನ್ನು ಈಡೇರಿಸಲು ಪ್ರಯತ್ನಿಸಲಾಗುವುದು.

ಪಂಚಾಯತಿ ನೀತಿಯ ನಿರ್ದೇಶನಾ ತತ್ವಗಳು ರಾಷ್ಟ್ರದಲ್ಲಿಯೇ ಮೊದಲ ಬಾರಿಗೆ ಈ ಮಸೂದೆಯ ಮೂಲಕ ಜಾರಿಗೆ ತರಲಾಗಿದೆ. ಸ್ಥಳೀಯ ಸಂಸ್ಥೆಗಳು ಶಾಸನಾತ್ಮಕ, ಕಾರ್ಯಕಾರಿ ಮತ್ತು ನ್ಯಾಯಿಕ ಕಾರ್ಯ ನಿರ್ವಹಣೆಯ ಅವಕಾಶವನ್ನು ಹೊಂದಿರಬೇಕೆಂದು ಪ್ರಯತ್ನಿಸಲಾಗಿದೆ.



ಹಲವಾರು ಹೊಸ ಪರಿಕಲ್ಪನೆಗಳನ್ನು ಜಾರಿಗೆ ತರುವ ಈ ಮಸೂದೆಯು ಗ್ರಾಮೀಣ ಬದುಕಿನಲ್ಲಿ ಸ್ವಾವಲಂಬಿ, ಪರಸ್ಪರ ಗೌರವ-ಘನತೆ ಕಾಪಾಡುವ ಸಮಾನತೆಯನ್ನು ಸುನಿಶ್ಚಿತಗೊಳಿಸುವ ಪಾರದರ್ಶಕ ವ್ಯವಸ್ಥೆಯನ್ನು ಪಾಲ್ಗೊಳ್ಳುವಿಕೆಯ ಮೂಲಕ ಅನುಷ್ಠಾನಗೊಳಿಸುವ ಮತ್ತು ಕುಂದು ಕೊರತೆ ನಿವಾರಣೆಗೆ ಸ್ಪಂದನಾಶೀಲ ಕಾರ್ಯವಿಧಾನ ಕಲ್ಪಿಸುವ ವ್ಯವಸ್ಥೆ ರೂಪಿಸಿ ಗ್ರಾಮೀಣ ಬದುಕಿನಲ್ಲಿ ಗುಣಾತ್ಮಕ ಬದಲಾವಣೆ ತರುವ ದಿಸೆಯಲ್ಲಿ ಈ ತಿದ್ದುಪಡಿ ಅಸ್ತ್ರವಾಗಿದೆ.

ಪಂಚಾಯತಿಗಳು ಶಾಸನಸಭೆಗಳಾಗಬೇಕು, ಕಾರ್ಯಾಂಗವಾಗಬೇಕು, ನ್ಯಾಯಾಂಗವಾಗಬೇಕು ಎಂಬ ಗಾಂಧೀಜಿಯವರ ಕಲ್ಪನೆಯಂತೆ ಪಂಚಾಯತಿಗಳಿಗೆ ನಿಯಮ ರೂಪಿಸುವ ಅಧಿಕಾರ, ಕಾರ್ಯಕ್ರಮಗಳ ಅನುಷ್ಠಾನಕ್ಕೆ ಅಗತ್ಯ ಕಾನೂನು ಬಲ ಸಮಾಜದಲ್ಲಿ ಸಮಾನತೆ ತರುವ ದಿಸೆಯಲ್ಲಿ ಸಕ್ರಿಯ ಕಾರ್ಯಕ್ರಮಗಳಿಗಾಗಿ ತಿದ್ದುಪಡಿಯಲ್ಲಿ ಅವಕಾಶ ಕಲ್ಪಿಸಲಾಗಿದೆ.



ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳ ಕರ್ತವ್ಯಗಳು ಮತ್ತು ಜವಾಬ್ದಾರಿಗಳನ್ನು ವ್ಯಾಖ್ಯಾನಿಸಲಾಗಿದೆ. ಗ್ರಾಮೀಣ ಭಾಗದಲ್ಲಿ ಸೌಹಾರ್ದಯುತ ವಾತಾವರಣ ನಿರ್ಮಿಸುವ ಮೂಲಕ ಗ್ರಾಮೀಣ ಪರಿಸರವನ್ನು ಸುಂದರಗೊಳಿಸುವ ಪ್ರಯತ್ನ ಈ ತಿದ್ದುಪಡಿಗಳಿಂದ ಕೈಗೂಡಲಿದೆ ಎಂಬ ಆಶಯ ಸರ್ಕಾರದ್ದಾಗಿದೆ.

ಪರಿಣಾಮಕಾರಿಯಾದ ಸೇವಾ ವ್ಯವಸ್ಥೆ, ಫಲಾನುಭವಿಗಳೇ ಕಾಮಗಾರಿಗಳನ್ನು ನಿರ್ವಹಿಸಲು ಅವಕಾಶ ಒದಗಿಸುವ ಸಾಮುದಾಯಿಕ ಗುತ್ತಿಗೆ ವ್ಯವಸ್ಥೆ, ಕಾಲಮಿತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳ ಪೂರ್ಣಗೊಳಿಸುವಿಕೆ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಆದಾಯದ ಮೂಲ ವಿಸ್ತರಿಸುವ ಕ್ರಮಗಳಿಗೆ ಈ ಮಸೂದೆ ನಾಂದಿ ಹಾಡಿದೆ.

ಗ್ರಾಮೀಣ ಪರಿಸರದಲ್ಲಿ ಸಾಮಾಜಿಕ ವ್ಯವಸ್ಥೆಯಲ್ಲಿ ಹಣಕಾಸಿನ ಋಣ ಭಾರ, ಬಡತನ ಅಥವಾ ಇತರೇ ಕಾರಣಗಳಿಗಾಗಿ ಆತ್ಮಹತ್ಯೆಯಂತಹ ಕಠಿಣ ನಿರ್ಧಾರ ಕೈಗೊಳ್ಳುವ ಮಾನಸಿಕ ಸ್ಥಿತಿಯಿಂದ ಪೀಡಿತರಾದ ರೈತರು ಮತ್ತು ಇತರರು ಸಾಮಾಜಿಕ, ಆರ್ಥಿಕ ಸ್ಥಿತಿಗಳ ಒತ್ತಡಕ್ಕೆ ಸಿಲುಕಿ ನಾಜೂಕಾದ ಪರಿಸ್ಥಿತಿ ಎದುರಿಸುವ ಸಂದರ್ಭದಲ್ಲಿ ಸೂಕ್ತವಾದಂತಹ ಆತ್ಮವಿಶ್ವಾಸ ಮತ್ತು ಧೈರ್ಯ ತುಂಬುವ ವಾತಾವರಣ ನಿರ್ಮಾಣ ಮಾಡುವ ಪ್ರಯತ್ನದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಈ ಮಸೂದೆ ನೆರವಾಗಲಿದೆ.



## ಜನವಸತಿ ಸಭೆ

ಜನವಸತಿ ಸಭೆ, ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳು ನಿರ್ವಹಿಸಬೇಕಾದ ಪ್ರಕಾರ್ಯಗಳನ್ನು ವಿಧೇಯಕದಲ್ಲಿ ವ್ಯಾಖ್ಯಾನಿಸಲಾಗಿದೆ. ಗ್ರಾಮೀಣ ಜನಪ್ರತಿನಿಧಿಗಳು ಸಾರ್ವಜನಿಕ ಜೀವನದಲ್ಲಿ ತರುವ ದಿಸೆಯಲ್ಲಿ ಸಕ್ರಿಯ ಕಾರ್ಯಕ್ರಮ ಉತ್ತಮ ಮೌಲ್ಯಗಳನ್ನು ಮತ್ತು ಪಾರದರ್ಶಕತೆಯನ್ನು ಅಳವಡಿಸಿಕೊಳ್ಳಬೇಕೆಂಬ ಕಾರಣದಿಂದ ತಿದ್ದುಪಡಿಯಲ್ಲಿ ಅವಕಾಶ ಕಲ್ಪಿಸಲಾಗಿದೆ.

ಆಸ್ತಿ ಮತ್ತು ಹೊಣೆಗಾರಿಕೆಗಳ ಪಟ್ಟಿಯನ್ನು ಘೋಷಣೆ ಮಾಡುವುದನ್ನು ಕಡ್ಡಾಯಗೊಳಿಸಲಾಗಿದೆ. ನಗರ ಪ್ರದೇಶ ಮತ್ತು ಗ್ರಾಮೀಣ ಪ್ರದೇಶದ ಯೋಜಿತ ಅಭಿವೃದ್ಧಿಯ ಪದ್ದತಿ ಅಥವಾ ವ್ಯವಸ್ಥೆಯಲ್ಲಿ ಇದ್ದ ಅಂತರವನ್ನು ನಿವಾರಿಸುವ ಸಲುವಾಗಿ ಗ್ರಾಮಗಳ ಅಭಿವೃದ್ಧಿಗಾಗಿ ಪಟ್ಟಣ ಮತ್ತು ನಗರ ಯೋಜನಾ ಪದ್ದತಿಯನ್ನು ಗ್ರಾಮಗಳಿಗೂ ವಿಸ್ತರಿಸುವ ಕ್ರಮಕ್ಕೆ ಇದೇ ಮೊದಲ ಬಾರಿ ಕೈ ಹಾಕಲಾಗಿದೆ. ಯೋಜಿತ ಅಭಿವೃದ್ಧಿಯ ಪರಿಣಾಮಕಾರಿ ಹೆಜ್ಜೆಗಳನ್ನು ಸ್ಪಷ್ಟವಾಗಿ ಗುರುತಿಸಲಾಗಿದೆ. ಈ ಅಭಿವೃದ್ಧಿಯ ನಿಯಮಗಳನ್ನು ಪಾಲಿಸಲು ಕಟ್ಟುನಿಟ್ಟಾದ ಅವಕಾಶಗಳನ್ನು ಕಾಯ್ದೆಯಲ್ಲಿ ಒದಗಿಸಲಾಗಿದೆ.

ಗ್ರಾಮೀಣ ಆಡಳಿತವನ್ನು ಸ್ಪಂದನಾಶೀಲ, ಪ್ರತಿಕ್ರಿಯಾತ್ಮಕ ಮತ್ತು ಪಾರದರ್ಶಕಗೊಳಿಸಲು ಕ್ರಮಗಳನ್ನು ಪಟ್ಟಿಮಾಡಿ ಕಾಯ್ದೆಯ ಸ್ವರೂಪ ನೀಡಲಾಗಿದೆ. ಹೊಸ ಹೊಸ ತಂತ್ರಜ್ಞಾನದ ಅವಿಷ್ಕಾರಗಳಿಂದ ಗ್ರಾಮೀಣ ಪರಿಸರವನ್ನು ವಂಚಿತಗೊಳಿಸುವ ಕ್ರಮಗಳನ್ನು ತಡೆಯಲು ಗ್ರಾಮೀಣ ಭಾಗದಲ್ಲಿ ಜ್ಞಾನ ನಿರ್ವಹಣೆಯ ಕ್ರಮಗಳನ್ನು ಯೋಜಿಸಲಾಗಿದೆ.

ಪಂಚಾಯತಿಯ ಆಡಳಿತವನ್ನು ವಿದ್ಯುನ್ಮಾನ ಆಧಾರಿತ ಆಡಳಿತವಾಗಿಸಲು ಗ್ರಾಮೀಣ ಯೋಜನಾ ಮಂಡಳಿಗಳಲ್ಲಿ ಮಾಹಿತಿ ತಂತ್ರಜ್ಞಾನ ತಂತ್ರಜ್ಞರನ್ನು ಸದಸ್ಯರನ್ನಾಗಿ ವಿಶೇಷ ಆಹ್ವಾನಿತರೆಂದು ಸೇರಿಸಿಕೊಳ್ಳುವ ಕ್ರಮ ಗ್ರಾಮೀಣ ಯೋಜನೆಗಳಿಗೆ ತಾಂತ್ರಿಕ ಜ್ಞಾನ ಒದಗಿಸುವ ಪ್ರಯತ್ನದಲ್ಲಿ ಮೊದಲ ದಾಪುಗಾಲನ್ನಿಟ್ಟಂತಾಗಿದೆ.

ಪಂಚಾಯತಿಗಳು ತನ್ನ ವ್ಯಾಪ್ತಿಯ ನಾಗರೀಕರ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸುವಲ್ಲಿ ಮುಂಚೂಣಿಯ ಪಾತ್ರ ವಹಿಸುವಂತೆ ಮತ್ತು ನಾಗರೀಕರ ಬೇಕು–ಬೇಡುಗಳಿಗೆ ಸ್ಪಂದಿಸಲು ಆಡಳಿತದ ವಿವಿಧ ಇಲಾಖೆಗಳ ನಡುವೆ ಸಂಪರ್ಕದ ಕೊಂಡಿಯಾಗಿ ಕಾರ್ಯ ನಿರ್ವಹಿಸುವಂತೆ ಶಾಸನಾತ್ಮಕ ಅವಕಾಶ ಒದಗಿಸಲಾಗಿದೆ.

ಗ್ರಾಮೀಣ ಪ್ರದೇಶದಲ್ಲಿ ಅಸ್ಪೃಶ್ಯತೆ ಆಚರಣೆ, ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಮತ್ತಿತರ ಅಮಾನವೀಯ ಕೃತ್ಯಗಳಿಗೆ ಪರಿಹಾರ ಒದಗಿಸುವ ಜವಾಬ್ದಾರಿ ಮತ್ತು ಹೊಣೆಗಾರಿಕೆಯನ್ನು ಪಂಚಾಯತಿಗಳಿಗೆ ನೀಡಲಾಗಿದೆ. ಮಾನವ ಘನತೆಗೆ ಕಳಂಕ ತರುವ ಪಾರಂಪರಿಕ, ಸಾಮಾಜಿಕ ಮತ್ತು ಧಾರ್ಮಿಕ ಪದ್ಧತಿಗಳನ್ನು ಪ್ರತಿಬಂಧಿಸಲು ಪಂಚಾಯತಿಗಳಿಗೆ ಅಧಿಕಾರ ನೀಡಲಾಗಿದೆ.

ಶುದ್ಧ ಕುಡಿಯುವ ನೀರು, ಶೌಚಾಲಯ, ನೈರ್ಮಲ್ಯ ಮತ್ತು ಆರೋಗ್ಯ ವ್ಯವಸ್ಥೆಯನ್ನು ಆದ್ಯತಾ ವಲಯವೆಂದು ಪರಿಗಣಿಸಿ ಆ ಸೌಲಭ್ಯಗಳನ್ನು ಒದಗಿಸಲು ಶಾಸನಾತ್ಮಕ ಅಧಿಕಾರವನ್ನು ಅನುಷ್ಠಾನಗೊಳಿಸಲು ಮೊದಲ ಬಾರಿಗೆ ಪ್ರಯತ್ನಿಸಲಾಗಿದೆ.

ಗ್ರಾಮೀಣ ಕ್ರೀಡೆಗಳನ್ನು, ಸಂಸ್ಕೃತಿಯನ್ನು ಪ್ರೋತ್ಸಾಹಿಸುವ ಮತ್ತು ಪೋಷಿಸುವ ಚಟುವಟಿಕೆಗಳಿಗೆ ಉತ್ತೇಜನ ನೀಡುವ ಕ್ರಮಗಳನ್ನು ಕೈಗೊಳ್ಳಲಾಗಿದೆ. ಈ ತಿದ್ದುಪಡಿಗಳ ಮೂಲಕ




ಗ್ರಾಮೀಣ ಜನರನ್ನು ಅಧಿಕಾರಯುಕ್ತರನ್ನಾಗಿ ಮಾಡುವ ಮತ್ತು ಧ್ವನಿಯಿಲ್ಲದ ಸಣ್ಣ ಸಣ್ಣ ಜನವಸತಿಗಳ ಗ್ರಾಮೀಣರಿಗೂ ಕೂಡಾ ಜನವಸತಿ ಸಭೆಯ ಹೊಸ ಪ್ರಯೋಗ ಮಾಡುವ ಮೂಲಕ ಮತ್ತು ವಾರ್ಡ್ ಸಭೆಗಳ ಮೂಲಕ ಹೆಚ್ಚಿನ ಧ್ವನಿ ಒದಗಿಸುವ, ಗ್ರಾಮಸಭೆಗಳನ್ನು ಬಲಗೊಳಿಸುವ ಉದ್ದೇಶ ಈಡೇರಿಕೆಗೆ ಇದು ಶ್ರೇಷ್ಠ ಅಸ್ತ್ರವಾಗಲಿದೆ.

ಈ ಕೆಲಸವನ್ನು ನಾವು ಮೊದಲೇ ಮಾಡಬೇಕಿತ್ತು. ದೇಶಕ್ಕೆ ಸ್ವಾತಂತ್ರ್ಯ ಬಂದ ಸಮಯದಲ್ಲಿ ನಾವು ಬೃಹತ್ ಕೈಗಾರಿಕೆಗಳು, ಬೃಹತ್ ನೀರಾವರಿ ಯೋಜನೆಗಳಿಗೆ ಆದ್ಯತೆ ಕೊಟ್ಟೆವು. ಇದರಿಂದ ನಗರಗಳು ಬೆಳೆದವು. ಹಳ್ಳಿಗಳು ಮೂಲೆಗುಂಪಾದವು. ಈಗ ನಗರಗಳಿಂದ ತಲೆದೋರಿರುವ ಸಮಸ್ಯೆಗಳಿಂದ ತತ್ತರಿಸಿ ಹೋಗುತ್ತಿದ್ದೇವೆ. ದೇಶದ ರಾಜಧಾನಿಯಲ್ಲೇ ಈಗ ಉಸಿರಾಡುವ ಗಾಳಿಯೂ ಕಲುಷಿತಗೊಂಡಿದೆ. ಭಾರತ ಸರ್ವೋಚ್ಚ ನ್ಯಾಯಾಲಯವೇ ಮಧ್ಯ ಪ್ರವೇಶಿಸಿ, ದೆಹಲಿಯಲ್ಲಿ ಡೀಸೆಲ್ ಕಾರುಗಳಿಗೆ ಕಡಿವಾಣ ಹಾಕಲು ನಿರ್ದೇಶನ ನೀಡಿದೆ. ಇದಕ್ಕೆ ನಮ್ಮ ತಪ್ಪು ನೀತಿಗಳೂ, ದೂರದೃಷ್ಟಿ ಕೊರತೆಯ ಯೋಜನೆಗಳೇ ಕಾರಣ ಎಂದು ಹೇಳುವ ಅಗತ್ಯವಿಲ್ಲ.

## ಹಳ್ಳಿಗಳನ್ನು ಮತ್ತೆ ಕಟ್ಟೋಣ

ಈಗಲೂ ಕಾಲ ಮಿಂಚಿಲ್ಲ. ಹಳ್ಳಿಗಳನ್ನು ಮತ್ತೆ ಕಟ್ಟೋಣ. ಹಳ್ಳಿಯ ಬೆಳವಣಿಗೆಯಲ್ಲಿ ದೇಶದ ಬೆಳವಣಿಗೆಯನ್ನು ನೋಡೋಣ. ನಮ್ಮ ಎಲ್ಲಾ ತಜ್ಞರೂ ನಗರಗಳಲ್ಲಿ ಬೆಳೆದವರು. ಅವರಿಗೆ ಹಳ್ಳಿಯ ಮೂಲಕ ದೇಶದ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿ ಕಾಣುವ ದೃಷ್ಟಿಕೋನವೇ ಇಲ್ಲ.

ಈ ಹಿನ್ನೆಲೆಯಲ್ಲಿ ಶ್ರೀ ಸಿದ್ದರಾಮಯ್ಯ ಸರ್ಕಾರ ಗ್ರಾಮೀಣ ಆಡಳಿತಕ್ಕೆ ಬೇಕಾದ ಪ್ರತ್ಯೇಕ ಅಧಿಕಾರಿ ಪಡೆಯನ್ನೇ ಕಟ್ಟುವ ಅಗತ್ಯವಿದೆ. ಶ್ರೀ ಸಿದ್ದರಾಮಯ್ಯ ಅವರಿಗೆ ಗ್ರಾಮೀಣ ಬದುಕಿನ ಜ್ಞಾನ ಚೆನ್ನಾಗಿರುವುದರಿಂದ ಅವರು ಈ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಬಹುದು.

ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತಿಗಳಲ್ಲಿ ಎಲ್ಲಾ ಆಡಳಿತ ಕನ್ನಡದಲ್ಲೇ ನಡೆಯಬೇಕು. ಹಳ್ಳಿಯ ಜನರಿಗೆ ಕನ್ನಡ ಹೊರತುಪಡಿಸಿದರೆ ಬೇರೆ ಭಾಷೆಯೇ ಬರುವುದಿಲ್ಲ. ಜನರ ಭಾಷೆಯಲ್ಲಿ ಆಡಳಿತ ನಡೆದರೆ ಪಾರದರ್ಶಕತೆ ತಂತಾನೇ ಬರುತ್ತದೆ. ಜಿಲ್ಲಾ ಪಂಚಾಯತ್ ವ್ಯವಸ್ಥೆ ಬರುವುದಕ್ಕೆ ಮೊದಲೇ ಭ್ರಷ್ಟಾಚಾರ ಬೇರೂರಿತ್ತು ಎಂಬುದು ನಿಜ.

ಹಳ್ಳಿಯ ಜನರಿಗೆ ಆಡಳಿತದ ಅನುಭವವಿಲ್ಲ. ಅವರಿಗೆ ಅಧಿಕಾರ ಕೊಟ್ಟರೆ ಎಲ್ಲಾ ಕಡೆ ಕೊಲೆ ಸುಲಿಗೆ ನಡೆಯುತ್ತದೆ ಎಂದು ಭಾವಿಸಿದ ದಿನಗಳೂ ಇತ್ತು. ಆದರೆ ಹಳ್ಳಿಯ ಜನ ಉತ್ತಮ ಆಡಳಿತಗಾರರು ಎಂಬುದನ್ನು ತೋರಿಸಿಕೊಟ್ಟಿದ್ದಾರೆ.

ಅತ್ಯಾಧುನಿಕ ತಂತ್ರಜ್ಞಾನ ಮತ್ತು ವೈಜ್ಞಾನಿಕ ಬೆಳವಣಿಗೆಯನ್ನು ತಿಳಿದುಕೊಳ್ಳುವ ಮುಕ್ತ ಮನಸ್ಸು ಹಳ್ಳಿಯ ಜನರಿಗಿದೆ. ಪ್ಲಾಸ್ಟಿಕ್ ಬಳಕೆ, ಕಂಪ್ಯೂಟರ್, ಮೊಬೈಲ್ ಬಳಕೆಯನ್ನು ಹಳ್ಳಿಯ ಜನರಿಗೆ ಯಾರೂ ಹೇಳಿಕೊಡಲಿಲ್ಲ. ಪ್ರತಿಯೊಂದು ಹಳ್ಳಿಯಲ್ಲೂ ಈಗ ಮೊಬೈಲ್ ಬಳಕೆಯನ್ನು ನೋಡಿದರೆ ಸಂಪರ್ಕ ಮಾಧ್ಯಮಗಳನ್ನು ಅಳವಡಿಸುವುದು ಕಷ್ಟವೇನಿಲ್ಲ. ಕಾಗದ ರಹಿತ ಆಡಳಿತ ನಡೆಸುವುದು ಹಿಂದೆ ದೂರದ ಮಾತಾಗಿತ್ತು. ಈಗ ಅದು ಸಾಕಾರಗೊಂಡಿದೆ. ದೆಹಲಿಯಲ್ಲಿ ನಡೆದ ಘಟನೆ ಕ್ಷಣ ಮಾತ್ರದಲ್ಲಿ ಹಳ್ಳಿಗಳನ್ನು ತಲುಪುವ ಸಂಪರ್ಕ ಜಾಲ ಇರುವಾಗ ಅಭಿವೃದ್ಧಿಯ ವೇಗ ಹೆಚ್ಚಿಸುವುದು ಕಷ್ಟವೇ ?

## ನಗರದ ಜನರಿಗೊಂದು ಸವಾಲ್

ಹಳ್ಳಿಯ ಅಭಿವೃದ್ಧಿಗೆ ಸರ್ಕಾರವೇ ಎಲ್ಲವನ್ನೂ ಕೈಗೊಳ್ಳಬೇಕೆಂದು ಬಯಸುವುದು ಸರಿಯಾದ



ಕ್ರಮವಲ್ಲ. ಮಾಜಿ ರಾಷ್ಟ್ರಪತಿ ಎ ಪಿ ಜೆ ಅಬ್ದುಲ್ ಕಲಾಂ ಅವರು ಬೆಂಗಳೂರಿನಲ್ಲಿ ಶಾಸಕರನ್ನುದ್ದೇಶಿಸಿ ಮಾತನಾಡಿದ ಸಂದರ್ಭದಲ್ಲಿ 'ಪುರ' ಯೋಜನೆಯನ್ನು ಜಾರಿಗೆ ತರಲು ಹೇಳಿದರು.

ಹಳ್ಳಿಗಳಲ್ಲಿ ನಗರದ ಸವಲತ್ತುಗಳನ್ನು ಕಲ್ಪಿಸಿಕೊಟ್ಟಲ್ಲಿ ಹಳ್ಳಿಯ ಜನ ನಗರಕ್ಕೆ ವಲಸೆ ಬರುವುದಿಲ್ಲ ಎಂದು ಹೇಳಿದ್ದರು. ಆಗಿನ ಸರ್ಕಾರವು ಕಲಾಂ ಅವರ ಮಾತುಗಳಿಗೆ ಹೆಚ್ಚಿನ ಮಹತ್ವ ನೀಡಲಿಲ್ಲ. ಇದೀಗ ಶ್ರೀ ಸಿದ್ದರಾಮಯ್ಯ ಅವರ ಸರ್ಕಾರ ಶ್ರೀ ಕಲಾಂರವರ ಕನಸು ನನಸು ಮಾಡಲು ದಿಟ್ಟ ಹೆಜ್ಜೆಗಳನ್ನಿರಿಸಿದೆ. ಇದಕ್ಕೆ ಈಗ ನಗರದ ಪ್ರಜ್ಞಾವಂತರೂ ಕೈ ಜೋಡಿಸುವುದೂ ಅಗತ್ಯ. ಪ್ರತಿ ಶನಿವಾರ ಮತ್ತು ಭಾನುವಾರ ರಜೆಯನ್ನು ಅನುಭವಿಸುವ ನಗರದ ಜನ ಮಾಲ್, ಮಲ್ಟಿಪ್ಲೆಕ್ಸ್‌ಗಳಲ್ಲಿ ಕಾಲ ಕಳೆಯುವ ಬದಲು ಹೆಂಡತಿ ಮತ್ತು ಮಕ್ಕಳನ್ನು ಕರೆದುಕೊಂಡು ತಮಗೆ ತಿಳಿದಿರುವ ಹಳ್ಳಿಗೆ ಹೋಗಿ ಅಲ್ಲಿಯ ಜನರೊಂದಿಗೆ ಕಷ್ಟ ಸುಖ ಹಂಚಿಕೊಂಡರೆ ಸಾಕು, ನಗರದಲ್ಲಿ ಪರಿಸರ ಮಾಲಿನ್ಯ ಕಡಿಮೆ ಯಾಗುವುದಲ್ಲದೆ ನಗರದ ಜನರ ಆರೋಗ್ಯ ಉತ್ತಮಗೊಳ್ಳುತ್ತದೆ.

ಹಳ್ಳಿಗೆ ಹೋಗಿ ನೀವೇನೂ ಹೊಲದಲ್ಲಿ ಕಳೆ ಕೀಳಬೇಕಿಲ್ಲ. ಹಳ್ಳಿಯ ಮಕ್ಕಳಿಗೆ ಪಾಠ ಮಾಡಿ. ಅವರಿಗೆ ಗಣಿತ ಮತ್ತು ಇಂಗ್ಲೀಷ್ ಹೇಳಿಕೊಡಿ. ಕುಡಿಯುವ ನೀರು, ಒಳಚರಂಡಿ ವ್ಯವಸ್ಥೆ ಉತ್ತಮಪಡಿಸಲು ನೆರವು ನೀಡಿ. ನಗರಗಳಲ್ಲಿರುವ ವೈದ್ಯರು ವಾರದಲ್ಲಿ ಒಂದು ದಿನ ಹಳ್ಳಿಗೆ ಹೋಗಿ ಅಲ್ಲಿಯ ಜನರಿಗೆ ಚಿಕಿತ್ಸೆ ನೀಡಿದರೆ ಸಾಕು. ಚಿತ್ರಣ ಬದಲಾಗುತ್ತದೆ. ನೀವೇನೂ ಪುಕ್ಕಟೆ ಸೇವೆ ಮಾಡಬೇಕಿಲ್ಲ. ಹಳ್ಳಿಯ ಜನ ಉದಾರಿಗಳು. ನಿಮಗೆ ಹಣ ನೀಡುತ್ತಾರೆ. ಇಲ್ಲವೆ ತಾವು ಬೆಳೆದ ದವಸಧಾನ್ಯಗಳನ್ನು ನೀಡುತ್ತಾರೆ. ಸಾವಯವ ಕೃಷಿಗೆ ಬೆಂಬಲ ನೀಡಿ. ರೈತರಿಗೆ ಅನುಕೂಲವಾಗುತ್ತದೆ. ಆತ್ಮಹತ್ಯೆಯನ್ನು ತಪ್ಪಿಸಬಹುದು. ಹಳ್ಳಿಯ ಮಕ್ಕಳಿಗೆ ಉತ್ತಮ ಶಿಕ್ಷಣ ಮತ್ತು ಆರೋಗ್ಯ ದೊರತರೆ ಅವರು ನಗರಕ್ಕೆ ಬರುವುದಿಲ್ಲ. ಕೈಗಾರಿಕೋದ್ಯಮಿಗಳು ಪ್ರತಿ ಭಾನುವಾರ ಹಳ್ಳಿಯ ಜನರಿಗೆ ಉಚಿತ ತರಬೇತಿ ನೀಡಿದರೆ ಕೃಷಿ ಚಟುವಟಿಕೆ ಇಲ್ಲದ ದಿನಗಳಲ್ಲಿ ಅವರು ಕೈಗಾರಿಕೆಗಳಲ್ಲಿ ಕೆಲಸ ಮಾಡಬಹುದು. ನಗರ-ಹಳ್ಳಿಯ ಜನರ ನಡುವೆ ಭಾವನಾತ್ಮಕ ಸಂಬಂಧ ಬೆಳೆಯಲು ಶ್ರೀ ಸಿದ್ದರಾಮಯ್ಯ ಹಾಗೂ ಶ್ರೀ ಎಚ್. ಕೆ. ಪಾಟೀಲ ಅವರು ಈಗ ವೇದಿಕೆ ಕಲ್ಪಿಸಿದ್ದಾರೆ. ಇದನ್ನು ಸದುಪಯೋಗಪಡಿಸಿ ಕೊಳ್ಳುವುದು ನಗರದ ಜನರಿಗೆ ಸೇರಿದ ವಿಷಯ.

ಮಂಡ್ಯ ಪತ್ರಕರ್ತರ ಸಂಘ, ಮಂಡ್ಯ ಜಿಲ್ಲೆ ಪ್ರತಿಯೊಂದು ತಾಲೂಕಿನಲ್ಲಿ ಒಂದು ಗ್ರಾಮವನ್ನು ದತ್ತು ತೆಗೆದುಕೊಂಡು ಅದನ್ನು ಅಭಿವೃದ್ಧಿಪಡಿಸುವ ಕೆಲಸ ಕೈಗೊಂಡಿದೆ. ಈ ಕೆಲಸವನ್ನು ನಗರದಲ್ಲಿರುವ ಎಲ್ಲಾ ಸಂಘ-ಸಂಸ್ಥೆಗಳೂ ಕೈಗೊಳ್ಳಬಹುದು.

ಪ್ರತಿ ಗ್ರಾಮಕ್ಕೂ ಸೇರಿದ ನೂರಾರು ಜನರು, ವಿದ್ಯಾವಂತರಾಗಿ ತಮ್ಮ ಹುಟ್ಟೂರನ್ನು ಮರೆತು ನಗರಗಳಲ್ಲಿ ಮೋಜು ಮಾಡುತ್ತಿದ್ದಾರೆ. ಹುಟ್ಟೂರನ್ನು ಮರೆಯುವುದು ಎಂದರೆ ಹೆತ್ತ ತಾಯಿಯನ್ನೇ ಮರೆತಂತೆ.

ಮತ್ತೆ ಕೆಲವರಿಗೆ ಹಳ್ಳಿಯಲ್ಲಿ ಏನಾದರೂ ಮಾಡಬೇಕೆಂಬ ತುಡಿತವಿದೆ. ಹಳ್ಳಿಯ ಜನ ತಮ್ಮ ಗ್ರಾಮಕ್ಕೆ ಸೇರಿದವರನ್ನು ಗುರುತಿಸಿ ಅವರನ್ನು ಕರೆಸಿ ಮಾತುಕತೆ ನಡೆಸಬೇಕು. ಪ್ರತಿ ಗ್ರಾಮಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಪೋರ್ಟಲ್ ಮಾಡಬಹುದು. ಗ್ರಾಮದಲ್ಲಾಗುವ ಪ್ರತಿಯೊಂದು ಬೆಳವಣಿಗೆಯನ್ನೂ ಇಂಟರ್‌ನೆಟ್ ಜಾಲದ ಮೂಲಕ ಎಲ್ಲರಿಗೂ ತಿಳಿಸಬಹುದು. ಅದೇ ರೀತಿ ಪ್ರತಿಯೊಬ್ಬರೂ ತಮ್ಮ ಗ್ರಾಮದ ಅಭಿವೃದ್ಧಿಯಲ್ಲಿ ಸಕ್ರಿಯ ಪಾತ್ರವಹಿಸಬಹುದು. ಶ್ರೀ ಸಿದ್ದರಾಮಯ್ಯ ಹಾಗೂ ಶ್ರೀ ಎಚ್. ಕೆ. ಪಾಟೀಲ ಅವರು ಈಗ ಈ ಸಾಮಾಜಿಕ ಬದಲಾವಣೆಗೆ ವೇದಿಕೆಯನ್ನು ಸಿದ್ಧಪಡಿಸಿಕೊಟ್ಟಿದ್ದಾರೆ.

ಲೇಖನ

# ಕೆರೆ, ಕಲ್ಯಾಣಿ, ಹಳ್ಳಗಳ ಅಭಿವೃದ್ಧಿಗೆ ಭೈರಾಗಾನಹಳ್ಳಿ ಗ್ರಾಮಸ್ಥರ ಪಣ

– ಪ್ರಶಾಂತ್.ಎನ್

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಅಂತರ್ಜಲದ ಮಟ್ಟ ದಿನೇದಿನೇ ಕುಸಿದು, ಜನ ಮತ್ತು ಜಾನುವಾರುಗಳ ಕುಡಿಯುವ ನೀರಿಗೆ ಪರದಾಡುವಂತಾಗಿದೆ. ಹನಿಹನಿ ನೀರಿಗೂ ಆಹಾಕಾರ ಉಂಟಾಗುತ್ತಿದೆ. ಇದೀಗ ಬಿಸಿಲು ಶುರುವಾಗಿದೆ. ಮತ್ತೆ ನೀರಿನ ಸಮಸ್ಯೆ ಜನರನ್ನು ಕಾಡಲಿದೆ. ಇಷ್ಟೇ ಅಲ್ಲದೇ ನೀರಿನಲ್ಲಿ ಫ್ಲೋರೈಡ್ ಅಂಶ ಹೆಚ್ಚುತ್ತಿರುವ ಕಾರಣ, ಜನರಲ್ಲಿ ಮೂಳೆ ಸವೆತ ಮತ್ತು ದಂತಕ್ಷಯಗಳಂತಹ ತೊಂದರೆಗಳು ಹೆಚ್ಚುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ಶಿಡ್ಲಘಟ್ಟ ತಾಲ್ಲೂಕಿನ ಈ. ತಿಮ್ಮಸಂದ್ರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಭೈರಗಾನಹಳ್ಳಿ ಗ್ರಾಮಸ್ಥರ ಸಾಧನೆ, ಇಡೀ ಜಿಲ್ಲೆಗೆ ಒಂದು ಮಾದರಿಯೇ ಸರಿ.



ನರೇಗಾ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಗ್ರಾಮ ಪಂಚಾಯತಿಯು ಗಮನ ಸೆಳೆಯು ವಂತಹ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲಾಗಿದೆ.

ಭೈರಗಾನಹಳ್ಳಿ ಗ್ರಾಮದಲ್ಲಿ ಸುಮಾರು 86 ಕುಟುಂಬಗಳಿದ್ದು, ಜಿಲ್ಲೆಯಲ್ಲಿಯೇ ಮಾದರಿ ಗ್ರಾಮ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಗ್ರಾಮದಲ್ಲಿ ಸಮಗ್ರ ಅಭಿವೃದ್ಧಿ ಸಾಧಿಸಬೇಕೆಂಬ ಉದ್ದೇಶದಿಂದ ಗ್ರಾಮದ ಎಲ್ಲಾ ಕುಟುಂಬಗಳು ಸೇರಿ "ಗ್ರಾಮ ಸಮಿತಿ"ಯನ್ನು ರಚಿಸಿಕೊಂಡಿದ್ದಾರೆ. ಗ್ರಾಮದಲ್ಲಿ 18 ವರ್ಷ ಮೇಲ್ಪಟ್ಟ ಪ್ರತಿಯೊಂದು ಕುಟುಂಬದ ಇಬ್ಬರು (ಪುರುಷರು – ಮಹಿಳೆಯರು) ಸದಸ್ಯರಾಗಿ ಸೇವೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಗ್ರಾಮ ಸಮಿತಿಯು ಊರಿಗೆ ಸೇರಿದ ದೇವಸ್ಥಾನ, ಗುಂಡು ತೋಪು, ಗೋಮಾಳ, ಗೋಕುಂಟೆಗಳು, ಕಲ್ಯಾಣಿಗಳ ನಿರ್ಮಾಣ, ಗ್ರಾಮದ ನೈರ್ಮಲೀಕರಣ ಕುರಿತು ಯೋಜನೆ ತಯಾರಿಸಿ, ಅವುಗಳ ಅನುಷ್ಠಾನದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದೆ. ಅಷ್ಟೆ ಅಲ್ಲದೆ ಗ್ರಾಮಕ್ಕೆ ಸೇರಿದ ಕೆರೆಯ ಸುಮಾರು ಮೂರು ಎಕರೆ ಒತ್ತುವರಿಯನ್ನು ಕೂಡ ಸಮಿತಿಯು ತೆರುವುಗೊಳಿಸುವಲ್ಲಿ ಸಫಲವಾಗಿದೆ.

ಜಿಲ್ಲಾ ಐ.ಇ.ಸಿ ಸಂಯೋಜಕರು, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ



## ಗ್ರಾಮದ ಸರ್ವಾಂಗೀಣ ಅಭಿವೃದ್ಧಿಗಾಗಿ ಯೋಜನೆ ತಯಾರಿ

ಗ್ರಾಮದಲ್ಲಿ ಮೂಲಭೂತವಾಗಿ ಕೈಗೊಳ್ಳ ಬೇಕಾಗಿರುವ ಕಾಮಗಾರಿಗಳ ಕುರಿತು ಗ್ರಾಮ ಸಮಿತಿಯಲ್ಲಿ ಚರ್ಚೆ ನಡೆಸಿ ಸಲಹೆ ಹಾಗೂ ಸಲ್ಲಿಸಿರುವ ಪ್ರಸ್ತಾವನೆಗಳನ್ನು ಗ್ರಾಮ ಪಂಚಾಯಿತಿಯ ಮೂಲಕ ನಡೆಯುವ ಗ್ರಾಮಸಭೆಗಳಲ್ಲಿ ಮಂಡಿಸಿ ಸರ್ವಾನುಮತದಿಂದ ಅನುಮೋದನೆ ಪಡೆದುಕೊಂಡು ಅಭಿವೃದ್ಧಿ ಕಾಮಗಾರಿಗಳನ್ನು ನಡೆಸಲಾಗುತ್ತಿದೆ.

## ಉದ್ಯೋಗ ಖಾತರಿ ಯೋಜನೆಯ ಸದ್ಬಳಕೆ

ಉದ್ಯೋಗ ಖಾತರಿ ಯೋಜನೆಯಡಿ ಗ್ರಾಮಾಭಿವೃದ್ಧಿಗಾಗಿ ಗ್ರಾಮ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯಲ್ಲಿ 6 ಮಂದಿ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದಾರೆ. ಗ್ರಾಮದಲ್ಲಿ 18 ವರ್ಷ ಮೇಲ್ಪಟ್ಟ ಪ್ರತಿಯೊಂದು ಕುಟುಂಬದ ಸದಸ್ಯರಿಗೆ ಸೇವೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಈಗಾಗಲೇ, ಕಳೆದ 2012ನೇ ಸಾಲಿನಿಂದ ಇಲ್ಲಿಯವರೆಗೆ ಸುಮಾರು 15 ಲಕ್ಷ ಮೌಲ್ಯದ ಕಾಮಗಾರಿಗಳನ್ನು ಅನುಷ್ಠಾನ ಮಾಡಲಾಗಿದೆ. ಭೈರಗಾನಹಳ್ಳಿ ಗ್ರಾಮದಲ್ಲಿ ಒಟ್ಟು ಮನೆಗಳ ಪೈಕಿ ಶೇ. 50 ಮನೆಗಳಿಗೆ ಶೌಚಾಲಯ, 22 ಮಂದಿ ವಸತಿಹೀನರಿಗೆ ಮನೆ ನಿರ್ಮಾಣ ಹಾಗೂ ಪ್ರಾಚೀನ ಹಳ್ಳವನ್ನು ಅಭಿವೃದ್ಧಿಪಡಿಸಿ ಕಲ್ಯಾಣಿಗಳ ನಿರ್ಮಾಣ, ಗೋಮಾಳದಲ್ಲಿ ಸಸಿಗಳನ್ನು ನೆಡುವ ಮೂಲಕ ಗ್ರಾಮವನ್ನು ಹಸಿರುಮಯ ಮಾಡ ಲಾಗುತ್ತಿದೆ.

## ಮಳೆ ನೀರು ಮನೆಗೆ ನುಗ್ಗಲ್ಲ

ಮಳೆಗಾಲದಲ್ಲಿ ಬೆಟ್ಟದಿಂದ ಹರಿಯುವ ನೀರು ಮನೆಗಳಿಗೆ ನುಗ್ಗುವುದನ್ನು ತಡೆಗಟ್ಟಲು ತಡೆಗೋಡೆ ನಿರ್ಮಾಣ ಮಾಡಲಾಗಿದ್ದು ಇದರಿಂದ ಗೋಕುಂಟೆಗೆ ನೀರು ಹರಿಸಿ ನಂತರ ಕಾಲುವೆಗಳ ಮುಖಾಂತರ ಕೆರೆಗೆ ನೀರು ಹರಿಸುವ ಮೂಲಕ ಅಂತರ್ಜಲ ಮಟ್ಟವನ್ನು ವೃದ್ಧಿಗೊಳಿಸಲು ಆದ್ಯತೆ ನೀಡಲಾಗಿದೆ.

## ಏನಿದು ಹಳ್ಳದ ಮಹಿಮೆ?

ಗ್ರಾಮದಲ್ಲಿ ಪ್ರಾಚೀನ ಕಾಲದಿಂದ ನಿರ್ಮಿಸಿರುವ ಹಳ್ಳ ಜನರ ಪಾಲಿಗೆ ಸಂಜೀವಿನಿಯಾಗಿದೆ. ಹಳ್ಳದ ನೀರು ಸಂರಕ್ಷಣೆ ಮಾಡುವ ನಿಟ್ಟಿನಲ್ಲಿ ಗ್ರಾಮ ಪಂಚಾಯತಿ ಆಡಳಿತದ ನೆರವಿನೊಂದಿಗೆ ಸಮಿತಿಯು ಕಲ್ಯಾಣಿಯನ್ನು ನಿರ್ಮಿಸಿದೆ. ಈ ಮೂಲಕ ಹಳ್ಳದ ನೀರನ್ನು ಸಂರಕ್ಷಿಸಿ ಜನರ ನೀರಿನ ದಾಹವನ್ನು ಇಂಗಿಸುತ್ತಿದೆ.

## ಗ್ರಾಮ ಪಂಚಾಯತಿ ಬೆಂಬಲ ಶ್ಲಾಘನೀಯ

ಗ್ರಾಮ ಪಂಚಾಯತಿಯ ಅಧ್ಯಕ್ಷ ದೇವರಾಜ್ ಹಾಗೂ ಗ್ರಾಮ ಪಂಚಾಯತಿಯ ಸದಸ್ಯರಾದ ಭೈರಾರೆಡ್ಡಿ, ಶಬಾನಾ ಅಜ್ಮಿ, ಪಿಳ್ಳನಾರಾಯಣಪ್ಪ ಹಾಗೂ ಪಿಡಿಓ ತನ್ವೀರ್ ಅಹಮದ್ ಅವರ ವಿಶೇಷ ಶ್ರಮ ಮತ್ತು ಕಾಳಜಿ, ಈ ಗ್ರಾಮದಲ್ಲಿ ವಿವಿಧ ಗ್ರಾಮಾಭಿವೃದ್ಧಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಗೊಳಿಸಿರುವುದು ಶ್ಲಾಘನೀಯ. ಭೈರಗಾನಹಳ್ಳಿ ಗ್ರಾಮದ ಜೊತೆಗೆ ಇನ್ನುಳಿದ ಎಲ್ಲಾ ಗ್ರಾಮಗಳಲ್ಲೂ ನೀರಿನ ಮೂಲಗಳನ್ನು ಸಂರಕ್ಷಿಸುವ ಕೆಲಸಗಳನ್ನು ಗ್ರಾಮ ಪಂಚಾಯತಿ ಕೈಗೆತ್ತಿಕೊಳ್ಳಲು ಮುಂದಾಗಿದೆ. ಕೆರೆ-ಕುಂಟೆಗಳಲ್ಲಿ ಹೂಳು ಎತ್ತುವುದು, ಸಂಪೂರ್ಣವಾಗಿ ಶೌಚಾಲಯಗಳ ನಿರ್ಮಾಣ, ಗೋಮಾಳ ರಕ್ಷಣೆಗಾಗಿ ಸಸಿಗಳನ್ನು ನೆಡುವ ಮೂಲಕ ಅರಣ್ಯೀಕರಣಕ್ಕೆ ಒತ್ತು ನೀಡಲು ಗ್ರಾಮ ಪಂಚಾಯತಿಗಳಿಗೆ ಅವಶ್ಯವಿರುವ ಸಹಕಾರವನ್ನು ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯಿತಿಯ ಕಾರ್ಯನಿರ್ವಾಹಣಾಧಿಕಾರಿಯವರು ನೀಡುತ್ತಿದ್ದಾರೆ

ನರೇಗಾ ಯೋಜನೆಯನ್ನು ಪರಿಣಾಮ ಕಾರಿಯಾಗಿ ಅನುಷ್ಠಾನಗೊಳಿಸುವ ಸಲುವಾಗಿ ಎಫ್.ಇ.ಎಸ್. ಎಂಬ ಸರ್ಕಾರೇತರ ಸಂಸ್ಥೆ ಅಗತ್ಯ ಸಹಕಾರ ನೀಡುತ್ತಿದೆ. ಗ್ರಾಮ ಪಂಚಾಯತಿಯು ಜಿಲ್ಲಾಡಳಿತ ಗಮನ ಸೆಳೆಯುವಂತಹ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲಾಗಿದೆ ಹಾಗೂ ಬಹುಕಾಲ ಬಾಳಿಕೆ ಬರುವಂತಹ ಆಸ್ತಿಗಳ ಸೃಜನೆ ಮಾಡಿದಂತಾಗಿದೆ.

ಲೇಖನ

# ಪಂಚಾಯತ ಸಂಸ್ಥೆಗಳ ಆರ್ಥಿಕ ಬಲವರ್ಧನೆಗೆ ನೂತನ ಗ್ರಾಮಸ್ವರಾಜ್ಯ ಕಾಯ್ದೆ ಮಾದರಿ



ಬಂಡೆಪ್ಪ ಜಿ. ತೇಲಿ

ನೂತನವಾಗಿ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದಿರುವ ಗ್ರಾಮಸ್ವರಾಜ್ಯ ಕಾಯ್ದೆಯು ನೈಜವಾಗಿ ಗ್ರಾಮಗಳ ಶಕ್ತಿಯನ್ನು ವೃದ್ಧಿಸಲು ಮತ್ತು ಗ್ರಾಮೀಣ ಜನರಲ್ಲಿ ಆಡಳಿತ ಪ್ರಜ್ಞೆಯನ್ನು ಜಾಗೃತಿಗೊಳಿಸಲು ಸಹಕಾರಿಯಾಗಿದೆ.

ಪೂಜ್ಯ ಮಹಾತ್ಮಾ ಗಾಂಧೀಜಿಯವರ ಪರಿಕಲ್ಪನೆಯ ಗ್ರಾಮಸ್ವರಾಜ್ಯ ಸಂಕಲ್ಪದ ಕನಸನ್ನು ಕರ್ನಾಟಕ ಘನ ಸರಕಾರ ಕಾಯ್ದೆ ರೂಪದಲ್ಲಿ ಜಾರಿಗೆ ತರುವುದರ ಮೂಲಕ ಗ್ರಾಮೀಣ ಆಡಳಿತ ವಿಕೇಂದ್ರಿಕರಣಕ್ಕೆ ಶಕ್ತಿ ತುಂಬಿದೆ. ಈ ಮೂಲಕ ದೇಶದಲ್ಲಿ ಮೊಟ್ಟಮೊದಲಿಗೆ ಇದೊಂದು ಕ್ರಾಂತಿಕಾರಿ ಬೆಳವಣಿಗೆಯನ್ನು ಹುಟ್ಟು ಹಾಕುವ ಮೂಲಕ ಗಾಂಧೀಜಿಯರ ಕನಸನ್ನು ನನಸಾಗಿಸುವಲ್ಲಿ ಕರ್ನಾಟಕ ಸರಕಾರ ಇತರೆ ರಾಜ್ಯ ಸರಕಾರಗಳ ಹುಬ್ಬೇರಿಸುವಂತೆ ಮಾಡಿದೆ. ಈ ಕಾಯ್ದೆ ದೇಶದಲ್ಲಿ ಮಾದರಿ ಕಾಯ್ದೆಯಾಗಿ ರೂಪುಗೊಂಡಿದೆ.




ಮೂರು ಹಂತದ ಪಂಚಾಯತ ರಾಜ್ ಆಡಳಿತ ವ್ಯವಸ್ಥೆಯಲ್ಲಿ ಈ ಹಿಂದೆ ಹಲವಾರು ಕಾಯ್ದೆಗಳು ಜಾರಿಗೆ ಬಂದಿದ್ದವಾದರೂ ಆದರೆ ಗಾಂಧೀಜಿಯವರ ಕನಸಿನ ಸಂಕಲ್ಪವಾಗಿರುವ ಗ್ರಾಮಸ್ವರಾಜ್ಯ ಹೆಸರಿನ ಪರಿಕಲ್ಪನೆಯ ಕಾಯ್ದೆ ಜಾರಿಯಾಗಿರಲಿಲ್ಲ. ಅದು ಈಗ ಕರ್ನಾಟಕದಲ್ಲಿ ಮೊಟ್ಟ ಮೊದಲಿಗೆ ಕರ್ನಾಟಕ ಸರಕಾರ ಜಾರಿಗೆ ತಂದಿರುವುದರಿಂದ ಗ್ರಾಮೀಣ ಆಡಳಿತ ವ್ಯವಸ್ಥೆಯ ಸಮತೋಲನಕ್ಕೆ ದಿಕ್ಸೂಚಿಯಾಗಿದೆ. ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತಿ ಈ ಮೂರು ಸಂಸ್ಥೆಗಳು ಮತ್ತಷ್ಟು ಬಲವರ್ಧನೆಗೊಳಿಸುವಲ್ಲಿ ಈ ಕಾಯ್ದೆ ಸಹಕಾರಿಯಾಗಿದೆ ಎನ್ನಬಹುದು.

ಸರಕಾರ ಕೇವಲ ಕಾಯ್ದೆ ಮಾರ್ಪಾಡು ಮಾಡದೆ ಅನೇಕ ಅಭಿವೃದ್ಧಿಯಪರವಾದ ಬದಲಾವಣೆಗಳನ್ನು ಕಾಯ್ದೆಯಲ್ಲಿ ಅಳವಡಿಸಲಾಗಿದೆ. ಯೋಜನೆಗಳು, ಸೌಲಭ್ಯಗಳು, ಅನುದಾನಗಳು, ಕಾರ್ಯಕ್ರಮಗಳು ಹಾಗೂ ಜವಾಬ್ದಾರಿಗಳು ಸಮಗ್ರ ಗ್ರಾಮೀಣ ಅಭಿವೃದ್ಧಿಗೆ ಬದಲಾವಣೆ ತರುವಲ್ಲಿ ಗ್ರಾಮಸ್ವರಾಜ್ಯ ಕಾಯ್ದೆ ಅರ್ಥಪೂರ್ಣವಾಗಿ ರಾಜ್ಯದಲ್ಲಿ ಉತ್ಸಾಹದೊಂದಿಗೆ

ಕಾರ್ಯದರ್ಶಿ, ಗ್ರಾ.ಪಂ. ದೇವರನಾವದಗಿ, ತಾ|| ಸಿಂದಗಿ ಜಿ|| ವಿಜಯಪುರ

ಉದಯವಾಗಿದೆ. ಇದನ್ನು ನಾವೆಲ್ಲರೂ ಒಪ್ಪಬೇಕಾದ ಅಂಶವಾಗಿದೆ. ನಾವೆಲ್ಲರೂ ಕನ್ನಡಿಗರು ಈ ಕಾಯ್ದೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸಲು ಸಂತೋಷವೆನಿಸುತ್ತದೆ. ಇದರಿಂದ ಸ್ಥಳಿಯ ಸಂಸ್ಥೆಗಳಲ್ಲಿ ಅಭಿವೃದ್ಧಿಯ ಗಾಳಿ ಬೀಸಲು ಸಾಧ್ಯವಾಗಿದೆ ಎನ್ನಬಹುದು.

ಕಾಯ್ದೆಯಲ್ಲಿ ಸ್ಥಳೀಯ ಸಂಸ್ಥೆಯಲ್ಲಿ ಈ ಹಿಂದೆ ನಡೆದಂತಹ ವಾರ್ಡ್‌ಸಭೆ, ಗ್ರಾಮಸಭೆ, ವಿಶೇಷಸಭೆ ಸಾಮಾನ್ಯಸಭೆ, ತುರ್ತುಸಭೆ, ಮಹಿಳಾ ಗ್ರಾಮಸಭೆ ಹಾಗೂ ಮಕ್ಕಳ ಗ್ರಾಮಸಭೆ ಈ ಎಲ್ಲ ಸಭೆಗಳಿಗೆ ಮತ್ತಷ್ಟು ಈ ಕಾಯ್ದೆಯಿಂದ ಬಲ ಬಂದಂತಾಗಿದೆ. ಮತ್ತು ಈ ಎಲ್ಲ ಸಭೆಗಳನ್ನು ಕಡ್ಡಾಯವಾಗಿ ನಡೆಸುವಂತೆ ಕಾಯ್ದೆಯಲ್ಲಿ ವಿವರಿಸಲಾಗಿದೆ. ವಿಶೇಷವಾಗಿ ಸ್ಥಳೀಯ ಪ್ರತಿನಿಧಿಗಳ ಕಾರ್ಯಗಳು, ಹೊಣೆಗಾರಿಕೆಗಳು ಮತ್ತು ಕರ್ತವ್ಯಗಳನ್ನು ಚಾಚುತಪ್ಪದೆ ನಿಭಾಯಿಸಲು ಕಾನೂನಿನಲ್ಲಿ ಕಟ್ಟುನಿಟ್ಟಾಗಿ ಉಲ್ಲೇಖಿಸಲಾಗಿದೆ. ಇದರಿಂದ ಎಲ್ಲರೂ ಈ ಕಾಯ್ದೆಯನ್ನು ಸಮರ್ಥವಾಗಿ ಮತ್ತು ಸಮರ್ಪಕವಾಗಿ ಪಾಲಿಸಬೇಕಾದದ್ದು, ಎಲ್ಲ ಜನಪ್ರತಿನಿಧಿಗಳ ಹಾಗೂ ಗ್ರಾಮೀಣ ಸಮುದಾಯಗಳ ಜವಾಬ್ದಾರಿಯಾಗಿದೆ.



ನೂತನವಾಗಿ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದಿರುವ ಗ್ರಾಮಸ್ವರಾಜ್ಯ ಕಾಯ್ದೆಯು ನೈಜವಾಗಿ ಗ್ರಾಮಗಳ ಶಕ್ತಿಯನ್ನು ವೃದ್ಧಿಸುತ್ತದೆ ಮತ್ತು ಗ್ರಾಮೀಣ ಜನರಲ್ಲಿ ಆಡಳಿತ ಪ್ರಜ್ಞೆಯನ್ನು ಜಾಗೃತಗೊಳಿಸುತ್ತದೆ. ಗ್ರಾಮಗಳಿಗೆ ಅಗತ್ಯ ಬೇಡಿಕೆಗಳ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದು ಹಾಗೂ ಸ್ಥಳೀಯ ಸಂಸ್ಥೆಗಳನ್ನು ಆರ್ಥಿಕವಾಗಿ ಸಾಮಾಜಿಕವಾಗಿ, ಶೈಕ್ಷಣಿಕವಾಗಿ




ಬಲವರ್ಧನೆಗೊಳಿಸುವುದು ಸೇರಿದಂತೆ, ಎಲ್ಲಾ ಆಡಳಿತ ಸ್ವರೂಪವನ್ನು ಒಳಗೊಂಡ ಈ ಕಾಯ್ದೆಯು ಪೂಜ್ಯ ಮಹಾತ್ಮಾ ಗಾಂಧೀಜಿಯವರ ಕನಸಿನ ಪ್ರಯತ್ನದ ಫಲವಾಗಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ.

ಪ್ರಮುಖವಾಗಿ ಸರ್ಕಾರ, ಸಾರ್ವಜನಿಕರ ಮೂಲಸೌಲಭ್ಯಗಳನ್ನು ಸ್ಥಳೀಯ ಸಂಸ್ಥೆಗಳ ಆಡಳಿತ ವ್ಯಾಪ್ತಿಗೆ ಈ ಕಾಯ್ದೆಯ ಮೂಲಕ ಹೊಸ ಸ್ವರೂಪ ನೀಡಿದೆ. ಶುದ್ಧ ಕುಡಿಯುವ ನೀರು, ಗ್ರಾಮೀಣ ವಸತಿ ರಸ್ತೆಗಳು, ಬಡತನ ನಿರ್ಮೂಲನೆ, ಶಿಕ್ಷಣ ವಿಪತ್ತು ನಿರ್ವಹಣೆ ಸಾಮಾಜಿಕ ಅರಣ್ಯ ನಿರ್ಮಾಣ, ಪ್ರವಾಸೋದ್ಯಮ ಸಣ್ಣ ಮತ್ತು ಗ್ರಾಮೀಣ ಕೈಗಾರಿಕೆಗಳು ಕೃಷಿ ತೋಟಗಾರಿಕೆ ಮತ್ತು ರೇಷ್ಮೆ ಕೃಷಿ, ಪಶು ಸಂಗೋಪನೆ, ಹೈನುಗಾರಿಕೆ, ಕೋಳಿ ಸಾಕಾಣಿಕೆ ಮತ್ತು ಮೀನುಗಾರಿಕೆ, ಗ್ರಾಮೀಣ ವಿದ್ಯುತ್ತೀಕರಣ, ಗ್ರಂಥಾಲಯಗಳು, ಕ್ರೀಡೆಗಳು ಮತ್ತು ಸಾಂಸ್ಕೃತಿಕ ಚಟುವಟಿಕೆಗಳು, ಮಾರುಕಟ್ಟೆ ಸೌಲಭ್ಯ, ಸಾರ್ವಜನಿಕ ಆರೋಗ್ಯ, ನೈರ್ಮಲ್ಯ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ವಿಕಲಚೇತನರು, ಅನುಸೂಚಿತ ಜಾತಿ, ಪಂಗಡ, ಮತ್ತು ಹಿಂದುಳಿದ ವರ್ಗಗಳ ಅಭಿವೃದ್ಧಿ, ಪ್ರಮಾಣ ಪತ್ರ ವಿತರಣೆ, ಅಂಕಿ ಅಂಶಗಳ ನಿರ್ವಹಣೆ, ಯೋಜನೆ ಸಹಕಾರ, ಗ್ರಾಮೀಣ ಪರಿಸರ ವ್ಯವಸ್ಥೆ ಮತ್ತು ಬೀದಿ ಪರಿಸ್ಥಿತಿ, ಆದಾಯ ಸೃಜನಕಾರ್ಯ, ಜ್ಞಾನ ನಿರ್ವಹಣೆ ಮತ್ತು ಸಮುದಾಯ ಸ್ವತ್ತುಗಳ ನಿರ್ವಹಣೆ ಹೀಗೆ 29 ಮಹತ್ವದ ಕಾರ್ಯಕ್ರಮಗಳನ್ನು ಸ್ಥಳೀಯ ಆಡಳಿತ ವ್ಯಾಪ್ತಿಗೆ ವರ್ಗಾಯಿಸಿ ಗ್ರಾಮ ಸ್ವರಾಜ್ಯ ಕಾಯ್ದೆಗೆ ಹೊಸ ಸ್ವರೂಪ ನೀಡಿದೆ.

ಈ ಕಾಯ್ದೆಯಲ್ಲಿ ಮೂರು ಹಂತದ ಪಂಚಾಯತಿ ಸದಸ್ಯರ ಮತ್ತು ಅಧ್ಯಕ್ಷ, ಉಪಾಧ್ಯಕ್ಷರ ಅಧಿಕಾರ ಕರ್ತವ್ಯ




ಮತ್ತು ಜವಾಬ್ದಾರಿಗಳನ್ನು ನಿಭಾಯಿಸುವುದನ್ನು ಶಾಸನಬದ್ಧವಾಗಿ ನಿರ್ವಹಿಸುವಂತೆ ಕಾಯ್ದೆಯಲ್ಲಿ ವಿವರಿಸಲಾಗಿದೆ. ಸಮಗ್ರ ಗ್ರಾಮೀಣ ಅಭಿವೃದ್ಧಿಯ ದೃಷ್ಠಿಕೋನ ಆಧರಿಸಿ, ಈ ಕಾಯ್ದೆಯಲ್ಲಿ ಹಲವಾರು ಮಹತ್ವದ ಬದಲಾವಣೆಗಳನ್ನು ತರುವುದರ ಮೂಲಕ ಗ್ರಾಮೀಣ ಪಂಚಾಯತಿ ಸಬಲೀಕರಣ ವ್ಯವಸ್ಥೆಗೆ ಪ್ರತಿಯೊಂದು ಅಂಶಗಳನ್ನು ಕಾಯ್ದೆಯಲ್ಲಿ ವಿವರಿಸಲಾಗಿದೆ. ಸ್ಥಳೀಯ ಜನರು ಮತ್ತು ಜನಪ್ರತಿನಿಧಿಗಳು ಈ ಕಾಯ್ದೆಯ ಚೌಕಟ್ಟಿನಲ್ಲಿ ಕೆಲಸ ನಿರ್ವಹಿಸಿದರೆ ಗ್ರಾಮೀಣ ಬಡತನ, ನಿರುದ್ಯೋಗ ಸಮಸ್ಯೆಯನ್ನು ಹೊಗಲಾಡಿಸಲು ಈ ಕಾಯ್ದೆಯು ಮೌಲ್ಯಾಧಾರಿತವಾಗಿದೆ ಎನ್ನಬಹುದು.

ಈ ಬಾರಿ ಕಳೆದ ಗ್ರಾಮ ಪಂಚಾಯತಿ ಚುನಾವಣೆಯಲ್ಲಿ, ಪಂಚಾಯತಿಗಳಲ್ಲಿ ಮಹಿಳಾ ಮೀಸಲಾತಿಗೆ 50ರ ಅನುಪಾತ ನೀಡುವುದರ ಮೂಲಕ ಸರ್ಕಾರ ಮಹಿಳೆಯರ ಹಕ್ಕುಗಳಿಗೆ ಪ್ರಾಮಾಣಿಕ ಪ್ರಯತ್ನ ಮಾಡಿದೆ ಎನ್ನಬಹುದು. ಪುರುಷ ಪ್ರದಾನ ವ್ಯವಸ್ಥೆಯಲ್ಲಿ ಸ್ಥಳೀಯ ಸಂಸ್ಥೆಯಲ್ಲಿ ಸರ್ವರಿಗೂ ಸಮತೋಲನ ತರುವುದರ ಮೂಲಕ ಆಡಳಿತ ವ್ಯವಸ್ಥೆಗೆ ಬದಲಾವಣೆ ತಂದಿದೆ. ರಾಜ್ಯದ ಬಹುತೇಕ ಪಂಚಾಯತಿಗಳಲ್ಲಿ ಮಹಿಳೆಯರು ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನವನ್ನು ಪಡೆದುಕೊಳ್ಳುವಲ್ಲಿ ಮೇಲುಗೈ ಸಾಧಿಸಿದ್ದಾರೆ. ಮಹಿಳಾ ಮೀಸಲಾತಿಯಿಂದ ಪಂಚಾಯತಿಗಳು ಆರ್ಥಿಕವಾಗಿ, ಸಾಮಾಜಿಕವಾಗಿ, ಯೋಜನೆಗಳ ಸಮರ್ಪಕ ಅನುಷ್ಠಾನದಲ್ಲಿ ಪಾರದರ್ಶಕತೆ ರೂಢಿಸಿಕೊಳ್ಳುವಲ್ಲಿ ಆಸಕ್ತಿ ವಹಿಸಿವೆ. ಮಹಿಳೆಯರ ಮುಂದಾಳತ್ವದಿಂದ ಸ್ಥಳೀಯ ಸಂಸ್ಥೆಗಳು ಆರ್ಥಿಕ ಸಬಲತೆಯನ್ನು ಸಾಧಿಸಲು ಸಾಧ್ಯವಾಗಿದೆ ಎನ್ನಬಹುದು.

ಸ್ಥಳೀಯ ಜನಸಮುದಾಯದವರು ಕೇವಲ ಆರ್ಥಿಕ ಹಣಕಾಸಿನ ಬೇಡಿಕೆಗೆ ಸರಕಾರದ ಕಡೆಗೆ ಮುಖ ಮಾಡದೆ ಸ್ಥಳಿಯ ಸಂಸ್ಥೆಗಳಲ್ಲಿ ಆರ್ಥಿಕ ಸಂಪನ್ಮೂಲಗಳನ್ನು ಕ್ರೋಢೀಕರಿಸುವಲ್ಲಿ ಗ್ರಾಮ ಪಂಚಾಯತಿಗೆ ಬರುವ ಮನೆಯ ತೆರಿಗೆ, ನೀರಿನ ತೆರಿಗೆ ಹಾಗೂ ವಿದ್ಯುತ್ ತೆರಿಗೆ ಸೇರಿದಂತೆ ಅನೇಕ ತೆರಿಗೆಗಳು ಗ್ರಾಮ ಪಂಚಾಯತಿಗೆ ಬರುತ್ತವೆ. ಆದರೆ ಗ್ರಾಮ ಪಂಚಾಯತಿಗಳು ಸ್ಥಳೀಯ ಮೂಲಸೌಲಭ್ಯಗಳನ್ನು ಈಡೇರಿಸುವಲ್ಲಿ ಈ ತೆರಿಗೆಗಳನ್ನು ಬಳಸಿಕೊಳ್ಳ ಬಹುದಾಗಿದೆ. ಆದ್ದರಿಂದ ಸಾರ್ವಜನಿಕರು ಸ್ಥಳೀಯ ಸಂಸ್ಥೆಗಳಿಗೆ ಸಕಾಲದಲ್ಲಿ ತಮ್ಮ ತೆರಿಗೆಗಳನ್ನು ಪಾವತಿಸಿ ಪಂಚಾಯತಿಯ ಆರ್ಥಿಕ ಅಭಿವೃದ್ಧಿಗೆ ಸಹಕರಿಸಿದರೆ ಗ್ರಾಮಸ್ವರಾಜ್ಯ ಕಾಯ್ದೆ ಯಶಸ್ವಿಯಾಗಲು ಸಾಧ್ಯವಾಗುವುದರಲ್ಲಿ ಸಂದೇಹವಿಲ್ಲ.




ರಾಜ್ಯದಲ್ಲಿ ಯಶಸ್ವಿಯಾಗಿ ಉದಯವಾಗಿರುವ ಗ್ರಾಮಸ್ವರಾಜ್ಯ ಕಾಯ್ದೆಯನ್ನು ನಾವೆಲ್ಲರು ಮನಃ ಪೂರ್ವಕವಾಗಿ ಸ್ವಾಗತಿಸಿ ಈ ನಿಟ್ಟಿನಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಗ್ರಾಮೀಣ ಅಭಿವೃದ್ಧಿಗಾಗಿ ಸಹಕರಿಸಿ ಸಮರ್ಪಕವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವುದರ ಮೂಲಕ ಕೆಲಸ ಮಾಡಿದರೆ ಗ್ರಾಮೀಣ ಪ್ರದೇಶಗಳು ಅಭಿವೃದ್ಧಿ ಹೊಂದಲು ಸಾಧ್ಯ ಮತ್ತು ಗ್ರಾಮಸ್ವರಾಜ್ಯ ಕಾಯ್ದೆಗೆ ಇದರಿಂದ ಮತ್ತಷ್ಟು ಮಹತ್ವ ಬರಲು ಸಾಧ್ಯ. ಒಟ್ಟಿನಲ್ಲಿ ಈ ಮಾದರಿ ಕಾಯ್ದೆಯು ಮುಂದಿನ ದಿನಗಳಲ್ಲಿ ಯಶಸ್ವಿಯಾಗಿ ಕರ್ನಾಟಕದಲ್ಲಿ ಅಷ್ಟೆ ಅಲ್ಲ, ದೇಶವ್ಯಾಪಿ ವಿಸ್ತಾರವಾಗಿ ಅನುಷ್ಠಾನಗೊಳ್ಳಲಿ ಎಂದು ಹಾರೈಸೋಣ.

ಅಭಿವೃದ್ಧಿ ಅಧಿಕಾರಿಗಳ ಅಂಗಳದಿಂದ

# ಹಾಲೇನಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಶೌಚಾಲಯಕ್ಕಾಗಿ ಕುಮಾರಿ ಲಾವಣ್ಯಳ ಹೋರಾಟ



ಸುಬ್ಬರಾಜ ಅರಸ್ ವಿ.ಆರ್.

ಹಾಲೇನಹಳ್ಳಿ ಗ್ರಾಮದ ವಿದ್ಯಾರ್ಥಿನಿ ಕುಮಾರಿ ಲಾವಣ್ಯಳು ಶೌಚಾಲಯಕ್ಕಾಗಿ ನಡೆಸಿದ ಹೋರಾಟದ ಪರಿಚಯ.

ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕು ಕೇಂದ್ರದಿಂದ ಸುಮಾರು 15 ಕಿ.ಮೀ. ದೂರವಿರುವ ಹಾಲೇನಹಳ್ಳಿ ನೂತನ ಗ್ರಾಮ ಪಂಚಾಯಿತಿ, ಇತ್ತೀಚೆಗೆ ರಾಷ್ಟ್ರ ಮಟ್ಟದಲ್ಲಿ ಸುದ್ದಿ ಮಾಡಿದೆ. ಇದಕ್ಕೆ ಕಾರಣ ಇದೇ ಗ್ರಾಮದ ನಿವಾಸಿ ಪರಿಶಿಷ್ಟ ಜಾತಿಗೆ ಸೇರಿದ 14 ವರ್ಷ ವಯಸ್ಸಿನ 8ನೇ ತರಗತಿ ವಿದ್ಯಾರ್ಥಿನಿ ಕುಮಾರಿ ಲಾವಣ್ಯ.

ಕುಮಾರಿ ಲಾವಣ್ಯಳ ತಂದೆ ಕೆ. ದೇವರಾಜ್ ಮತ್ತು ತಾಯಿ ಭಾಗ್ಯಮ್ಮ ಕಡುಬಡವರಾಗಿದ್ದು ಕೂಲಿನಾಲಿ ಮಾಡಿ ಜೀವನದ ಬಂಡಿಯನ್ನು ಎಳೆಯುತ್ತ ಲಾವಣ್ಯಳನ್ನು ಸಮೀಪದ ಚಿಕ್ಕನಹಳ್ಳಿಯಲ್ಲಿರುವ ಶಾಂತಲ ಪ್ರೌಢಶಾಲೆಯಲ್ಲಿ ಓದಿಸುತ್ತಿದ್ದರು.



ತನ್ನ ತಂದೆ ತಾಯಿಯರೊಂದಿಗೆ ಶೌಚಾಲಯದ ಮುಂದೆ ಹಸನ್ಮುಖಿಯಾಗಿರುವ ಕುಮಾರಿ ಲಾವಣ್ಯ.

ಕಳೆದ ವರ್ಷ ನವೆಂಬರ್ ತಿಂಗಳಿನಲ್ಲಿ CMCA (Children Movement for Civic Awareness) ಸಂಸ್ಥೆಯವರು ಶಾಲೆಯಲ್ಲಿನ ಮಕ್ಕಳಿಗೆ ನಡೆಸಿಕೊಟ್ಟ ಅರಿವು ಮೂಡಿಸುವ ಕಾರ್ಯಕ್ರಮವು ಕುಮಾರಿ ಲಾವಣ್ಯಳ ಮನಸಿನ ಮೇಲೆ ಗಾಢವಾದ ಪರಿಣಾಮ ಬೀರಿತು. ಆರೋಗ್ಯದ ತಳಹದಿ ಮತ್ತು ಸ್ವಚ್ಛತೆಯ ಮೂಲ ಮಂತ್ರವಾದ "ಶೌಚಾಲಯ"ವನ್ನು ತನ್ನ ಮನೆಯಲ್ಲಿ ಕಟ್ಟಿಸಲೇಬೇಕೆಂಬ ಅಚಲ ನಿರ್ಧಾರ ಮಾಡಿದಳು.

ಮನೆಯಲ್ಲಿ ತಂದೆತಾಯಂದಿರಲ್ಲಿ ಶೌಚಾಲಯ ಕಟ್ಟಿಸುವಂತೆ ಒತ್ತಾಯಿಸಿದಳು. ಬಡತನದ ಕಾರಣದಿಂದ ಶೌಚಾಲಯ ಕಟ್ಟಿಸಲು ಸಾಧ್ಯವಿಲ್ಲವೆಂದು ತಂದೆತಾಯಂದಿರು ಕೈಚೆಲ್ಲಿ ಕುಳಿತರು. ಆದರೆ ಛಲಗಾತಿ ಲಾವಣ್ಯ ತನ್ನ ಪಟ್ಟು ಬಿಡದೆ ನಮ್ಮ ಮನೆಯಲ್ಲಿ ಶೌಚಾಲಯ ಕಟ್ಟಿಸುವವರೆಗೆ

ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಹಾಲೇನಹಳ್ಳಿ, ಸಿರಾ ತಾಲೂಕು, ತುಮಕೂರು 572125



ನಾನು ಆಹಾರ ಸೇವಿಸುವುದಿಲ್ಲ, ಉಪವಾಸ ಮಾಡುತ್ತೇನೆ ಎಂದು ಪ್ರತಿಜ್ಞೆ ಮಾಡುತ್ತಾಳೆ. ಪೋಷಕರು ಆಕೆಯ ಮನವೊಲಿಸಲು ಎಷ್ಟೇ ಪ್ರಯತ್ನಪಟ್ಟರೂ ಲಾವಣ್ಯ ತನ್ನ ಪಟ್ಟು ಬಿಡಲಿಲ್ಲ. ತಾನು ಆಹಾರ ಸೇವಿಸಿದರೆ ಶೌಚಕ್ಕೆ ಹೋಗ ಬೇಕಾಗುತ್ತದೆ. ಅದಕ್ಕಾಗಿ ಬಯಲಿನಲ್ಲಿ ಮಲ ವಿಸರ್ಜನೆ ಮಾಡಬೇಕಾಗುತ್ತದೆ. ಯಾವುದೇ ಕಾರಣಕ್ಕು ನಾನು ಬಯಲಿನಲ್ಲಿ ಶೌಚಕ್ಕೆ ಹೋಗುವುದಿಲ್ಲ ಎಂದು ತೀರ್ಮಾನಿಸುತ್ತಾಳೆ.

ಇವತ್ತಿನ ನಾಗರೀಕ ಸಮಾಜದಲ್ಲಿ ಮಾನ-ಸ್ವಾಭಿಮಾನ ಹಾಗೂ ಪ್ರಾಣವನ್ನು ಒತ್ತೆ ಇಟ್ಟು ಕತ್ತಲಾಗುವವರೆಗು ರಸ್ತೆ ಬದಿಯಲ್ಲಿ ಕಾದು ಶೌಚ ಮಾಡಿ ನನ್ನ ಗ್ರಾಮದ ಸ್ವಚ್ಛತೆಯನ್ನು ಹಾಗೂ ನನ್ನ ಗ್ರಾಮದ ಜನರ ಆರೋಗ್ಯವನ್ನು ಕೆಡಿಸುವಂತಹ ಪಾಪದ ಕೆಲಸವನ್ನು ಮಾಡುವುದಿಲ್ಲ ಎಂಬುದಾಗಿ ಪಣತೊಡುತ್ತಾಳೆ.

ಅಲ್ಲದೇ ತನ್ನ ತಂದೆಯನ್ನು ಜೊತೆಯಲ್ಲಿ ಕರೆದುಕೊಂಡು ತನ್ನ ಊರಿನ ಗ್ರಾಮ ಪಂಚಾಯಿತಿ ಸದಸ್ಯರು ಮತ್ತು ಗ್ರಾಮ ಪಂಚಾಯಿತಿ ಅಧ್ಯಕ್ಷರುಗಳನ್ನು ಭೇಟಿ ಮಾಡಿ ಸಾರ್ವಜನಿಕರು ಶೌಚಾಲಯ ಕಟ್ಟಿಸಿಕೊಳ್ಳಲು ಸರ್ಕಾರದಿಂದ ಸಹಾಯಧನವು ದೊರೆಯುವ ಬಗ್ಗೆ ಮಾಹಿತಿ ಪಡೆದು ಕಾರ್ಯೋನ್ಮುಖಳಾಗುತ್ತಾಳೆ, ಕೆಲವೇ ದಿನದಲ್ಲಿ ತನ್ನ ಮನೆಗೊಂದು ಶೌಚಾಲಯವನ್ನು ಕಟ್ಟಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತಾಳೆ.

CMCA ಸಂಸ್ಥೆಯವರು ಜಿಲ್ಲೆಯ ಇತರೆ ಶಾಲೆಗಳಲ್ಲಿ ಕುಮಾರಿ ಲಾವಣ್ಯಳ ಯಶೋಗಾಥೆಯನ್ನು ಬಳಸಿಕೊಂಡು ಜಾಗೃತಿ ಮೂಡಿಸಿದ್ದಾರೆ. ಕುಮಾರಿ ಲಾವಣ್ಯ ಕೂಡ ತನ್ನ ಸಹಪಾಠಿಗಳಿಗೆ ಹಾಗೂ ಗ್ರಾಮದ ಜನರಿಗೆ ಶೌಚಾಲಯ ಕಟ್ಟಿಸಿಕೊಳ್ಳಲು ಪ್ರೇರೇಪಣೆ ನೀಡಿ ತನ್ನ ಗ್ರಾಮವು "ಬಯಲು ಮಲ ವಿಸರ್ಜನೆ ಮುಕ್ತ ಗ್ರಾಮ ಆಗಬೇಕು" ಎಂಬ ದಿಸೆಯಲ್ಲಿ ದಾಪುಗಾಲಿಟ್ಟು ಯಶಸ್ವಿಯಾಗುತ್ತಿದ್ದಾಳೆ.

ನಮ್ಮ ಮನೆಯ ಶೌಚಾಲಯ ನಮ್ಮ ಕುಟುಂಬದಲ್ಲಿ ಬಹಳಷ್ಟು ಬದಲಾವಣೆ ತಂದಿದೆ. ಹಿಂದಿನಂತೆ ಈಗ ನಾವು ಶೌಚಕ್ಕೆ ಹೋಗಲು ಕತ್ತಲಾಗುವವರೆಗೂ ಕಾಯಬೇಕಿಲ್ಲ. ನಮ್ಮ ಮಾನ-ಪ್ರಾಣ ಹಾಗೂ ಸ್ವಾಭಿಮಾನವನ್ನು ಅಡವಿಟ್ಟು ಯಾರಾದರೂ ಕದ್ದು



ನೋಡಿಯಾರು ಎಂಬ ಆಂತಕದಿಂದ ರಸ್ತೆ ಬದಿಯಲ್ಲಿ ಕದ್ದು ಕುಳಿತು "ಏಳುವುದು-ಕುಳಿತುಕೊಳ್ಳುವುದು" ಮಾಡಿ ಕಳ್ಳಕಾಕರ, ಪೋಲಿಪುಂಡರ, ವಿಷಜಂತುಗಳ, ಕಾಡುಪ್ರಾಣಿಗಳ ಅಪಾಯಗಳಿಂದ ಹಾಗೂ ರೋಗ ರುಜಿನಗಳಿಂದ ನಾವು ಸಂಪೂರ್ಣವಾಗಿ ಮುಕ್ತವಾಗಿದ್ದೇವೆ. ಇದರಿಂದಾಗಿ ನಮ್ಮ ಕುಟುಂಬಕ್ಕೆ ಪ್ರತಿ ವರ್ಷ ತಗುಲುತಿದ್ದ ಸಾವಿರಾರು ರೂಪಾಯಿ ಆಸ್ಪತ್ರೆಯ ಖರ್ಚು ಉಳಿತಾಯವಾಗಿದೆ. ನಮ್ಮ ಕುಟುಂಬದಲ್ಲಿ ನೆಮ್ಮದಿ ನೆಲೆಸಿದೆ ಎಂದು ಹೆಮ್ಮೆಯಿಂದ ಬೀಗುತ್ತಾಳೆ ಕುಮಾರಿ ಲಾವಣ್ಯ.

ಯಶೋಗಾಥೆ

# ಸಾಧನೆಯ ಹಾದಿಯಲಿ ಕುರಿ / ದನದ ಕೊಟ್ಟಿಗೆ ನಿರ್ಮಾಣ



ರಾಜೇಶ್ವರಿ ಬಿ. ಎನ್.

ಕುರಿ ಮತ್ತು ದನದ ದೊಡ್ಡಿಗಳ ನಿರ್ಮಾಣಕ್ಕೆ ಹಿರೇಬೆಂಡಿಗೇರಿ ಗ್ರಾಮ ಪಂಚಾಯತಿಯು ಮಾದರಿಯಾಗಿದೆ.

ಹಾವೇರಿ ಜಿಲ್ಲೆ ಶಿಗ್ಗಾವಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಹಿರೇಬೆಂಡಿಗೇರಿ ಗ್ರಾಮ ಪಂಚಾಯತಿಯು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ 18 ಕಿಮೀ ದೂರದಲ್ಲಿದೆ. ಇದು ಶಾಸನದಲ್ಲಿ ಬೆಣ್ಣೆಗೇಮಿ ಪಿಂಡಗಾಮಿ ಎಂದು ದಾಖಲಾಗಿದೆ. ಇದು ಭೌಗೋಳಿಕವಾಗಿ 1112 ಹೆಕ್ಟೇರ್ ವಿಸ್ತೀರ್ಣದಿಂದ ಕೂಡಿದೆ. ಕೆಂಪು ಮತ್ತು ಕಪ್ಪು ಮಣ್ಣಿನ ಜಮೀನು ಇಲ್ಲಿ ಹೆಚ್ಚಾಗಿ ಕಾಣಸಿಗುತ್ತದೆ. ಇದು 5 ಗುಡ್ಡಗಳನ್ನು ಹೊಂದಿದೆ ಮತ್ತು ಇಲ್ಲಿನ ದೊಡ್ಡಕೆರೆ ನಾಡಿಗೇರ ಕಟ್ಟಿ, ಪಿಂಜಾರ ಕೆರೆ, ತುಂಬಿದ ಕೆರೆ ಹಾಗೂ ಮೇಲಿನ ಕೆರೆ ಎಂಬ ಕೆರೆಗಳನ್ನು ಹೊಂದಿದೆ. ಇಲ್ಲಿ ವಾರ್ಷಿಕ ಸರಾಸರಿ 57.616 ರಿಂದ 88.75 ಮೀ.ಮೀ ಮಳೆಯಾಗುತ್ತದೆ. ಇಲ್ಲಿನ ಜನರು ಗೋವಿನಜೋಳ, ಹತ್ತಿ, ಶೇಂಗಾ, ಮೆಣಸಿನಕಾಯಿ, ಬಿಳಿಜೋಳ, ಅಲಸಂದಿ, ಹೆಸರು, ಉದ್ದು, ತೊಗರಿ, ಕುಸಬಿ ಬೆಳೆಗಳನ್ನು ಬೆಳೆಯುತ್ತಾರೆ. ಇಲ್ಲಿ ಜನರು ಹೆಚ್ಚಾಗಿ ಕೃಷಿಯನ್ನು ಅವಲಂಬಿಸಿರುತ್ತಾರೆ. ಹಸು, ಎಮ್ಮೆ, ಎತ್ತು, ಕುರಿ, ಮೇಕೆ ಕೋಳಿಸಾಕಣೆಯನ್ನು ಇಲ್ಲಿನ ಜನರು ಉಪಕಸುಬಾಗಿ ಮಾಡುತ್ತಿದ್ದಾರೆ. ಆದರೆ ತಮ್ಮ ಸಾಕುಪ್ರಾಣಿಗಳಿಗೆ ಸರಿಯಾದ ವ್ಯವಸ್ಥೆ ಇಲ್ಲದೆ ಮತ್ತು ಅವುಗಳನ್ನು ಸರಿಯಾದ ರೀತಿಯಲ್ಲಿ ಆರೈಕೆ ಮಾಡದಿರುವುದರಿಂದ ಅವುಗಳು ರೋಗಕ್ಕೆ ತುತ್ತಾಗುತ್ತಿವೆ.



ಇಲ್ಲಿ 2011ರ ಜನಗಣಗತಿಯಂತೆ ಗ್ರಾಮ ಪಂಚಾಯತಿಯು 3412 ಜನ ಸಂಖ್ಯೆ ಹೊಂದಿದ್ದು, ಮೂರು ಅಂಗನವಾಡಿ, ಒಂದು ಸರ್ಕಾರಿ ಹಿರಿಯ ಪ್ರಾಥಮಿಕ ಕನ್ನಡ ಶಾಲೆ, ಒಂದು ಸರ್ಕಾರಿ ಹಿರಿಯ ಉರ್ದು ಶಾಲೆ, ಒಂದು ಸರ್ಕಾರಿ ಪ್ರೌಢಶಾಲೆಗಳನ್ನು ಹೊಂದಿದೆ. ಶಾಲೆಗಳಲ್ಲಿ ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ, ಬಿಸಿಯೂಟ, ಕ್ಷೀರಭಾಗ್ಯ ವ್ಯವಸ್ಥೆ ಇದೆ. ಇಲ್ಲಿ ಕಚ್ಚಾ ರಸ್ತೆಗಳು ಇವೆ. ಈ ಗ್ರಾಮಕ್ಕೆ ನರೇಗಾ ಯೋಜನೆಯಿಂದ ಎಲ್ಲ ವ್ಯವಸ್ಥೆಗಳನ್ನು

ಐ.ಇ.ಸಿ. ಸಂಯೋಜಕರುತಾಲೂಕ ಪಂಚಾಯತ, ಶಿಗ್ಗಾಂವ



ಮಾಡಿಕೊಳ್ಳಲಾಗುತ್ತಿದೆ. ಗ್ರಾಮಪಂಚಾಯತಿಯು ಹಿರೇಬೆಂಡಿಗೇರಿ ಮತ್ತು ಚಿಕ್ಕಬೆಂಡಿಗೇರಿ ಎಂಬ 2 ಗ್ರಾಮಗಳನ್ನು ಹೊಂದಿದೆ. 2011ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ (ಸಮಾಜ ಸೇವೆ) ಶಿವಾನಂದ ಜೆ. ಮ್ಯಾಗೇರಿ ಇದೇ ಗ್ರಾಮದವರಾಗಿದ್ದಾರೆ. ಕೋಲಾಟ, ಡೊಳ್ಳಿನ ಕುಣಿತ ಕಲಾವಿದರೂ ಸಹ ಈ ಗ್ರಾಮ ಪಂಚಾಯತಿಯ ನಿವಾಸಿಗಳಾಗಿದ್ದಾರೆ. ಕುಸ್ತಿ ಕಬ್ಬಡ್ಡಿ ಮುಂತಾದ ಜನಪದ ಕ್ರೀಡೆಗಳು ಇನ್ನೂ ಈ ಗ್ರಾಮ ಪಂಚಾಯತಿಯಲ್ಲಿ ಜೀವಂತವಾಗಿವೆ. ಹಿರೇಬೆಂಡಿಗೇರಿ ಗ್ರಾಮದಲ್ಲಿ ಕೃಷಿಯೇತರ ಕೂಲಿ ಕಾರ್ಮಿಕರು ಜೀವನೋಪಾಯಕ್ಕಾಗಿ ಹಲವಾರು ಕಸುಬುಗಳನ್ನು ಮಾಡುತ್ತಾರೆ.

ಆದರೆ ತಮ್ಮ ಸಾಕು ಪ್ರಾಣಿಗಳಿಗೆ ಸರಿಯಾದ ವ್ಯವಸ್ಥೆ ಒದಗಿಸುವಲ್ಲಿ ವಿಫಲನಾಗಿದ್ದಾರೆ. ಇದಕ್ಕೆ ಆರ್ಥಿಕ ನೆಪಮಾಡಿ ಹೆಚ್ಚಿನ ಸಂಖ್ಯೆಯಲ್ಲಿ ಕುರಿ ಮೇಕೆ ದನಗಳನ್ನು ಸಾಕುವಲ್ಲಿ ಹಿಂದುಳಿದಿದ್ದಾರೆ. ಅದಕ್ಕಾಗಿ ಈ ಎಲ್ಲಾ ಸಮಸ್ಯೆಗಳಿಗೆ ಸ್ವಲ್ಪ ಮಟ್ಟಿಗೆ ಆರ್ಥಿಕ ನೆರವು ನೀಡಿದರೆ ಅವರಿಗೆ ಸ್ವಲ್ಪ ಮಟ್ಟಿಗೆ ಸಹಾಯವಾಗಬಹುದುದೆಂದು ಸರ್ಕಾರವು ಜಾರಿಗೆ ತಂದಿರುವ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕುರಿ ಮತ್ತು ದನದ ದೊಡ್ಡಿ ನಿರ್ಮಿಸಲು ಅವಕಾಶ ಕಲ್ಪಿಸಲಾಗಿದೆ.

### ಯೋಜನೆಯ ಮಹತ್ವ:

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅನುಷ್ಠಾನವು ಗ್ರಾಮೀಣ ಪ್ರದೇಶಕ್ಕೆ ವರದಾನವಾಗಿದೆ. ಇದರ ಮಹತ್ವವನ್ನು ಐ.ಇ.ಸಿ. ಕಾರ್ಯಕ್ರಮದ ಮೂಲಕ ಜನರಿಗೆ ತಿಳಿಸಿಕೊಡುವುದರ ಮೂಲಕ ಹಾಗೂ ಮನೆ ಮನೆ ಭೇಟಿ ಮಾಡಿ ಜನರಿಗೆ ಈ ಯೋಜನೆಯಲ್ಲಿ ಇರುವ 21 ವಲಯ ಕಾಮಗಾರಿಗಳ ಬಗ್ಗೆ ಮಾಹಿತಿ ನೀಡಲಾಯಿತು. ರೋಜಗಾರ್ ದಿವಸ ಆಚರಿಸುವುದರ ಮೂಲಕ ಹೆಚ್ಚಿನ ಮಾಹಿತಿಯನ್ನು ಗ್ರಾಮೀಣ ಪ್ರದೇಶದ ಕುಟುಂಬಗಳಿಗೆ ನೀಡಲಾಗಿದೆ. ಈ ಯೋಜನೆಯಡಿ ಉದ್ಯೋಗ ಚೀಟಿ ಹೊಂದಿದ ಪ್ರತಿ ಕುಟುಂಬಕ್ಕೂ ಕೆಲಸವನ್ನು ಒದಗಿಸಿ ಕೊಟ್ಟಿದೆ. ದನದ ಕೊಟ್ಟಿಗೆ ನಿರ್ಮಿಸಿಕೊಳ್ಳಲು ಎಸ್.ಸಿ./ ಎಸ್.ಟಿ. ಕುಟುಂಬಗಳಿಗೆ ರೂ.35000 ಹಾಗೂ ಬಿ.ಪಿ.ಎಲ್. ಕುಟುಂಬಗಳಿಗೆ ರೂ.16000ಗಳ ಸಹಾಯಧನ ನೀಡಲಾಗುತ್ತಿದೆ.

### ಸಾಧನೆಯ ಹಾದಿಯಲ್ಲಿ ದನ ಮತ್ತು ಕುರಿದೊಡ್ಡಿ ನಿರ್ಮಾಣ

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ವೈಯಕ್ತಿಕ ಕಾಮಗಾರಿಯಾದ ಕುರಿ ಮತ್ತು ದನದ ದೊಡ್ಡಿಗಳ ನಿರ್ಮಾಣಕ್ಕೆ ಹಿರೇಬೆಂಡಿಗೇರಿ ಗ್ರಾಮ ಪಂಚಾಯತಿಯಲ್ಲಿ ಹೆಚ್ಚಿನ ಆದ್ಯತೆ ನೀಡಲಾಗಿದೆ. ಇದರ ಪ್ರಯೋಜನವನ್ನು ಹಿರೇಬೆಂಡಿಗೇರಿ ಗ್ರಾಮ ಪಂಚಾಯತಿಯ ಫಲಾನುಭವಿಗಳು ತಮ್ಮ ಹೆಸರನ್ನು ಗ್ರಾಮ ಸಭೆಗಳ ಮೂಲಕ ಕ್ರಿಯಾ ಯೋಜನೆಯಲ್ಲಿ ಸೇರಿಸಿ, ತನ್ಮೂಲಕ ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗಿದೆ. ಎಲ್ಲಾ ವರ್ಗದವರು ಈ ಪ್ರಯೋಜನವನ್ನು ಪಡೆಯುವಂತೆ ಪಂಚಾಯತಿಯ ಅಧಿಕಾರಿಗಳು ಕರ್ತವ್ಯ ನಿರ್ವಹಿಸಿ ರುತ್ತಾರೆ. ಇದರಿಂದ ಅಕುಶಲ ಕಾರ್ಮಿಕರಿಗೆ ಗ್ರಾಮಗಳಲ್ಲಿ ಉದ್ಯೋಗ ದೊರಕಿದೆ. ಪ್ರತಿ ದಿನಕ್ಕೆ 204/–ರಂತೆ ಕೂಲಿ ಪಡೆದು ವೈಯಕ್ತಿಕ ಕಾಮಗಾರಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪ್ರಗತಿ ಸಾಧಿಸಲಾಗಿದೆ. ಇದರಿಂದ ಗ್ರಾಮದ ಜನರು ತಮ್ಮ ಸಾಕು ಪ್ರಾಣಿಗಳಿಗೆ ಮಹಾತ್ಮಾ ಗಾಂಧಿ ನರೇಗಾ ಯೋಜನೆಯ ಸಂಪೂರ್ಣ ಲಾಭ ಪಡೆಯುವುದರ ಮೂಲಕ ಯಶಸ್ಸು ಪಡೆದು ಕೊಂಡಿದ್ದಾರೆ.

# ಕೊಪ್ಪಳ ಜಿಲ್ಲಾ ಪಂಚಾಯತ್‌ನಲ್ಲಿ ಉದ್ಯೋಗ ಖಾತರಿ ಯೋಜನೆಯ ಯಶಸ್ವಿ ಅನುಷ್ಠಾನ

ಯಶೋಗಾಥೆ



ಶ್ರೀನಿವಾಸ ಹೆಚ್. ಚಿತ್ರಗಾರ

ಯಾವುದೇ ಯೋಜನೆಯ ಯಶಸ್ವಿ ಅನುಷ್ಠಾನಕ್ಕೆ ಅದರ ಫಲಾನುಭವಿಗಳು ಯೋಜನೆಯ ಗುರಿ, ಉದ್ದೇಶ, ಅದರಿಂದ ಆಗುವ ಅನುಕೂಲಗಳು, ಅದರಿಂದ ನಿರೀಕ್ಷಿಸಿರುವ ಫಲಿತಾಂಶಗಳ ಬಗ್ಗೆ ವಿವರವಾಗಿ ಅರ್ಥಮಾಡಿಕೊಂಡು, ಯೋಜನೆಯ ಎಲ್ಲಾ ಹಂತಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದಾಗ ಮಾತ್ರ ಅದರ ಪೂರ್ಣ ಪ್ರಮಾಣದ ಪ್ರತಿಫಲವನ್ನು ಪಡೆಯಲು ಸಾಧ್ಯ ಎನ್ನುವುದಕ್ಕೆ ಕೊಪ್ಪಳ ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಅಳವಂಡಿ, ಕವಲೂರು, ಹುಲಗಿ, ಮುನಿರಬಾದ್, ಕಿನ್ನಾಳ, ಸಂಗನಾಳ, ಚಳಗೇರ, ಗ್ರಾಮ ಪಂಚಾಯತಿಗಳು ಉದಾಹರಣೆಗಳಾಗಿವೆ. ಗ್ರಾಮೀಣ ಜನತೆಗೆ ಕೆಲಸವನ್ನು ನೀಡಲು ಇಂದು ಸರ್ಕಾರವು ಅನೇಕ ಯೋಜನೆಯಗಳನ್ನು ರೂಪಿಸಿ, ಯೋಜನೆಯನ್ನು ರೂಪಿಸುವ, ಅನುಷ್ಠಾನ ಹಾಗೂ ಅನುಷ್ಠಾನದ ನಂತರದ ಅವಧಿಯ



ಪ್ರಕ್ರಿಯೆಯಲ್ಲಿ ಸಮುದಾಯವನ್ನು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಉತ್ತೇಜಿಸಿ ನಿರ್ವಹಣೆಯನ್ನು ಸಮುದಾಯವೇ ನಿರ್ವಹಿಸಲು ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟಿದೆ.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಗಳ ಅನುಷ್ಠಾನದ ನಿರ್ವಹಣೆಯನ್ನು ಗ್ರಾಮಸ್ಥರು ನಿರ್ವಹಿಸಿಕೊಂಡು ಹೋಗಬೇಕು ಎಂದರೆ ಸಾಮಾನ್ಯವಾಗಿ ಗ್ರಾಮ ಪಂಚಾಯತಿಗಳಲ್ಲಿ ವಿಭಿನ್ನ ಅಭಿಪ್ರಾಯಗಳು ವ್ಯಕ್ತವಾಗುವುದು ಸರ್ವೇ ಸಾಮಾನ್ಯ. ಈ ಎಲ್ಲಾ ಅಂಶಗಳನ್ನು

ಗ್ರಾಮಸ್ಥರಲ್ಲಿ ಸಮನ್ವಯ ಸಾಧಿಸಲು ಗುಳೆ ಹೋಗುವ ಗ್ರಾಮಗಳನ್ನು ಗುರುತಿಸಿ ಅವರ ಆರೋಗ್ಯ ಮತ್ತು ಮಕ್ಕಳ ಶಿಕ್ಷಣದ ಅನುಕೂಲಗಳ ಬಗ್ಗೆ ಚರ್ಚಿಸಿ ಯೋಜನೆಯ ಅನುಕೂಲ ಪಡೆಯಲು ಪ್ರೇರೇಪಿಸಲಾಯಿತು.

ಜಿಲ್ಲಾ ಐ.ಇ.ಸಿ ಸಂಯೋಜಕರು, ಎಂ.ಜಿ.ಎನ್.ಆರ್.ಇ.ಜಿ.ಎ ವಿಭಾಗ
ಜಿಲ್ಲಾ ಪಂಚಾಯತ, ಕೊಪ್ಪಳ



ಮೀರಿಯೂ ಕೊಪ್ಪಳ ಜಿಲ್ಲಾ ಪಂಚಾಯತಿಯ ವ್ಯಾಪ್ತಿಯ ಮಹಾತ್ಮ ಗಾಂಧಿ ನರೇಗಾ ಯೋಜನೆಯಲ್ಲಿ ಸಮುದಾಯ ಅಧಾರಿತ ಕಾಮಗಾರಿಗಳಲ್ಲಿ ಕೂಲಿಕಾರರು ಸ್ವ-ಹಿತಾಸಕ್ತಿಯಿಂದ ಪಾಲ್ಗೊಳ್ಳುವಿಕೆ ಮತ್ತು ಮಹಿಳೆಯರ ಭಾಗವಹಿಸುವಿಕೆ ಹಾಗೂ ಕಾಯಕ ಬಂಧುಗಳ ಮುತುವರ್ಜಿ ನೋಡಿದರೆ ಗ್ರಾಮೀಣ ಜನರ ದೃಷ್ಟಿಕೋನ ಹಾಗೂ ಆಲೋಚನೆಗಳಲ್ಲಿ ಸ್ವಲ್ಪ ಮಟ್ಟಿನ ಬದಲಾವಣೆಗಳನ್ನು ಕಾಣಬಹುದು. ಈ ನಿಟ್ಟಿನಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಸಮುದಾಯಾಧಾರಿತ ಕಾಮಗಾರಿಗಳ ಮತ್ತು ವೈಯಕ್ತಿಕ ಕಾಮಗಾರಿಗಳು ಅನುಷ್ಠಾನದೊಂದಿಗೆ ಉತ್ತಮ ಫಲಿತಾಂಶ ಪಡೆದಿದ್ದು ಮತ್ತು ಬರಗಾಲದ ಸಮಯದಲ್ಲಿ ಯೋಜನೆಯು ಸಾರ್ಥಕತೆಯನ್ನು ಪಡೆದಿದೆ.

## ಮಹಾತ್ಮ ಗಾಂಧಿ ನರೇಗಾ ಯೋಜನೆಯು ಅನುಷ್ಠಾನ ಪೂರ್ವದಲ್ಲಿ ಈ ಗ್ರಾಮ ಪಂಚಾಯತಿಗಳಲ್ಲಿ ಇದ್ದ ಸ್ಥಿತಿ :

ಈ ಯೋಜನೆಯು ಅನುಷ್ಠಾನ ಪೂರ್ವದಲ್ಲಿ ಗ್ರಾಮಸ್ಥರು ವಾಡಿಕೆಯಂತೆ ಬೇರೆ ರಾಜ್ಯ ಮತ್ತು ಜಿಲ್ಲೆಗಳಿಗೆ ದುಡಿಮೆಗಾಗಿ ಕುಟುಂಬ ಸಮೇತ ಗುಳೆ ಹೋಗುತ್ತಿದ್ದರು. ಇದರಿಂದ ಅವರ ಸಾಮಾಜಿಕ ಜೀವನ, ಆರೋಗ್ಯ ಮತ್ತು ಮಕ್ಕಳ ಶಿಕ್ಷಣ ಇಲ್ಲದೆ ಇವರ ಸ್ಥಿತಿ ಶೋಚನೀಯವಾಗಿತ್ತು.

## ಯೋಜನೆಯ ಅನುಷ್ಠಾನದ ಪ್ರಕ್ರಿಯೆ ಹಾಗೂ ಗ್ರಾಮಸ್ಥರ ಸಹಭಾಗಿತ್ವ:

ಇಂತಹ ಸಮಯದಲ್ಲಿ ಗುಳೆ ಹೋಗುವ ಗ್ರಾಮ ಪಂಚಾಯತಿಗಳನ್ನು ಗುರುತಿಸಲಾಯಿತು. ಅಂತಹ ಗ್ರಾಮ ಪಂಚಾಯತಿಗಳಾದ ಹುಲಗಿ, ಮುನಿರಾಬಾದ್, ಅಳವಂಡಿ, ಕವಲೂರ, ಚಳಗೇರ, ಮೆಣೇದಾಳ, ಸಂಗನಾಳ, ಕುದರಿಮೋತಿ, ಬಳ್ಳೊಟಗಿ, ಹೀರೆಮ್ಯಾಗೇರಿ ಗ್ರಾಮ ಪಂಚಾಯತಿಗಳಲ್ಲಿ ಗ್ರಾಮಸ್ಥರಲ್ಲಿ ಸಮನ್ವಯ ತರುವ ಸಲುವಾಗಿ ಗುಳೆ ಹೋಗುವ ಗ್ರಾಮಗಳನ್ನು ಗುರುತಿಸಿ ಅವರ ಮನೆಗಳಿಗೆ ಭೇಟಿ ನೀಡಿ ನೀವು ಕುಟುಂಬ ಸಮೇತ ಗುಳೆ ಹೋಗುವುದರಿಂದ ನಿಮ್ಮ ಸಾಮಾಜಿಕ ಜೀವನ ಆರೋಗ್ಯ ಮತ್ತು ಮಕ್ಕಳ ಶಿಕ್ಷಣ ಹಾಳಾಗುವ ಕುರಿತು ತಿಳಿಸಿ, ಚರ್ಚಿಸಿದ ನಂತರ ಪ್ರೇರಣೆಗೊಂಡ ಗ್ರಾಮಸ್ಥರು ಯೋಜನೆಯೆಡಿ ಭಾಗವಹಿಸಲು ತಮ್ಮ ಸಹಮತ ವ್ಯಕ್ತಪಡಿಸಿದರು. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ಕೂಲಿಕಾರರೆ ನಿರ್ವಹಿಸುವ ಸಮುದಾಯ ಕಾಮಗಾರಿಗಳನ್ನು ಕೈಗೆತ್ತಿಗೊಳ್ಳಲಾಯಿತು. ಸದರಿ ಗ್ರಾಮ ಪಂಚಾಯತಿಗಳಲ್ಲಿ ಸುಮಾರು 300-450



ಕೂಲಿಕಾರರಿಂದ ಈ ಕಾಮಗಾರಿಗಳನ್ನು ನಿರ್ವಹಿಸಲಾಗಿದೆ. 1000ದಿಂದ 3500 ಮಾನವ ದಿನಗಳನ್ನು ಸೃಜಿಸಲಾಗಿದೆ. ಸುಮಾರು ಈ ಯೋಜನೆ ಯಲ್ಲಿ ಸಮುದಾಯ ಆಧಾರಿತ ಕಾಮಗಾರಿಗಳನ್ನು ತ್ವರಿತವಾಗಿ ಪ್ರಾರಂಭಿಸಿ ವಿಳಂಬ ಮಾಡದೆ ಅವರ ಕೂಲಿಯನ್ನು ಪಾವತಿಸಲಾಗಿದೆ. ಜನ ಪ್ರತಿನಿಧಿಗಳು ಮತ್ತು ಗ್ರಾಮಸ್ಥರು ಹಾಗೂ ಅಧಿಕಾರಿಗಳು / ಎಲ್ಲಾ ಹಂತದ ಸಂಯೋಜಕರುಗಳು ನಿಯಮಿತವಾಗಿ ಸಭೆ ಸೇರಿ ಯೋಜನೆಯ ಸಮರ್ಪಕ ಅನುಷ್ಠಾನಕ್ಕೆ ಕೈಗೊಳ್ಳಬೇಕಾದ ಕಾರ್ಯತಂತ್ರಗಳ ಬಗ್ಗೆ ಸಮಗ್ರವಾಗಿ ಚರ್ಚಿಸಿ, ಸೂಕ್ತ ತೀರ್ಮಾನಗಳನ್ನು ಕೈಗೊಳ್ಳುತ್ತಿದೆ.

# ಮಹಾತ್ಮ ಗಾಂಧಿ ನರೇಗಾ ಯೋಜನೆಯಲ್ಲಿ 2015-16ನೇ ಸಾಲಿನಲ್ಲಿ ಅನುಷ್ಠಾನಗೊಂಡ ಸಮುದಾಯ ಕಾಮಗಾರಿಗಳ ವಿವರ

| ಕ್ರ.ಸಂ | ಕಾಮಗಾರಿ ಹೆಸರು | ಗ್ರಾಮ ಪಂಚಾಯತ್ | ತಾಲೂಕ ಪಂಚಾಯತ್ | ಅಂದಾಜು ಮೊತ್ತ | ಕೂಲಿ ಮೊತ್ತ | ಮಾನವ ದಿನಗಳು | ಕೂಲಿಕಾರರ ಸಂಖ್ಯೆ |
|---|---|---|---|---|---|---|---|
| 1 | ಬಿಸರಳ್ಳಿ ಗ್ರಾಮದಲ್ಲಿ ಬಿಕನಳ್ಳಿ ರಸ್ತೆಯಿಂದಶಿವಪ್ಪನ ಕೆರೆಯವರೆಗೆ ರಸ್ತೆ ಅಭಿವೃದ್ದಿಪಡಿಸುವದು. RC/17163601502223622 | ಬಿಸರಹಳ್ಳಿ | ಕೊಪ್ಪಳ | ರೂ.8 ಲಕ್ಷ | ರೂ.4.76 ಲಕ್ಷ | 2334 | 425 |
| 2 | ಕವಲೂರ ಗ್ರಾಮದ ಅಳವಂಡಿ ದಾರಿಯಲ್ಲಿ ಬರುವ ಕೆರೆ ಅಭಿವೃದ್ಧಿ ಪಡಿಸುವುದು. WC/11020050920623745 | ಕವಲೂರು | ಕೊಪ್ಪಳ | ರೂ.5 ಲಕ್ಷ | ರೂ. 3.27 ಲಕ್ಷ | 1605 | 496 |
| 3 | ಚಿಕ್ಕಡಂಕನಕಲ್ ಗ್ರಾಮದಲ್ಲಿ ಕೆರೆ ಹೂಳೆತ್ತುವುದು. WC/11020050920623192 | ಚಿಕ್ಕಡಂಕನಕಲ್ | ಗಂಗಾವತಿ | ರೂ.7 ಲಕ್ಷ | ರೂ.31.33 | 1536 | 445 |
| 4 | ಹಿರೇಬಗನಾಳ ಗ್ರಾಮದಲ್ಲಿ ಇರುವ ಕೆರೆಯ ಪೂರ್ವ ಭಾಗ ಅಭಿವೃದ್ಧಿ ಪಡಿಸುವುದು. WC/11020050920622927 | ಮುನಿರಬಾದ ಡ್ಯಾಂ | ಕೊಪ್ಪಳ | ರೂ.8 ಲಕ್ಷ | ರೂ. 1.96 | 961 | 129 |
| 5 | ಮುಧೋಳ ಗ್ರಾಮದ ನಿಂಗವ್ವನ ಕಾಳುವೆ ದಿಂದ ಭೀಮಸೇನ ಆಶ್ರೀತ್ ಹೊಲದವರಗೆ ರಸ್ತೆ ಸುಧಾರಣೆ ಮಾಡುವುದು. WC/1716301502224689 | ಮುಧೋಳ | ಯಲಬುರ್ಗಾ | ರೂ 2 ಲಕ್ಷ | ರೂ.71,196/- | 349 | 103 |

# ರೋಜ್‌ಗಾರ್ ದಿನ ಆಚರಣೆ

ಕೊಪ್ಪಳ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಗ್ರಾಮ ಪಂಚಾಯತ್‌ಗಳಲ್ಲಿ ರೋಜ್‌ಗಾರ್ ದಿವಸವನ್ನು ಆಚರಿಸುವ ಸಂದರ್ಭದಲ್ಲಿ ಪ್ರತಿಯೊಬ್ಬ ಗ್ರಾಮಸ್ಥನೂ ಈ ಯೋಜನೆಯಲ್ಲಿ ತಾನೂ ಕೂಡ ಪ್ರಯೋಜನವನ್ನು ಪಡೆಯುವ ಉದ್ದೇಶದಿಂದ ಸಮುದಾಯ ಕಾಮಗಾರಿಗಳ, ವೈಯುಕ್ತಿಕ ಕಾಮಗಾರಿಗಳಲ್ಲಿ ತಮ್ಮ ಪಾತ್ರಗಳ ಕುರಿತು ಮುತುವರ್ಜಿ ವಹಿಸಿ ತಮ್ಮ ಮನದಾಳದ ಮಾತನ್ನು ವ್ಯಕ್ತಪಡಿಸುವುದನ್ನು ಕಂಡರೆ ನಿಜವಾಗಿಯೂ ಈ ರೋಜಗಾರ್ ದಿವಸವು ಕೂಲಿಕಾರ ದಿವಸ ವಾಗಿರುವುದು ನಿಜಕ್ಕೂ ಸತ್ಯ. ಈ ದಿನದಂದು ಕೂಲಿಕಾರರು ತಮ್ಮ ಆರ್ಥಿಕ ಅಭಿವೃದ್ಧಿಗಾಗಿ ಬೇಡಿಕೆ ಸಲ್ಲಿಸುವುದು ಮತ್ತು ಅಂದಿನ ದಿನದಂದೆ ಸ್ವೀಕೃತಿಯನ್ನು ಪಡೆದುಕೊಂಡು ಸಮುದಾಯ ಅಭಿವೃದ್ಧಿ ಕಾಮಗಾರಿಗಳಲ್ಲಿ, ವೈಯುಕ್ತಿಕ ಕಾಮಗಾರಿಗಳಲ್ಲಿ ಪ್ರಯೋಜನವನ್ನು ಪಡೆದು ಇನ್ನಿತರ ಪಕ್ಕದ ಗ್ರಾಮ ಪಂಚಾಯತಿಗಳಿಗೆ ಮಾದರಿ ಕೂಲಿಕಾರರಾಗಿರುವುದು ನಿಜಕ್ಕೂ ಸಂತಸವೆನಿಸುತ್ತದೆ. ಈ ದಿನದಂದು ಗ್ರಾಮೀಣ ಸಮುದಾಯಕ್ಕೆ ಮಹತ್ತರ ಬದಲಾವಣೆಯನ್ನು ತರಲು ತುಂಬಾ ಸಹಕಾರಿ ಯಾಗಿದೆ.

**ಈ ಗ್ರಾಮ ಪಂಚಾಯತಿಗಳಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯಿಂದ ಹೊಸತನ ಕಂಪು :**

- ಪ್ರತಿ ತಿಂಗಳು ರೋಜಗಾರ್ ದಿವಸವನ್ನು ನಿಗದಿಪಡಿಸಿದ ದಿನಾಂಕದಂದು ಸಭೆ ನಡೆಸಿ ಸೂಕ್ತ ತೀರ್ಮಾನಗಳನ್ನು ತೆಗೆದುಕೊಂಡು ಅನುಷ್ಠಾನಗೊಳಿಸಲಾಗುತ್ತಿದೆ.
- ಮಹಿಳೆಯರ ಪಾಲ್ಗೊಳ್ಳುವಿಕೆಯಿಂದ ಮತ್ತು ಪ.ಜಾ/ ಪ.ಪಂ ದುರ್ಬಲ ವರ್ಗದವರಿಗೆ ಕೆಲಸ ದೊರೆತು ಗುಳೆ ಹೋಗದಂತೆ ತಡೆದು ಕೆಲಸವನ್ನು ನೀಡಲಾಗಿದೆ ಮತ್ತು ಆರ್ಥಿಕವಾಗಿ ಸಬಲೀಕರಣಗೊಂಡಿರುತ್ತಾರೆ.




- ಗ್ರಾಮ ಪಂಚಾಯತಿಯಲ್ಲಿ ಸುಮಾರು 188 ಕುಟುಂಬಗಳಿಂದ ಕೂಡಿದ 300-400 ಕೂಲಿ ಕಾರರಿಂದ 2217 ಮಾನವ ದಿನಗಳನ್ನು ಸೃಜಿಸಲಾಗಿದೆ.
- ಮುಂದಿನ ದಿನಗಳಲ್ಲಿ ಮಳೆಯ ಸಮಯದಲ್ಲಿ ಈ ಕೆರೆ ಅಭಿವೃದ್ಧಿಯಲ್ಲಿ ನೀರು ನಿಂತು ಅಂತರ್ಜಲ ಪ್ರಮಾಣ ಹೆಚ್ಚಾಗಿ, ಸುತ್ತ ಮುತ್ತಲಿನ ಹೊಲಗಳಿಗೆ ಬೋರ್ ರಿಚಾರ್ಜ್ ಆಗುತ್ತದೆ.
- ಜೀವನೋಪಾಯ ಮಾರ್ಗ, ನೈಸರ್ಗಿಕ ಸಮತೋಲನ, ಸಾಮಾಜಿಕ ಬದಲಾವಣೆ, ಸುಸ್ಥಿರತೆ.
- ವೈಯಕ್ತಿಕ ಕಾಮಗಾರಿಗಳಲ್ಲಿ ಸಂಪೂರ್ಣ ಆಸಕ್ತಿಯಿಂದ ಕುರಿ/ ದನದ ದೊಡ್ಡಿ ನಿರ್ಮಾಣ, ಅರಣ್ಯೀಕರಣ ಮತ್ತು ತೋಟಗಾರಿಕಾ ಬೆಳೆಗಳ ಅನುಷ್ಠಾನ.

ಗ್ರಾಮಗಳಲ್ಲಿ ಯಾವುದೇ ಯೋಜನೆಗಳನ್ನು ನಿರ್ವಹಿಸಲು ಶತಪ್ರಯತ್ನ ಮಾಡುತ್ತಿರುವ ಇಂದಿನ ದಿನಗಳಲ್ಲಿ ಗ್ರಾಮ ಕಾಯಕ ಸಂಘದ ಸದಸ್ಯರು ಮುಂದೆ ಬಂದು, ಸಮುದಾಯಕ್ಕೆ ಉದ್ಯೋಗ ಖಾತರಿಯಲ್ಲಿ ಕೆಲಸವನ್ನು ನಿರ್ವಹಿಸುವಂತೆ ಪ್ರೇರೇಪಿಸಿ, ಈ ಯೋಜನೆಯನ್ನು ನಿರ್ವಹಿಸಲು ಎಲ್ಲಾ ರೀತಿಯ ಅಂಶಗಳನ್ನು ಅಳವಡಿಸಿಕೊಂಡು, ಒಂದು ಸಂಸ್ಥೆಯಂತೆ ನಿರಂತರವಾಗಿ ನಿರ್ವಹಿಸಿಕೊಂಡು ಹೋಗುತ್ತಿರುವುದನ್ನು ನೋಡಿದರೆ ಆಶ್ಚರ್ಯ ವೆನಿಸುತ್ತದೆ.

ಮಹಾತ್ಮ ಗಾಂಧಿ ನರೇಗಾ ಯೋಜನೆಯ ಅಧಿಕಾರಿಗಳು ಹಾಗೂ ನೆರವು ಸಂಸ್ಥೆಗಳ ಸಿಬ್ಬಂದಿಗಳ ಪರಿಶ್ರಮದ ಫಲವಾಗಿ ಈ ರೀತಿಯಾದ ಯಶಸ್ಸನ್ನು ಪಡೆಯಲು ಸಾಧ್ಯ ಎನ್ನುತ್ತಾರೆ. ಪ್ರತಿ ಗ್ರಾಮ ಪಂಚಾಯತಿಯಲ್ಲಿ ಕಾಯಕ ಸಂಘದ ಸದಸ್ಯರುಗಳು ಮತ್ತು ಯೋಜನೆಯ ಅನುಷ್ಠಾನದ ನಿರ್ವಹಣೆಯ ಕ್ಷೇತ್ರದಲ್ಲಿ ಒಂದು ಮಹತ್ತರವಾದ ಬದಲಾವಣೆಯನ್ನು ತರಲು ಗ್ರಾಮಸ್ಥರು ಸಹಕಾರ/ ಸಲಹೆ ಮುಖ್ಯ ಕಾರಣ ಎಂದೂ ಸಹ ಹೇಳುತ್ತಾರೆ. ಅದರಂತೆ ಈ ಗ್ರಾಮ ಪಂಚಾಯತಿಗಳು ಯೋಜನೆಯಲ್ಲಿ ಕೂಲಿಕಾರರು ಗುಳೆ ಹೊಗುವುದನ್ನು ತಡೆದು, ಸಮುದಾಯ ಕಾಮಗಾರಿಗಳಲ್ಲಿ ಪಾಲ್ಗೊಂಡು ಉತ್ತಮ ಪ್ರಗತಿ ಸಾಧಿಸಿ ಮಾದರಿ ಗ್ರಾಮ ಪಂಚಾಯತಿಗಳಾಗಿರುವುದು ತುಂಬ ಹೆಮ್ಮೆಯ ಸಂಗತಿ. ಈ ಗ್ರಾಮ ಪಂಚಾಯತಿಗಳಂತೆ ಜಿಲ್ಲೆಯ ಇನ್ನುಳಿದ ಗ್ರಾಮ ಪಂಚಾಯತಿಗಳೂ ಸಹ ಉತ್ತಮ ಪ್ರಗತಿ ಸಾಧಿಸಲೆಂದು ಆಶಿಸೋಣ.

ಯಶೋಗಾಥೆ

# ರಾಜೀವ್‌ಗಾಂಧಿ ಸೇವಾ ಕೇಂದ್ರ – ಜನತೆಯ ಸೇವಾ ಕೇಂದ್ರ

– ಮಂಜುಳ

ಅರಳುಮಲ್ಲಿಗೆ ಗ್ರಾಮವು ದೊಡ್ಡಬಳ್ಳಾಪುರ ತಾಲ್ಲೂಕಿಗೆ ಸೇರಿದ್ದು, ತಾಲ್ಲೂಕು ಕೇಂದ್ರಕ್ಕೆ 5 ಕಿ.ಮೀ ದೂರದಲ್ಲಿದ್ದು, ಜಿಲ್ಲಾ ಕೇಂದ್ರಕ್ಕೆ 40 ಕಿ.ಮೀ ದೂರದಲ್ಲಿದೆ. ಗ್ರಾಮದಲ್ಲಿ ಒಟ್ಟು 469 ಕುಟುಂಬಗಳಿವೆ. ಇಲ್ಲಿನ ಜನ ಸಂಖ್ಯೆ ಗಂಡು 1104 ಮತ್ತು ಹೆಣ್ಣು 1121, ಒಟ್ಟು 2225 ಜನಸಂಖ್ಯೆ ಇದೆ. ಸಾಕ್ಷರತಾ ಪ್ರಮಾಣ ಗಂಡು 864, ಹೆಣ್ಣು 724 ಒಟ್ಟು 1538 ಇದೆ. ಬಡತನ ರೇಖೆಗಿಂತ ಕುಟುಂಬಗಳು 269, ವಾಸದ ಕಟ್ಟಡಗಳು 469, ವಾಣಿಜ್ಯ ಕಟ್ಟಡಗಳು 10, ಒಟ್ಟು ಕಟ್ಟಡಗಳು 479, ಭೌಗೋಳಿಕ ವಿಸ್ತೀರ್ಣ 4230.96 ಹೆಕ್ಟೇರ್‌ಗಳು, ಸಾಗುವಳಿ ವಿಸ್ತೀರ್ಣ 1088.39 ಹೆಕ್ಟೇರ್‌ಗಳು,



ನೀರಾವರಿ ಕ್ಷೇತ್ರ 80 ಹೆಕ್ಟೇರ್ ಇದೆ. ಗ್ರಾಮದ ಪ್ರಮುಖ ಬೀದಿಗಳಲ್ಲಿ ಮಾತ್ರ ಡಾಂಬರೀಕರಣವಾಗಿದ್ದು, ಈಗ ಊರಿನ ಒಳ ರಸ್ತೆಗಳು ಕಾಂಕ್ರೀಟ್ ರಸ್ತೆಗಳಾಗಿವೆ. ಚರಂಡಿ ವ್ಯವಸ್ಥೆಯು ಸುವ್ಯವಸ್ಥಿತವಾಗಿದ್ದು, ಸ್ವಲ್ಪ ಪ್ರಮಾಣದಲ್ಲಿ ಮಾತ್ರ ದುರಸ್ಥಿಯಲ್ಲಿರುತ್ತವೆ. ಕುಡಿಯುವ ನೀರಿಗಾಗಿ 4 ಕೊಳವೆ ಬಾವಿಗಳಿದ್ದು, ಒಂದು ಓವರ್ ಹೆಡ್ ಟ್ಯಾಂಕ್ ಇದೆಯಾದರೂ ಗ್ರಾಮಕ್ಕೆ ಅವಶ್ಯಕತೆ ಇರುವಷ್ಟು ನೀರು ದೊರಕುತ್ತಿಲ್ಲವಾದ್ದರಿಂದ 2ನೇ ಓವರ್ ಹೆಡ್ ಟ್ಯಾಂಕ್ ನಿರ್ಮಾಣಕ್ಕೆ ಅಂದಾಜಿಸಲಾಗಿದೆ. ಕುಡಿಯುವ ನೀರನ್ನು ಮನೆಗಳಿಗೆ ನೇರ ಸಂಪರ್ಕ ಕಲ್ಪಿಸುವ ಮೂಲಕ ಒದಗಿಸಲಾಗಿದೆ. ಪಂಚಾಯತಿಯಲ್ಲಿ ವ್ಯವಸಾಯ ಸೇವಾ ಸಹಕಾರ ಬ್ಯಾಂಕ್, ಪ್ರಾಥಮಿಕ ಪಾಠಶಾಲೆ, ಸರ್ಕಾರಿ ಪ್ರೌಢಶಾಲೆ, ಸಮುದಾಯ ಭವನ, 5 ದೇವಸ್ಥಾನಗಳು, ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು 2 ಅಂಗನವಾಡಿ ಕೇಂದ್ರಗಳಿರುತ್ತವೆ. ಈ ಗ್ರಾಮ ಪಂಚಾಯಿತಿಗೆ ಒಟ್ಟು 7 ಗ್ರಾಮಗಳು ಸೇರುತ್ತವೆ. ಈ ಗ್ರಾಮ ಪಂಚಾಯಿತಿಯಲ್ಲಿ ಒಟ್ಟು 17 ಸದಸ್ಯರುಗಳಿದ್ದು, 8 ಜನ ಸಿಬ್ಬಂದಿಗಳಿರುತ್ತಾರೆ. ಈ ಗ್ರಾಮದಲ್ಲಿ ಸ್ತ್ರೀಶಕ್ತಿ ಗುಂಪುಗಳು ಸುಮಾರು 15 ಗುಂಪುಗಳಿವೆ.

ರಾಜೀವ್ ಗಾಂಧಿ ಸೇವಾ ಕೇಂದ್ರ ನಿರ್ಮಾಣದಿಂದ ಜನಸಾಮಾನ್ಯರ ಆಶೋತ್ತರಗಳಿಗೆ ಬೆಂಬಲವಾಗಿ ನಿಂತು ಅರಿವಿನ ಕೇಂದ್ರವಾಗಿದೆ.

ಜಿಲ್ಲಾ ಐ.ಇ.ಸಿ ಸಂಯೋಜಕರು, ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್, ಬೆಂಗಳೂರು



ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆಯ ಪ್ರಮುಖ ಅಂಶವಾಗಿರುವ ರಾಜೀವ್‌ಗಾಂಧಿ ಸೇವಾ ಕೇಂದ್ರ ಕಟ್ಟಡ ನಿರ್ಮಾಣ ಮಾಡಲು ಕೇಂದ್ರ ಸರ್ಕಾರ ಅನುವು ಮಾಡಿ ಕೊಟ್ಟಿದ್ದು, ಪಾರಂಭದಲ್ಲಿ ಸಾಮಾಗ್ರಿ ವೆಚ್ಚ ಜಾಸ್ತಿ, ಕೂಲಿ ಅಂಶ ಕಡಿಮೆಯೆಂದು ಭಾವಿಸಿದ್ದ ಜನರಿಗೆ ಕಟ್ಟಡ ನಿರ್ಮಾಣ ಹಂತದಲ್ಲಿ ಇದರ ವಾಸ್ತವದ ಬಗ್ಗೆ ಮನದಟ್ಟಾಯಿತು. ಹಾಗೆಯೇ ವಾಸ್ತವವಾಗಿ ಉದ್ಯೋಗ ಖಾತರಿ ಯೋಜನೆ ಯಡಿಯಲ್ಲಿ ಶೇಕಡ 60:40 ಕೂಲಿ ಮತ್ತು ಸಾಮಗ್ರಿ ವೆಚ್ಚಕ್ಕಾಗಿ ಉಪಯೋಗಿಸಲು ಅವಕಾಶವಿರುವುದನ್ನು ತಿಳಿದುಕೊಂಡರು. ಈ ಕಟ್ಟಡ ನಿರ್ಮಾಣದ ವೆಚ್ಚ ರೂ. 10.00 ಲಕ್ಷಗಳನ್ನು ನಿಗದಿ ಮಾಡಿದ್ದು, ಅದರಂತೆ 2012–13ನೇ ಸಾಲಿನಲ್ಲಿ ಉದ್ಯೋಗ ಖಾತರಿ ಯೋಜನೆಯಡಿ ಅರಳುಮಲ್ಲಿಗೆ ಗ್ರಾಮ ಪಂಚಾಯತಿ ಯಲ್ಲಿ ರಾಜೀವ್ ಗಾಂಧಿ ಸೇವಾ ಕೇಂದ್ರ ನಿರ್ಮಾಣ ಕಾಮಗಾರಿಯ ಅಂದಾಜು ಮೊತ್ತ 10.00 ಲಕ್ಷಕ್ಕೆ ಅನುಮೋದನೆ ಪಡೆದಿದ್ದು, ಈ ಕಟ್ಟಡಕ್ಕೆ ಹೆಚ್ಚುವರಿಯಾಗಿ ರೂ. 6.50 ಲಕ್ಷಗಳ ಅನುಮೋದನೆ ಪಡೆದು ಒಟ್ಟು ರೂ. 16.50 ಲಕ್ಷಗಳಲ್ಲಿ ಕಾಮಗಾರಿಯನ್ನು 2014–15ನೇ ಸಾಲಿನಲ್ಲಿ ಮುಕ್ತಾಯಗೊಳಿಸಲಾಗಿದೆ. ಈ ಅವಕಾಶ ದಿಂದ ಗ್ರಾಮ ಪಂಚಾಯಿತಿಗೆ ತುಂಬಾ ಅನುಕೂಲ ವಾಗಿದೆ.

ಮೊದಲು ದೊಡ್ಡಬಳ್ಳಾಪುರ ತಾಲ್ಲೂಕಿನ ಅರಳುಮಲ್ಲಿಗೆ ಗ್ರಾಮ ಪಂಚಾಯಿತಿಯಲ್ಲಿ ಸ್ವಂತ ಕಟ್ಟಡವಿದ್ದರೂ ಕೂಡ ಸಾರ್ವಜನಿಕರು ಕೂರಲು ಸ್ಥಳಾವಕಾಶ ಇರಲಿಲ್ಲ. ಆದರಿಂದ ಈ ಅನುದಾನ ಬಳಸಿಕೊಂಡು ಅತ್ಯುತ್ತಮವಾಗಿ ರಾಜೀವ್‌ಗಾಂಧಿ ಸೇವಾ ಕೇಂದ್ರ ಕಟ್ಟಡ ನಿರ್ಮಿಸಿ ಇಲ್ಲಿ ಸಾರ್ವಜನಿಕರು ಜನಪ್ರತಿನಿಧಿಗಳನ್ನು ಹಾಗೂ ಅಧಿಕಾರಿಗಳನ್ನು ಭೇಟಿಮಾಡಲು ಬರುವವರಿಗೆ ಉತ್ತಮ ಸೌಕರ್ಯ ಒದಗಿಸಿದೆ. ಉದ್ಯೋಗ ಖಾತರಿ ಯೋಜನೆಯಡಿಯಿಂದ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು ಕುಳಿತು ಕೆಲಸ ನಿರ್ವಹಿಸುವ ಕೊಠಡಿ ಮತ್ತು ಸಭಾಂಗಣ ನಿರ್ಮಿಸಿದ್ದಾರೆ. ಇದಕ್ಕೆ ಪೂರಕವಾಗಿ ಕೂಲಿ ಕಾರ್ಮಿಕರನ್ನು ತೊಡಗಿಸಿಕೊಳ್ಳಲು ಪ್ರತಿನಿಧಿಗಳು ಹೆಚ್ಚಿನ ಆಸಕ್ತಿ ವಹಿಸಿದರು. ಅದರಂತೆ ಕಾರ್ಮಿಕರು ಭಾಗವಹಿಸಿ ಕೂಲಿ ಪಡೆದುಕೊಂಡರು. ಕೂಲಿ ಕಾರ್ಮಿಕರ ಶ್ರಮದಿಂದ ನಿರ್ಮಾಣಗೊಂಡ ರಾಜೀವ್‌ಗಾಂಧಿ ಸೇವಾ ಕೇಂದ್ರದಲ್ಲಿ ಪಂಚಾಯಿತಿಯ ಕೆಲಸ ಕಾರ್ಯಗಳು ಸುಸೂತ್ರವಾಗಿ ನಡೆಯುತ್ತಿವೆ.

ರಾಜೀವ ಗಾಂಧಿ ಸೇವಾ ಕೇಂದ್ರಗಳು ಜನತೆಯ ಸೇವಾ ಕೇಂದ್ರಗಳು. ರಾಷ್ಟ್ರದ ಹಾಗೂ ರಾಜ್ಯದ ಯೋಜನೆಗಳನ್ನು ಪರಸ್ಪರ ಪರಿಚಯಿಸುವ ಮಾಹಿತಿಕೇಂದ್ರ. ಸಾರ್ವಜನಿಕರ ಕನಸು ನನಸಾಗಿಸುವ ಹಲವು ಮಾಹಿತಿಗಳ ಕೋಶವನ್ನು ಒಳಗೊಂಡ ಸೇವಾಕೇಂದ್ರಗಳು. ಪಂಚಾಯತಿ ಮಟ್ಟದಲ್ಲಿ ಇಂಥಹ ಕೇಂದ್ರಗಳು ಸರ್ಕಾರದ ಅಭಿವೃದ್ಧಿಪರ ಚಟುವಟಿಕೆಗಳನ್ನು ಜನಸಾಮಾನ್ಯರಿಗೆ ತಿಳಿಸುವ ತಾಣವಾಗಿ ಕಾರ್ಯ ನಿರ್ವಹಿಸಬೇಕು. ಇಂತಹ ಕೇಂದ್ರಗಳ ಬಗ್ಗೆ ನಮ್ಮ ಹಳ್ಳಿಗಾಡಿನ ಜನತೆಗೆ ಹಲವು ನಿರೀಕ್ಷೆಗಳು ಇರುತ್ತವೆ. ಅವುಗಳನ್ನು ಸಾಕಾರಗೊಳಿಸುವ ಸಂಕಲ್ಪದಲ್ಲಿ ಸರ್ಕಾರವು ರಾಜೀವ ಗಾಂಧಿ ಸೇವಾ ಕೇಂದ್ರವನ್ನು ನಿರ್ಮಿಸಿದೆ. ಗ್ರಾಮ ಪಂಚಾಯತಿ ಮಟ್ಟದಲ್ಲಿ ಸಕಲ ಸೌಕರ್ಯಗಳನ್ನು ಒಳಗೊಂಡು ಸ್ಥಾಪನೆಯಾಗುವ ಈ ಕೇಂದ್ರಗಳು ಜನಸಾಮಾನ್ಯರ ಆಶೋತ್ತರಗಳಿಗೆ ಬೆಂಬಲವಾಗಿ ನಿಲ್ಲಲು ಅರಿವಿನ ಕೇಂದ್ರಗಳಾಗಲಿ ಮತ್ತು ಹಳ್ಳಿಗಾಡಿನ ಜನರಲ್ಲಿ ಇರುವ ಸೇವಾ ಮನೋಭಾವವನ್ನು ಉಳಿಸಿ, ಬೆಳೆಸಿ ಗ್ರಾಮೀಣ ಜನರು ಇವುಗಳ ಸೇವೆಯನ್ನು ಬಳಸಿಕೊಂಡು ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನು ಪಡೆದುಕೊಳ್ಳಲಿ.

ಈ ಕಾಮಗಾರಿಯಿಂದ ಜನಪ್ರತಿನಿಧಿಗಳು ಬಹಳ ಸಂತೋಷಗೊಂಡು ಸರ್ಕಾರದ ಯೋಜನೆಯನ್ನು ಸಮುದಾಯದ ಅಗತ್ಯತೆಗೆ ತಕ್ಕಂತೆ ಉಪಯೋಗಿಸಿ ಕೊಂಡಿದ್ದು, ಸ್ಥಳೀಯರು ಈ ಕಾಮಗಾರಿಯ ಗುಣಮಟ್ಟದ ಬಗ್ಗೆ ಹರ್ಷ ವ್ಯಕ್ತಪಡಿಸಿರುತ್ತಾರೆ. ಇಂತಹ ಯೋಜನೆಯಿಂದ ನಮ್ಮ ಗ್ರಾಮಕ್ಕೆ ಹೆಚ್ಚು ಉಪಯೋಗವಾದರೆ ಅದನ್ನು ಸದುಪಯೋಗ ಪಡಿಸಿಕೊಳ್ಳುತ್ತೇವೆಂದು ತಿಳಿಸಿರುತ್ತಾರೆ.

ಯಶೋಗಾಥೆ

# ಗ್ರಾಮೀಣ ಪ್ರದೇಶದಲ್ಲಿ ಸ್ಮಶಾನ ಅಭಿವೃದ್ಧಿ ಕಾಮಗಾರಿ

– ಅಂಬರೀಶ್

ಗ್ರಾಮ ಪಂಚಾಯಿತಿ ವ್ಯಾಪ್ತಿಯ ಒಂದು ಸ್ಮಶಾನ ಅಭಿವೃದ್ಧಿಪಡಿಸುವುದು ಹಾಗೂ ಸ್ಮಶಾನಕ್ಕಾಗಿ ಕಾಯ್ದಿರಿಸಿದ ಸ್ಥಳದ ಅತಿಕ್ರಮಣ ತಡೆಯುವುದು ಯೋಜನೆಯ ಮುಖ್ಯ ಉದ್ದೇಶವಾಗಿದೆ.

ಗೌರವಯುತವಾದ ಬದುಕನ್ನು ಸಾಗಿಸಿ ಕೊನೆಗೆ ಸಾವನ್ನಪ್ಪುವ ಜನರಲ್ಲಿ ಅಂತ್ಯಸಂಸ್ಕಾರವು ಒಂದು ಭಾವನಾತ್ಮಕವಾದ ವಿಷಯವಾಗಿದೆ. ಎಲ್ಲಾ ಪಂಗಡದ, ಎಲ್ಲಾ ಧರ್ಮೀಯ ಜನರು ತಮ್ಮದೇ ಆದ ವಿಶಿಷ್ಟ ಶವಸಂಸ್ಕಾರ ಪದ್ಧತಿಯನ್ನು ಅನುಸರಿಸುತ್ತಾರೆ. ಶವವನ್ನು ಭೂಮಿಯಲ್ಲಿ ಹೂಳುವುದು, ಅಗ್ನಿ ಸಂಸ್ಕಾರ ಮಾಡುವುದಕ್ಕೆ ರುದ್ರ ಭೂಮಿಯ ಅಗತ್ಯತೆ ಇದೆ. ಆದರೆ ಅಂತಹ ರುದ್ರಭೂಮಿಗಳು, ಅದರಲ್ಲೂ ಗ್ರಾಮಾಂತರ ಪ್ರದೇಶಗಳಲ್ಲಿ ಅತಿಕ್ರಮಣಕ್ಕೊಳಪಟ್ಟಿವೆ. ರುದ್ರ ಭೂಮಿಗಳಿಗೆ ಸರಿಯಾದ ಸಂಪರ್ಕವಾಗಲೀ



ದಾರಿಯಾಗಲೀ, ಆವರಣ ಗೋಡೆಗಳಾಗಲೀ, ಕುಡಿಯುವ ನೀರಿನ ಸೌಕರ್ಯವಾಗಲೀ ಇರುವುದಿಲ್ಲ. ರುದ್ರಭೂಮಿಗಳು ಇಂತಹ ದುಸ್ಥಿತಿಯಲ್ಲಿರುವುದನ್ನು ಮನಗೊಂಡ ಸರ್ಕಾರವು ಕೆಲವು ಅಗತ್ಯ ಅವಶ್ಯಕ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಚಿಂತನೆ ನಡೆಸಿ ರುದ್ರಭೂಮಿ/ಸಶ್ಮಾನ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಗ್ರಾಮಿಣ ಪ್ರದೇಶದ ಸ್ಮಶಾನ ಅಭಿವೃದ್ಧಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹೊಸ ಯೋಜನೆ ರೂಪಿಸಿದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ "ನಮ್ಮ ಹೊಲ ನಮ್ಮ ದಾರಿ" ಯಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಅದೇ ರೀತಿಯಲ್ಲಿ ಹೊಲಗಳಿಗೆ ಹೋಗುವ ದಾರಿಯಲ್ಲಿರುವ ಇಂತಹ ರುದ್ರ ಭೂಮಿಗಳಿಗೂ ದಾರಿ ನಿರ್ಮಿಸುವುದನ್ನು ಕೈಗೆತ್ತಿಕೊಳ್ಳಲಾಗಿದೆ. ರಾಜ್ಯದ ಪ್ರತಿ

ಜಿಲ್ಲಾ ಐ.ಇ.ಸಿ ಸಂಯೋಜಕರು, ಜಿಲ್ಲಾ ಪಂಚಾಯತ್, ಬಳ್ಳಾರಿ



ಗ್ರಾಮ ಪಂಚಾಯತಿ ವ್ಯಾಪ್ತಿಯ ಒಂದು ಸ್ಮಶಾನವನ್ನು ಅಭಿವೃದ್ಧಿಪಡಿಸುವುದು ಹಾಗೂ ಸ್ಮಶಾನಕ್ಕಾಗಿ ಕಾಯ್ದಿರಿಸಿದ ಸ್ಥಳದ ಅತಿಕ್ರಮಣ ತಡೆಯುವುದು ಯೋಜನೆಯ ಉದ್ದೇಶವಾಗಿದೆ. ಈ ಯೋಜನೆಯ ಪ್ರಕಾರ ಸ್ಮಶಾನದ ಸುತ್ತ ತಂತಿಬೇಲಿ ಅಳವಡಿಸಲಾಗುತ್ತದೆ. ಅಂತ್ಯಸಂಸ್ಕಾರ ಸಂದರ್ಭದಲ್ಲಿ



ಬರುವ ಸಾರ್ವಜನಿಕರಿಗಾಗಿ ನೆರಳು ಮತ್ತು ನೀರಿನ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತದೆ.

ಈಗಿನ ಹಳ್ಳಿಗಳಲ್ಲಿ ಜಮೀನು ಇದ್ದವರ ಮನೆಯಲ್ಲಿ ಮೃತರಾದರೆ ತಮ್ಮ ಜಮೀನಿನಲ್ಲೋ, ಗದ್ದೆಯಲ್ಲೋ ಅಂತ್ಯಕ್ರಿಯೆ ನಡೆದು ಹೋಗುತ್ತಿತ್ತು. ಆದರೆ ಹಳ್ಳಿಯ ಭೂರಹಿತರ ಮನೆಗಳಲ್ಲಿ ಮೃತರಾದರೆ, ಮೃತರ ಅಂತ್ಯಕ್ರಿಯೆ ನಡೆಸುವಷ್ಟರಲ್ಲಿ ಆ ಕುಟುಂಬದ ಸದಸ್ಯರಿಗೆ ಸಮಸ್ಯೆ ಉಲ್ಬಣ ಆಗುತ್ತಿತ್ತು. ಏಕೆಂದರೆ ಕೆಲ ಹಳ್ಳಿಗಳಲ್ಲಿ ರುದ್ರಭೂಮಿ ಇದ್ದರೂ ಸೂಕ್ತ ನಿರ್ವಹಣೆ, ಭೂಮಿ ಸಮತಟ್ಟು ಹೊಂದಿಲ್ಲದಿರುವುದು, ಸರಿಯಾದ ದಾರಿ, ನೀರು–ನೆರಳಿನ ವ್ಯವಸ್ಥೆ ಕೊರತೆಯಿಂದ ಬಹುತೇಕ ಗ್ರಾಮಗಳಲ್ಲಿ ಸಮಸ್ಯೆಯಾಗುತ್ತಿತ್ತು. ಇದನ್ನು ಮನಗಂಡ ಸರ್ಕಾರವು ಮಹಾತ್ವಕಾಂಕ್ಷಿ ಯೋಜನೆಯಾದ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸರ್ಕಾರದ ಸ್ಥಳದಲ್ಲಿ "ಸ್ಮಶಾನ ಅಭಿವೃದ್ದಿ" ಪಡಿಸುವ ಮೂಲಕ ಹಳ್ಳಿಯ ಜನರ ಸಮಸ್ಯೆಗಳಿಗೆ ಪರಿಹಾರ ದೊರಕಿಸಲು ನರೇಗಾ ಯೋಜನೆಯಡಿ ಆದ್ಯತೆ ನೀಡುತ್ತಿರುವುದು ಅತ್ಯಂತ ವಿಶೇಷದ ಕಾರ್ಯವಾಗಿದೆ.

ಈ ಯೋಜನೆಯಡಿ ಈಗಾಗಲೇ "ಸ್ಮಶಾನ ಅಭಿವೃದ್ಧಿ" ಕಾಮಗಾರಿ ಪೂರೈಸಲು ಆದೇಶ ನೀಡಲಾಗಿದೆ. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ವಿಡಿಯೋ ಕಾನ್ಫರೆನ್ಸ್ ಹಾಗೂ ಸಭೆಗಳ ಮೂಲಕ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ, ತಾಂತ್ರಿಕ ಸಹಾಯಕರಿಗೆ ಹಾಗೂ ತಾಂತ್ರಿಕ ಸಂಯೋಜಕರುಗಳಿಗೆ ಪ್ರೇರೇಪಣೆ ನೀಡಿ ಕಾಮಗಾರಿ ಆದೇಶ ಅಭಿಯಾನದ ಮೂಲಕ ಈ ಕೆಳಗಿನಂತೆ ಪ್ರಗತಿ ಸಾಧಿಸಲಾಯಿತು.

| ಕ್ರ.ಸಂ | ತಾಲ್ಲೂಕು | ಗ್ರಾ.ಪಂ. ಗಳ ಸಂಖ್ಯೆ | ಅನುಮೋದನೆಯಾಗಿರುವ ಕಾಮಗಾರಿಗಳ ಸಂಖ್ಯೆ | ಪ್ರಗತಿಯಲ್ಲಿರುವ ಕಾಮಗಾರಿಗಳ ಸಂಖ್ಯೆ | ಪೂರ್ಣಗೊಂಡಿರುವ ಕಾಮಗಾರಿಗಳ ಸಂಖ್ಯೆ | ವೆಚ್ಚವಾದ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|---|---|---|
| 1 | ಬಳ್ಳಾರಿ | 39 | 49 | 23 | 13 | 16.34 |
| 2 | ಹಡಗಲಿ | 26 | 89 | 19 | 05 | 19.57 |
| 3 | ಹಗರಿಬೊಮ್ಮನಹಳ್ಳಿ | 23 | 23 | 12 | 07 | 7.21 |
| 4 | ಹೊಸಪೇಟೆ | 22 | 58 | 18 | 04 | 3.10 |
| 5 | ಕೂಡ್ಲಿಗಿ | 36 | 37 | 24 | 03 | 5.64 |
| 6 | ಸಂಡೂರು | 26 | 26 | 23 | 03 | 3.29 |
| 7 | ಸಿರುಗುಪ್ಪ | 27 | 27 | 15 | 04 | 9.15 |
| **ಒಟ್ಟು** | | **199** | **309** | **134** | **39** | **64.30** |

ಸ್ಮಶಾನ ಅಭಿವೃದ್ಧಿ ಕಾಮಗಾರಿಗೆ ಸರ್ಕಾರವು ಅಂದಾಜು ಪಟ್ಟಿಯಲ್ಲಿ ನಿಗದಿಪಡಿಸಿರುವ Construction of Graveyardಗಳನ್ನು ನಿರ್ಮಿಸಲಾಗುತ್ತಿದೆ. ಸ್ಮಶಾನ ಅಭಿವೃದ್ಧಿಪಡಿಸಲು ಸ್ಮಶಾನದ ಒಳಗಡೆ ಬೇಲಿ ತೆಗೆದು ಮಣ್ಣನ್ನು ಸಮತಟ್ಟು ಮಾಡಿ, 3.1 ಮೀ ಉದ್ದ, 4.0 ಮೀ ಅಗಲ ವಿಶ್ರಾಂತಿ ಕಟ್ಟೆ ನಿರ್ಮಿಸಲು 2 ಅಡಿ ಆಳ ಬುನಾದಿ ತೆಗೆದು 5 ಅಡಿ ಕಲ್ಲಿನ ಗೋಡೆ ನಿರ್ಮಿಸಿ, ಅದರ ಮೇಲೆ 2.0 ಮೀ ಎತ್ತರ ಇಟ್ಟಿಗೆಯಿಂದ ಗೋಡೆ ನಿರ್ಮಿಸುವುದು. ನಂತರ ವಿಶ್ರಾಂತಿ ಮಂದಿರಕ್ಕೆ MS Sheetನಿಂದ ಮೇಲ್ಚಾವಣಿ ನಿರ್ಮಿಸಲಾಗುವುದು ಮತ್ತು ನೀರಿನ ತೊಟ್ಟಿ, ಸ್ಮಶಾನ ಸುತ್ತಲೂ ತಂತಿ ಬೇಲಿ ಹಾಗೂ ಗೇಟ್ ಅಳವಡಿಸಲಾಗುವುದು.



ಮೃತರಾದವರಿಗೆ ಗೌರವದಿಂದ ಸಂಸ್ಕಾರ ಮಾಡಬೇಕೆಂದರೆ ಸ್ಮಶಾನ ಭೂಮಿ ರಕ್ಷಣೆ, ನಿರ್ವಹಣೆಯಾಗಬೇಕು. ಈ ಕಾರ್ಯಕ್ಕೆ ಕೈಜೋಡಿಸಿದ ಹಾಗೂ ಕ್ರಿಯಾತ್ಮಕವಾಗಿ ಪಾಲ್ಗೊಂಡ ಎಲ್ಲಾ ಸಿಬ್ಬಂದಿ ವರ್ಗದವರ ಶ್ರಮ ಗ್ರಾಮೀಣ ಭಾಗದ ಜನರಿಗೆ ಅಂತ್ಯ ಸಂಸ್ಕಾರಕ್ಕೆ ಮುಕ್ತಿಧಾಮ ಆಗಲಿ ಎಂಬ ಸದಾಶಯದಿಂದ ಕೂಡಿದುದಾಗಿದೆ.

ಮಾನವನ ಅಸ್ಥಿ ಕೊನೆಗೆ ಸೇರುವ ತಾಣ ಮಸಣ. "ಬದುಕಿನ ಜಟಕಾ ಬಂಡಿ ಮಸಣ ಸೇರಿದಾಗ ಉಳಿಯುವುದು ಆ ವ್ಯಕ್ತಿಯ ಒಳಿತು ಕೆಡುಕುಗಳು ಮಾತ್ರ".

## ಕಾಮಗಾರಿ ವಿವರ

**ಕಾಮಗಾರಿ ಹೆಸರು :** ತುಮಟಿ ಗ್ರಾಮದ ಸರ್ವೆ ನಂ 20,21 ರಲ್ಲಿ ಸ್ಮಶಾನ ಅಭಿವೃದ್ಧಿ ಪಡಿಸುವುದು.

**ವರ್ಷ** : 2015–16

**ಅಂದಾಜು ಮೊತ್ತ** : 4,06,000

**ಕಾಮಗಾರಿ ಸಂಕೇತ** : 1505006020/LD/9447705761242

**ಸೃಜನೆಯಾದ ಮಾನವ ದಿನಗಳು** : 509

**ಜಿಲ್ಲೆ** : ಬಳ್ಳಾರಿ

**ತಾಲ್ಲೂಕು** : ಸಂಡೂರು

**ಗ್ರಾಮ ಪಂಚಾಯತಿ** : ಚೋರುನೂರು

**ಒಂದು ಸಶ್ಮಾನ ಅಭಿವೃದ್ಧಿ ನಿರ್ಮಾಣಕ್ಕೆ ಬೇಕಾಗುವ ಕೂಲಿ ಮತ್ತು ಸಾಮಾಗ್ರಿಗಳ ವಿವರ.**

**ಅಂದಾಜು ಮೊತ್ತ** : ರೂ. 406000/–

**ಕೂಲಿ ಮೊತ್ತ** : ರೂ. 49450/– (ಶೇಕಡ 12.18 ರಷ್ಟು)

**ಸಾಮಗ್ರಿ ಮೊತ್ತ** : ರೂ. 356549 (ಶೇಕಡ 87.82 ರಷ್ಟು)

**ಸೃಜನೆಯಾಗುವ ಮಾನವದಿನಗಳು** : 242 (ದಿನ ಒಂದಕ್ಕೆ 204 ರೂಗಳಂತೆ)

**ಸ್ಮಶಾನ ಅಭಿವೃದ್ಧಿ ನಿರ್ಮಾಣದ ಫಲಶ್ರುತಿಗಳು**

1. ಸಾರ್ವಜನಿಕರಿಗೆ ಶವಸಂಸ್ಕಾರ ಮಾಡಲು ಅನುಕೂಲ.
2. ಅಂತ್ಯಸಂಸ್ಕಾರ ಸಂದರ್ಭದಲ್ಲಿ ಬರುವ ಸಾರ್ವಜನಿಕರಿಗಾಗಿ ನೆರಳು ಮತ್ತು ನೀರಿನ ವ್ಯವಸ್ಥೆ.
3. ಸರ್ಕಾರದ ಅನುದಾನವನ್ನು ಕೂಲಿವೆಚ್ಚಕ್ಕಾಗಿ ಪಾವತಿಸುವ ಮೂಲಕ ಅಲ್ಲಿನ ಗ್ರಾಮದ ಸ್ಮಶಾನ ಅಭಿವೃದ್ಧಿ.
4. ಯೋಜನೆಯಿಂದ ನರೇಗಾ ಅಡಿ ಉತ್ತಮ ಕೆಲಸ ಪಡೆಯಲು ಹಾಗೂ ಕೂಲಿಕಾರರಿಗೆ ಕೆಲಸ.
5. ಸ್ಮಶಾನಕ್ಕಾಗಿ ಕಾಯ್ದಿರಿಸಿದ ಸ್ಥಳದ ಅತಿಕ್ರಮಣ ತಡೆಯುವುದು.

ಯಶೋಗಾಥೆ

# ಮುದ್ದಾಪುರ ಗ್ರಾಮ ಪಂಚಾಯತಿಯಲ್ಲಿ ದನದ ಕೊಟ್ಟಿಗೆ ಕಾಮಗಾರಿಯ ಯಶೋಗಾಥೆ

–ರವೀಂದ್ರನಾಥ ಎಂ.ಎಸ್.

ರೈತ ರುದ್ರಪ್ಪನು ತನ್ನ ತಂದೆ ತಾಯಿಯಂತೆ ಹಸುಗಳನ್ನು ಸಾಕಿದ್ದ. ಹಸುಗಳಿಂದ ಹೊಲವನ್ನು ಉಳುವುದು ಮತ್ತು ಇತರೆ ಕೆಲಸಗಳಿಗೆ ಹಸು ಮತ್ತು ದನಕರುಗಳೆ ಈತನಿಗೆ ಜೀವಾಳವಾಗಿತ್ತು. ರುದ್ರಪ್ಪನು ಪರಿಶಿಷ್ಟ ಪಂಗಡದವನಾಗಿದ್ದು ಕಡುಬಡವನಾಗಿದ್ದರಿಂದ ಅವನಲ್ಲಿ ತನ್ನ ಹಸು ಮತ್ತು ದನಕರುಗಳನ್ನು ಕಟ್ಟಿಕೊಳ್ಳಲು ಸೂಕ್ತವಾದ ಸ್ಥಳ ಮತ್ತು ವ್ಯವಸ್ಥೆ ಇಲ್ಲದಿದ್ದಕ್ಕೆ ಮನೆಯ ಮುಂದೆ ಆತನ ಹಸುಗಳನ್ನು ಕಟ್ಟಿಕೊಳ್ಳುತ್ತಿದ್ದ ಹಾಗೂ ಅವುಗಳನ್ನು ನೋಡಿಕೊಳ್ಳುವುದು ತುಂಬಾ ಕಷ್ಟವಾಗಿತ್ತು.



ಶ್ರೀ ರುದ್ರಪ್ಪರವರು ನರೇಗಾ ಯೋಜನೆಯಡಿಯಲ್ಲಿ ದನದ ಕೊಟ್ಟಿಗೆಯನ್ನು ನಿರ್ಮಿಸಿಕೊಂಡು ಯಶಸ್ವಿಯಾಗಿ ಉಪಯೋಗಿಸುತ್ತಿದ್ದಾರೆ.

ಒಂದು ದಿನ ರುದ್ರಪ್ಪನು ತನ್ನ ಹೊಲದ ಕೆಲಸವನ್ನು ಮುಗಿಸಿಕೊಂಡು ತನ್ನ ಮನೆಯ ಮುಂದೆ ದನ ಕಟ್ಟುವುದಕ್ಕೆ ಜಾಗವಿಲ್ಲದಿದ್ದಕ್ಕೆ ತನ್ನ ಸ್ನೇಹಿತನ ಮನೆಯ ಹತ್ತಿರ ಖಾಲಿ ಜಾಗದಲ್ಲಿ ಕಟ್ಟಿ ಮರುದಿನ ತನ್ನ ಜಮೀನನ್ನು ಬೇಸಾಯ ಮಾಡಬೇಕೆಂದು ಯೋಚಿಸಿ ಆತ ತನ್ನ ಮನೆಗೆ ಹೊರಟು ಹೋದ.

ಮರುದಿನ ತನ್ನ ಸ್ನೆಹಿತನ ಮನೆಯಲ್ಲಿದ್ದ ದನಗಳ ಬಳಿ ಹೋಗುತ್ತಾನೆ, ಆದರೆ ಆತನಿಗೆ ಒಂದು ಆಘಾತಕರ ಸಂಗತಿ ಕಾದಿತ್ತು. ಅದೇನೆಂದರೆ ತನ್ನ ಹಸುವನ್ನು ರಾತ್ರಿ ಒಂದು ಹಾವು ಕಚ್ಚಿತ್ತು. ಪರಿಣಾಮ ಒಂದು ಹಸು ಸತ್ತು ಹೋಗಿತ್ತು. ಆತನಿಗೆ ಬರಸಿಡಿಲು ಬಡಿದಂತಾಯಿತು. ಆತನಿಗೆ ಜೀವನಾಧಾರ ವಾಗಿದ್ದ ಹಸು ಸತ್ತು ಹೋಗಿದ್ದರಿಂದ ದಿಕ್ಕೇ ತೋಚದಂತಾಯಿತು.

ಜಿಲ್ಲಾ ಐಇಸಿ ಸಂಯೋಜಕರು, ಜಿಲ್ಲಾ ಪಂಚಾಯತ್ ಚಿತ್ರದುರ್ಗ



ಅದೇ ದಿನದಂದು ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಜಿಲ್ಲಾ ಪಂಚಾಯತ್ ಚಿತ್ರದುರ್ಗದ ವತಿಯಿಂದ ಮುದ್ದಾಪುರ ಗ್ರಾಮ ಪಂಚಾಯತಿಯಲ್ಲಿ "ರೋಜ್‌ಗಾರ್ ದಿವಸ್" ಕಾರ್ಯಕ್ರಮವನ್ನು ಆಯೋಜಿಲಾಗಿತ್ತು. ರುದ್ರಪ್ಪ ತನ್ನ ಸ್ನೇಹಿತನ ಸಲಹೆಯಂತೆ ಕಾರ್ಯಕ್ರಮಕ್ಕೆ ಬಂದು ರೋಜ್‌ಗಾರ್ ಕಾರ್ಯಕ್ರಮದಲ್ಲಿ ಭಾಗವಹಿಸಿ, ಜಾಬ್ ಕಾರ್ಡ್ ಹೊಂದಿದ್ದರಿಂದ ಹಾಗೂ ಕೂಲಿ ಕೆಲಸಕ್ಕೆ ಬರಲು ಅರ್ಜಿ ಸಂಖ್ಯೆ 6ನ್ನು ಭರ್ತಿ ಮಾಡಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಬಳಿ ತಮ್ಮ ಅಳಲನ್ನು ತೊಡಿಕೊಂಡನು. ನಂತರ ದನದ ಕೊಟ್ಟಿಗೆ ಕಟ್ಟುವುದರ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ಪಡೆದು ನಂತರ ದನದ ಕೊಟ್ಟಿಗೆ ಕಟ್ಟಿಕೊಳ್ಳುವುದಕ್ಕೆ ಪ್ರಾರಂಭಿಸಿದನು.



ರುದ್ರಪ್ಪನ ಮನೆಯ ಅಂಗಳದಲ್ಲಿ ದನದ ಕೊಟ್ಟಿಗೆಯನ್ನು ನಿರ್ಮಿಸಲಾಯಿತು ಈ ದನದ ಕೊಟ್ಟಿಗೆ ನಿರ್ಮಾಣದಿಂದ ಎತ್ತುಗಳಿಗೆ ತುಂಬಾ ಅನುಕೂಲ ವಾಗಿದೆ. ತುಂಬಾ ವ್ಯವಸ್ಥಿತವಾಗಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಮಾರ್ಗಸೂಚಿಯಂತೆ ಈ ಕಾಮಗಾರಿ ಯನ್ನು ಮಾಡಲಾಗಿದ್ದು, ದನಗಳು ಹುಲ್ಲು ಮೇಯುವುದಕ್ಕೆ ಹುಲ್ಲು ಸಿಗುವಂತೆ ಮುಂದಕ್ಕೆ ಒಂದು ಕಟ್ಟೆ ಕಟ್ಟಲಾಗಿದೆ ಮತ್ತು ಎತ್ತು ನಿಲ್ಲುವ ಜಾಗದಲ್ಲಿ ಗಾರೆಯನ್ನು ಹಾಕಲಾಗಿದೆ ಹಸುವಿನ ಗಂಜು ಸೀದಾ ಹರಿದು ತೊಟ್ಟಿಯಲ್ಲಿ ಶೇಖರವಾಗುವಂತೆ ಮಾಡ ಲಾಗಿದೆ. ಮೇಲ್ಛಾವಣಿಗೆ ಸಿಮೆಂಟ್ ತಗಡುಗಳನ್ನು ಹಾಕಲಾಗಿದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಿಂದ ನಮ್ಮ ಮನೆಗೆ ದನದ ಕೊಟ್ಟಿಗೆ ನಿರ್ಮಾಣವಾಯಿತು ಹಾಗೂ ನನಗೆ ಕೂಲಿಯು ಬಂತು, ದನಕರುಗಳಿರುವ ರೈತರುಗಳು ನಮ್ಮ ದನದ ಕೊಟ್ಟಿಗೆಗೆ ಭೇಟಿ ನೀಡುತ್ತಾರೆ, ನಮ್ಮಂತೆ ಅವರು ಕೂಡ ಈ ಸೌಲಭ್ಯ ಪಡೆದುಕೊಳ್ಳಲು ಉತ್ಸುಕರಾಗಿದ್ದಾರೆ ಎಂದು ರುದ್ರಪ್ಪನವರು ಹೆಮ್ಮೆಯಿಂದ ಹೇಳುತ್ತಾರೆ.

ಕವಿಯ(ಕ್ಷ)ಪ್ರಶ್ನೆ?

# ಗ್ರಾಮೀಣ ಈಜುಕೊಳ

ಪ್ರತಿನಿತ್ಯವೂ ನಾವು ಮತ್ತು ನೀವು ಒಂದಲ್ಲ ಒಂದು ದಿನಪತ್ರಿಕೆಯಲ್ಲಿ ಪ್ರಕಟಗೊಳ್ಳುವ ಗ್ರಾಮೀಣ ಪ್ರದೇಶದ ಕೆರೆ, ಕಟ್ಟೆ, ಕುಂಟೆ, ಕಾಲುವೆ ಮತ್ತು ಬಾವಿಗಳಿಗೆ ಕಾಲುಜಾರಿ ಬಿದ್ದು, ದನಗಳ ಮೈತೊಳೆಯಲು ಹೋಗಿ, ಈಜು ಕಲಿಯಲು ಹೋಗಿ ಮುಳುಗಿ ಸಾವಿಗೀಡಾಗಿರುವ ಅನೇಕ ಯುವಕ ಯುವತಿಯರ ಕಳೇಬರದ ಫೋಟೋಗಳನ್ನು ನೋಡಿ ಮರುಕಪಡುತ್ತಲೇ ಇದ್ದೇವೆ. ರಾಷ್ಟ್ರದ ಅತ್ಯಮೂಲ್ಯ ಆಸ್ತಿಯಾದ ಯುವಶಕ್ತಿಯ ಅಕಾಲಿಕ ಸಾವಿನಿಂದಾಗಿ ಅವರ ಕುಟುಂಬಗಳಿಗೆ, ಸಮಾಜಕ್ಕೆ ಅಂತಿಮವಾಗಿ ದೇಶಕ್ಕೆ ತುಂಬಲಾರದ ನಷ್ಟ ಉಂಟಾಗುತ್ತಲೇ ಇದೆ.

ಇದಕ್ಕೆಲ್ಲ ಮೂಲಕಾರಣ ಗ್ರಾಮೀಣ ಪ್ರದೇಶಗಳಲ್ಲಿ ಈಜು ಕಲಿಯಲು ವ್ಯವಸ್ಥಿತವಾದ ಮೂಲಸೌಕರ್ಯಗಳಾದ ಈಜುಕೊಳಗಳು ಇಲ್ಲದಿರುವುದೇ ಆಗಿದೆ. ಈಜು ಕಲಿಯುವಿಕೆಯಿಂದ ವಂಚಿತರಾದ ಗ್ರಾಮೀಣ ಯುವಕ ಯುವತಿಯರು, ತಮ್ಮ ದಿನನಿತ್ಯದ ಬದುಕಿನ ಅನಿವಾರ್ಯತೆಗಳಾದ ದನಕರುಗಳ ಮೈತೊಳೆಯುವುದು, ಬಟ್ಟೆ ತೊಳೆಯುವುದು, ಹುಲ್ಲು-ಸೊಪ್ಪು, ಗೆಡ್ಡೆ-ಗೆಣಸು ತೊಳೆಯುವುದಕ್ಕಾಗಿ ಕೆರೆ, ಕಟ್ಟೆ, ಕುಂಟೆ ಕಾಲುವೆಗಳಿಗೆ ಇಳಿದು ಕಾಲುಜಾರಿ ಬಿದ್ದು ಬಲಿಪಶುಗಳಾಗುತ್ತಿದ್ದಾರೆ.

ಗ್ರಾಮೀಣಾಭಿವೃದ್ಧಿ ಮಂತ್ರಾಲಯ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಮಂತ್ರಾಲಯವು ಗ್ರಾಮೀಣ ಪ್ರದೇಶಗಳಲ್ಲಿ ವ್ಯವಸ್ಥಿತವಾದ ಈಜುಕೊಳಗಳನ್ನು ನಿರ್ಮಿಸಿ ನಿರ್ವಹಣೆ ಮಾಡಿದರೆ ದೇಶದ ಅಮೂಲ್ಯವಾದ ಯುವ ಜೀವಗಳನ್ನು ರಕ್ಷಿಸಬಹುದಲ್ಲವೇ ?



## ಈ ಕುರಿತು ಆತ್ಮಾವಲೋಕನಕ್ಕಾಗಿ ಕೆಲವು ಪ್ರಶ್ನೆಗಳು.

1) ಗ್ರಾಮೀಣ ಮೂಲಸೌಕರ್ಯಗಳಾದ ರಸ್ತೆ, ಚರಂಡಿ, ಸೇತುವೆ, ಒಕ್ಕಣೆ ಕಣ, ಆಟದ ಮೈದಾನಗಳಂತೆಯೇ "ಗ್ರಾಮೀಣ ಈಜುಕೊಳ" ಕೂಡ ಅತ್ಯಗತ್ಯವಲ್ಲವೇ ?

2) ನಮ್ಮ ರಾಷ್ಟ್ರದ ಅತ್ಯಮೂಲ್ಯ ಆಸ್ತಿಯಾದ ಯುವ ಸಮೂಹವನ್ನು ರಕ್ಷಿಸುವ ಹೊಣೆಗಾರಿಕೆ ನಮ್ಮ -ನಿಮ್ಮದಲ್ಲವೇ?

3) ಪತ್ರಿಕಾ ಪ್ರತಿನಿಧಿಗಳು, ಸಾರ್ವಜನಿಕರು ಹಾಗೂ ಚುನಾಯಿತ ಪ್ರತಿನಿಧಿಗಳು ಈ ಬಗ್ಗೆ ಸರ್ಕಾರಕ್ಕೆ ಮನವರಿಕೆ ಮಾಡಿ ಕೊಡಬೇಕಲ್ಲವೇ ?

4) ಗ್ರಾಮೀಣಾಭಿವೃದ್ಧಿ ಮಂತ್ರಾಲಯ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಮಂತ್ರಾಲಯ ಈ ಬಗ್ಗೆ ಕ್ರಮ ವಹಿಸಬೇಕಲ್ಲವೇ?

**ಉಮೇಶ್ ಹೆಚ್. ಸಿ. (ಹುಲಿಕುಂಟೆ)**
ಜಿಲ್ಲಾ ಐ.ಇ.ಸಿ ಸಂಯೋಜಕರು,
ಜಿಲ್ಲಾ ಪಂಚಾಯತ್, ತುಮಕೂರು

ಕಾವ್ಯ ವಿಕಾಸ

# ಕಟ್ಟೋಣ ಬನ್ನಿರಿ ಮುಟ್ಟೋಣ ಬನ್ನಿರಿ

ಕಟ್ಟೋಣ ಬನ್ನಿರಿ ತೆರಿಗೆಯನ್ನು
ಮುಟ್ಟೋಣ ಬನ್ನಿರಿ ಗುರಿಯನ್ನು ॥
ಪಡೆಯೋಣ ಬನ್ನೀರಿ ಸವಲತ್ತನ್ನು
ಅಭಿವೃದ್ಧಿ ಪಥದತ್ತ ಸಾಗೋಣ ಬನ್ನಿರಿ ॥

ಕಟ್ಟೋಣ ಬನ್ನಿರಿ ತೆರಿಗೆಯನ್ನು
ಮುಟ್ಟೋಣ ಬನ್ನಿರಿ ಗುರಿಯನ್ನು ॥

ತೆರಿಗೆ ಹಣದಿಂದ ನಿರ್ಮಾಣ ಮಾಡ್ಯಾರಾ
ಗುಮ್ಮಗೋಳ ಪಂಚಾಯತಿ ಕಟ್ಟಡವನ್ನಾ ॥
ಇಲ್ಲಿಯ ಜನರು ಕಟ್ಟುವರಣ್ಣಾ ಕಾಲಕಾಲಕ್ಕೆ ತೆರಿಗೆಯನ್ನಾ
ಶೇಕಡ ನೂರರ ಗುರಿಯನ್ನು ಮುಟ್ಟುವರಣ್ಣಾ ॥

ಕಟ್ಟೋಣ ಬನ್ನಿರಿ ತೆರಿಗೆಯನ್ನು
ಮುಟ್ಟೋಣ ಬನ್ನಿರಿ ಗುರಿಯನ್ನು ॥

ನಾವೆಲ್ಲಾ ಕಟ್ಟೋಣ ತೆರಿಗೆಯನ್ನಾ
ನಾವೆಲ್ಲಾ ಮುಟ್ಟೋಣ ಶೇಕಡ ನೂರರ ಗುರಿಯನ್ನ ॥
ವರುಷ ಮುಗಿಯಲು ಬಂತು ಹರುಷದಿಂದ ಕಟ್ಟೋಣ
ಬಾಕಿ ಚಾಲ್ತಿ ತೆರಿಗೆಯನ್ನ  ನಾವೆಲ್ಲರು ॥

ಕಟ್ಟೋಣ ಬನ್ನಿರಿ ತೆರಿಗೆಯನ್ನು
ಮುಟ್ಟೋಣ ಬನ್ನಿರಿ ಗುರಿಯನ್ನು ॥

ಹೊಸ ವರುಷದ ಶುಭಾಷಯ ತಿಳಸೋಣ ಬನ್ನಿರಿ
ಗ್ರಾಮದ ಅಭಿವೃದ್ಧಿಗೆ ಶ್ರಮಿಸೋಣ ಬನ್ನೀರಿ
ಕಟ್ಟೋಣ ಬನ್ನಿರಿ ತೆರಿಗೆಯನ್ನು ಮುಟ್ಟೋಣ ಬನ್ನಿರಿ ಗುರಿಯನ್ನು ॥

– ಪಿ ಶಿವರಾಮ ರೆಡ್ಡಿ
ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು
ಗ್ರಾಮ ಪಂಚಾಯತ್ ತಾಳೂರು.
ಸಿರುಗಪ್ಪ ತಾ॥, ಬಳ್ಳಾರಿ ಜಿ॥

# ಗ್ರಾಮ ಪಂಚಾಯತಿಗಳ ಜಿಲ್ಲಾವಾರು ಪಂಚತಂತ್ರ ಪ್ರಗತಿಯ ವರದಿ ದಿನಾಂಕ 29-01-2016 ರಲ್ಲಿದ್ದಂತೆ.

| ಜಿಲ್ಲೆಯ ಹೆಸರು | ಪಂಚಾಯತಿಗಳ ಸಂಖ್ಯೆ | 2011-12 ನೇ ಸಾಲಿನ ಬ್ಯಾಲೆನ್ಸ್ ಶೀಟ್ ಪೂರ್ಣಗೊಳಿಸಿದ ಶೇಕಡವಾರು ಗ್ರಾ.ಪಂ.ಗಳು | 2012-13 ನೇ ಸಾಲಿನಲ್ಲಿ ಬ್ಯಾಲೆನ್ಸ್ ಶೀಟ್ ಪೂರ್ಣಗೊಳಿಸಿದ ಶೇಕಡವಾರು ಗ್ರಾ.ಪಂ.ಗಳು | 2013-14 ನೇ ಸಾಲಿನಲ್ಲಿ ಬೇಡಿಕೆಯಂತೆ ಶೇ 60 ಕ್ಕಿಂತ ಹೆಚ್ಚು ಆಸ್ತಿ ತೆರಿಗೆ ವಸೂಲಾತಿ ಮಾಡಿರುವ ಶೇಕಡವಾರು ಗ್ರಾ.ಪಂ ಗಳು | ಹಾಲಿ ಆರ್ಥಿಕ ವರ್ಷದಲ್ಲಿ ರಾಜ್ಯದ ಸರಾಸರಿಗಿಂತ ಶೇಕಡ 75 ಕ್ಕಿಂತ ಹೆಚ್ಚು ಜಿಎಸ್‌ಸಿ ಬೇಡಿಕೆಗಳನ್ನು ಪಡೆದ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ ಶೇಕಡ 95 ಕ್ಕಿಂತ ಹೆಚ್ಚು ಜಿಎಸ್‌ಸಿ ಬೇಡಿಕೆಗಳನ್ನು ನಿಗದಿತ ಸಮಯದಲ್ಲಿ ವಿತರಿಸಿದ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ ಹಿಂದಿನ ಮಾಹೆಯಲ್ಲಿ ನಡೆಸಿದ ಸಾಮಾನ್ಯ ಸಭೆ ಹಾಗೂ ಅದರ ನಡವಳಿಯನ್ನು ಸ್ಕ್ಯಾನ್ ಮಾಡಿ ಅಪ್ ಲೋಡ್ ಮಾಡಿರುವ ಶೇಕಡವಾರು ಗ್ರಾ.ಪಂ. ಗಳು | ಹಿಂದಿನ ದಿನದ ಹಾಜರಾತಿ ದಾಖಲಿಸಿದ ಶೇಕಡವಾರು ಗ್ರಾ.ಪಂಗಳು | ಒಟ್ಟಾರೆ ಶೇಕಡವಾರು ಸಾಧನೆ | ಶ್ರೇಣಿ |
|---|---|---|---|---|---|---|---|---|---|---|
| ರಾಮನಗರ | 127 | 100 | 99 | 0 | 74 | 88 | 98 | 86 | 77 | 1 |
| ಉತ್ತರ ಕನ್ನಡ | 231 | 89 | 89 | 74 | 26 | 76 | 94 | 84 | 76 | 2 |
| ಬೆಂಗಳೂರು (ಗ್ರಾ) | 105 | 93 | 93 | 15 | 82 | 69 | 92 | 86 | 75 | 3 |
| ಕೋಲಾರ | 156 | 100 | 99 | 0 | 100 | 85 | 85 | 54 | 74 | 4 |
| ಉಡುಪಿ | 158 | 90 | 90 | 54 | 54 | 34 | 98 | 91 | 73 | 5 |
| ಬಾಗಲಕೋಟೆ | 198 | 79 | 79 | 5 | 73 | 91 | 100 | 71 | 71 | 6 |
| ಮಂಡ್ಯ | 234 | 99 | 99 | 1 | 43 | 89 | 96 | 71 | 71 | 7 |
| ದಕ್ಷಿಣ ಕನ್ನಡ | 230 | 87 | 87 | 80 | 13 | 45 | 97 | 89 | 71 | 8 |
| ಚಿಕ್ಕಬಳ್ಳಾಪುರ | 157 | 96 | 96 | 3 | 84 | 77 | 78 | 57 | 70 | 9 |
| ಕೊಡಗು | 104 | 94 | 94 | 48 | 1 | 60 | 99 | 88 | 69 | 10 |
| ಬೀದರ್ | 186 | 94 | 94 | 0 | 52 | 68 | 93 | 73 | 67 | 11 |
| ತುಮಕೂರು | 331 | 96 | 96 | 1 | 77 | 62 | 81 | 57 | 67 | 12 |
| ಶಿವಮೊಗ್ಗ | 271 | 95 | 95 | 21 | 38 | 78 | 97 | 48 | 67 | 13 |
| ಮೈಸೂರು | 266 | 87 | 87 | 0 | 57 | 69 | 92 | 81 | 67 | 14 |
| ದಾವಣಗೆರೆ | 233 | 97 | 97 | 1 | 52 | 93 | 87 | 33 | 65 | 15 |
| ಧಾರವಾಡ | 144 | 88 | 88 | 4 | 54 | 88 | 95 | 44 | 65 | 16 |
| ಚಾಮರಾಜನಗರ | 130 | 91 | 90 | 0 | 29 | 65 | 82 | 96 | 64 | 17 |
| ಚಿಕ್ಕಮಗಳೂರು | 227 | 99 | 99 | 22 | 19 | 43 | 94 | 65 | 63 | 18 |
| ಹಾವೇರಿ | 223 | 92 | 92 | 0 | 53 | 72 | 90 | 47 | 63 | 19 |
| ಗದಗ | 122 | 86 | 86 | 0 | 56 | 80 | 91 | 37 | 62 | 20 |
| ಚಿತ್ರದುರ್ಗ | 189 | 97 | 97 | 0 | 61 | 73 | 83 | 26 | 62 | 21 |
| ಹಾಸನ | 267 | 96 | 96 | 7 | 28 | 41 | 96 | 67 | 61 | 22 |
| ಬೆಂಗಳೂರು (ನ) | 96 | 84 | 84 | 31 | 48 | 13 | 89 | 76 | 60 | 23 |
| ವಿಜಯಪುರ | 213 | 90 | 90 | 0 | 48 | 45 | 81 | 27 | 54 | 24 |
| ಬಳ್ಳಾರಿ | 199 | 91 | 91 | 1 | 7 | 46 | 94 | 38 | 52 | 25 |
| ಬೆಳಗಾವಿ | 502 | 93 | 93 | 0 | 18 | 55 | 75 | 33 | 52 | 26 |
| ರಾಯಚೂರು | 180 | 88 | 87 | 1 | 36 | 41 | 71 | 28 | 50 | 27 |
| ಕೊಪ್ಪಳ | 153 | 84 | 84 | 0 | 19 | 41 | 95 | 28 | 50 | 28 |
| ಕಲಬುರಗಿ | 264 | 83 | 80 | 0 | 18 | 42 | 69 | 2 | 42 | 29 |
| ಯಾದಗಿರಿ | 123 | 92 | 92 | 8 | 0 | 29 | 61 | 4 | 40 | 30 |

# ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆಯ ಜಿಲ್ಲಾವಾರು ಸಕಾಲ ಪ್ರಗತಿ ವರದಿ (ಜನವರಿ 2016)

| ಜಿಲ್ಲೆ | ತಿಂಗಳಲ್ಲಿ ಜಿಎಸ್‌ಸಿ ಸ್ವೀಕೃತಿ (ಸಂಖ್ಯೆ) | ತಿಂಗಳಲ್ಲಿ ಜಿಎಸ್‌ಸಿ ವಿಲೇವಾರಿ | ವಿಳಂಬವಾಗಿ ವಿಲೇವಾರಿ ಆಗಿರುವುದು (ಶೇಕಡವಾರು) | ವಿಳಂಬವಾಗಿ ವಿಲೇವಾರಿ ಆಧರಿಸಿ ಪಡೆದ ಶ್ರೇಣಿ | ಒಂದು ಲಕ್ಷ ಜನಸಂಖ್ಯೆಗೆ ಸ್ವೀಕೃತಿಯಾದ ಜಿಎಸ್‌ಸಿಗಳು | ಒಂದು ಲಕ್ಷ ಜನಸಂಖ್ಯೆಗೆ ಜಿಎಸ್‌ಸಿ ಸ್ವೀಕೃತಿ ಆಧರಿಸಿ ಪಡೆದ ಶ್ರೇಣಿ | ಅಂತಿಮವಾಗಿ ಪಡೆದ ಶ್ರೇಣಿ [ (ಅ) ಯ ಪ್ರಾಮುಖ್ಯತೆಯನ್ನಾಧರಿಸಿ ಶೇಕಡ 30 ರಷ್ಟು ಮತ್ತು (ಈ) ನ ಪ್ರಾಮುಖ್ಯತೆಯನ್ನಾಧರಿಸಿ ಶೇಕಡ 70 ರಷ್ಟು] |
|---|---|---|---|---|---|---|---|
| | A | B | C | D | E | F | G |
| ಚಿಕ್ಕಬಳ್ಳಾಪುರ | 20158 | 20471 | 0.2 | 4 | 1679 | 2 | 1 |
| ಬಾಗಲಕೋಟೆ | 11856 | 11787 | 0.2 | 4 | 658 | 4 | 2 |
| ಶಿವಮೊಗ್ಗ | 8601 | 8142 | 0 | 1 | 505 | 6 | 3 |
| ಕೋಲಾರ | 25235 | 25258 | 1.4 | 14 | 1682 | 1 | 4 |
| ಉಡುಪಿ | 5245 | 5752 | 0.2 | 4 | 476 | 7 | 5 |
| ಬೆಂಗಳೂರು (ಗ್ರಾ) | 111450 | 11365 | 2 | 17 | 1272 | 3 | 6 |
| ಚಿಕ್ಕಮಗಳೂರು | 3276 | 3394 | 1.3 | 11 | 297 | 8 | 7 |
| ತುಮಕೂರು | 13737 | 13834 | 3.5 | 22 | 528 | 5 | 8 |
| ಉತ್ತರ ಕನ್ನಡ | 2696 | 2595 | 0 | 1 | 192 | 14 | 9 |
| ಮೈಸೂರು | 7119 | 6751 | 1.3 | 11 | 245 | 11 | 10 |
| ಚಿತ್ರದುರ್ಗ | 4292 | 4355 | 2.1 | 18 | 268 | 10 | 11 |
| ಬೀದರ್ | 4660 | 4283 | 2.9 | 21 | 274 | 9 | 12 |
| ಚಾಮರಾಜನಗರ | 1209 | 1188 | 1.3 | 11 | 120 | 17 | 13 |
| ರಾಯಚೂರು | 3914 | 3909 | 4.9 | 23 | 206 | 12 | 14 |
| ಮಂಡ್ಯ | 1964 | 1872 | 0.9 | 9 | 109 | 19 | 15 |
| ವಿಜಯಪುರ | 4139 | 4054 | 5.7 | 25 | 197 | 13 | 16 |
| ಗದಗ | 1319 | 1361 | 2.4 | 19 | 131 | 16 | 17 |
| ಕೊಪ್ಪಳ | 1438 | 1417 | 1.6 | 15 | 110 | 18 | 18 |
| ದಕ್ಷಿಣ ಕನ್ನಡ | 1315 | 1288 | 0.2 | 4 | 65 | 23 | 19 |
| ಬೆಳಗಾವಿ | 1582 | 1451 | 0 | 1 | 33 | 26 | 20 |
| ರಾಮನಗರ | 1710 | 1922 | 10.4 | 27 | 171 | 15 | 21 |
| ದಾವಣಗೆರೆ | 1927 | 1990 | 1.8 | 16 | 101 | 20 | 22 |
| ಕೊಡಗು | 320 | 304 | 1 | 10 | 64 | 24 | 23 |
| ಧಾರವಾಡ | 1064 | 1049 | 0.3 | 8 | 59 | 25 | 2 |
| ಹಾವೇರಿ | 1514 | 1494 | 6.6 | 26 | 100 | 21 | 25 |
| ಹಾಸನ | 1455 | 1546 | 5.2 | 24 | 85 | 22 | 26 |
| ಬಳ್ಳಾರಿ | 654 | 619 | 2.7 | 20 | 26 | 27 | 27 |
| ಬೆಂಗಳೂರು (ನ) | 2347 | 2871 | 29.5 | 30 | 24 | 28 | 28 |
| ಕಲಬುರಗಿ | 460 | 403 | 11.4 | 28 | 18 | 29 | 29 |
| ಯಾದಗಿರಿ | 42 | 42 | 26.2 | 29 | 3 | 30 | 30 |

ಸುತ್ತೋಲೆ

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 02–01–2016

ಸಂ:ಗ್ರಾಅಪ:03:ಗ್ರಾಪಂಕಾ:2016

# ಸುತ್ತೋಲೆ

**ವಿಷಯ** : ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಕ್ಷೇತ್ರೀಯ ಇಲಾಖೆಗಳು ವಹಿಸಿರುವ ಕಾರ್ಯಗಳನ್ನು ಹಿಂಪಡಿಯುವ ಬಗ್ಗೆ.

**ಉಲ್ಲೇಖ:** 1. ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ/313/ಗ್ರಾಪಂಕಾ/2013, ದಿನಾಂಕ : 3–3–2014

2. ಸುತ್ತೋಲೆ ಸಂಖ್ಯೆ : ಗ್ರಾಅಪ/ 67/ಉಖಾಯೋ/2009, ದಿನಾಂಕ : 16–6–2014

***

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿ ಗ್ರಾಮಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಉಲ್ಲೇಖಿತ–1 ರ ಸರ್ಕಾರದ ಆದೇಶದನ್ವಯ ಕಾರ್ಯಹಂಚಿಕೆ ಮಾಡಲಾಗಿರುತ್ತದೆ.

ಉಲ್ಲೇಖ–2 ರ ಸುತ್ತೋಲೆಯಲ್ಲಿ ಗ್ರಾಮ ಪಂಚಾಯತಿಗಳಲ್ಲಿ ಸಿಬ್ಬಂದಿ ಮತ್ತು ಮೂಲಭೂತ ಸೌಲಭ್ಯಗಳ ಕೊರತೆ ಇರುವುದರಿಂದ, ಹಾಲಿ ಇರುವ ಕಾರ್ಯದ ಒತ್ತಡವನ್ನು ನಿಭಾಯಿಸಲು ತೊಂದರೆಯಾಗುತ್ತಿರುವುದರಿಂದ, ಗ್ರಾಮ ಪಂಚಾಯತಿಗಳಲ್ಲಿ ಕಾರ್ಯಭಾರದ ಒತ್ತಡವನ್ನು ಪರಿಗಣಿಸಿ, ಗ್ರಾಮ ಪಂಚಾಯತಿಗಳಿಗೆ ಹೊಸ ಕಾರ್ಯಗಳನ್ನು ವಹಿಸುವ ಮುನ್ನ ಅನುಷ್ಠಾನ ಇಲಾಖೆಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯವರೊಂದಿಗೆ ಕಡ್ಡಾಯವಾಗಿ ಸಮಾಲೋಚಿಸಿ ಮುಂದಿನ ಕ್ರಮ ಕೈಗೊಳ್ಳಲು ಮತ್ತು ಇದನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡುವಂತೆ ಇಲಾಖಾ ಮುಖ್ಯಸ್ಥರಿಗೆ ಮುಖ್ಯ ಕಾರ್ಯದರ್ಶಿಗಳು ಸೂಚಿಸಿರುತ್ತಾರೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವತಿಯಿಂದ ರಾಜ್ಯ ಸರ್ಕಾರದ ಯೋಜನೆಗಳಾದ ಗ್ರಾಮ ವಿಕಾಸ ಯೋಜನೆ, ಗ್ರಾಮೀಣ ಕುಡಿಯುವ ನೀರು ಯೋಜನೆ, ಕಿರು ನೀರು ಸರಬರಾಜು ಯೋಜನೆ ಹಾಗೂ ಇನ್ನಿತರ ಪ್ರಮುಖ ಯೋಜನೆಗಳ ಅನುಷ್ಠಾನದ ಜೊತೆಗೆ ಭಾರತ ಸರ್ಕಾರದ ಎರಡು ಮಹತ್ತರ ಯೋಜನೆಗಳಾದ ಮಹಾತ್ಮಾಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ ಹಾಗೂ ಸ್ವಚ್ಛ ಭಾರತ ಮಿಷನ್ ಯೋಜನೆಗಳನ್ನು ಸ್ಥಳೀಯ ಮಟ್ಟದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ನೋಡಿಕೊಳ್ಳುತ್ತಿದ್ದಾರೆ. ಇತ್ತೀಚೆಗಷ್ಟೇ, ಅಂದರೆ ಸೆಪ್ಟೆಂಬರ್ ನಂತರ ಉದ್ಯೋಗ ಖಾತರಿ ಯೋಜನೆಯಡಿ ಮಾನವ ದಿನಗಳನ್ನು 43.51 ಲಕ್ಷ ಪ್ರತಿ ದಿನದಿಂದ 230.00 ಲಕ್ಷ ಪ್ರತಿ ದಿನಕ್ಕೆ ಹೆಚ್ಚಿಸಿದ್ದು, ಜಾಬ್ ಕಾರ್ಡ್ ಹೊಂದಿದವರಿಗೆ ವಾರಕ್ಕೊಮ್ಮೆ ನೀಡಲಾಗುವ ದಿನಗೂಲಿಯನ್ನು 9.8% ರಿಂದ 33.18%ಕ್ಕೇ

ಹೆಚ್ಚಿಸಲಾಗಿರುತ್ತದೆ ಹಾಗೂ ಸ್ವಚ್ಛ ಭಾರತ ಮಿಷನ್ ನಡಿ ಶೌಚಾಲಯ ನಿರ್ಮಾಣದ ಕಾರ್ಯದ ಪ್ರಗತಿಯ ವೇಗವನ್ನು ಹೆಚ್ಚಿಸಲು ತೀವ್ರ ನಿಗಾ ವಹಿಸಲಾಗಿರುತ್ತದೆ. ಅಲ್ಲದೇ, ಇನ್ನು ಮೂರು ತಿಂಗಳಲ್ಲಿ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆಗಳ ಅನುಷ್ಠಾನದ ವೇಗವನ್ನು ಕೂಡಾ ಹೆಚ್ಚಿಸುವ ಅಗತ್ಯತೆ ಇರುತ್ತದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಗ್ರಾಮೀಣ ಭಾಗದಲ್ಲಿ ನಿರ್ವಹಿಸುತ್ತಿರುವ ಬಹುತೇಕ ಯೋಜನೆಗಳು ಭಾರತ ಸರ್ಕಾರದ ಅನುದಾನದ ನೆರವಿನಿಂದ ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಯೋಜನೆಗಳ ಅನುದಾನವನ್ನು ಸಂಪೂರ್ಣವಾಗಿ ಬಳಸಿಕೊಳ್ಳದಿದ್ದಲ್ಲಿ, ಮುಂದಿನ ಆರ್ಥಿಕ ವರ್ಷದಿಂದ ಈ ಯೋಜನೆಗಳಿಗೆ ಭಾರತ ಸರ್ಕಾರದ ಅನುದಾನ ಕಡಿತವಾಗುವ ಸಂಭವವಿರುತ್ತದೆ.

ಆದರೆ, ಇತ್ತೀಚಿನ ದಿನಗಳಲ್ಲಿ ಬೇರೆ ಬೇರೆ ಇಲಾಖೆಗಳು ವಿವಿಧ ಕಾರ್ಯಗಳ ಮೇಲುಸ್ತುವಾರಿಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಗಮನಕ್ಕೆ ತಾರದೇ, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಹೆಚ್ಚುವರಿ ಕಾರ್ಯಭಾರವನ್ನು ನೀಡುತ್ತಿರುವುದು ಗಮನಕ್ಕೆ ಬಂದಿರುತ್ತದೆ. ಮುಖ್ಯ ಕಾರ್ಯದರ್ಶಿಗಳು ಹೊರಡಿಸಿರುವ ಮೇಲ್ಕಂಡ ಸುತ್ತೋಲೆಯಲ್ಲಿ ಕಟ್ಟುನಿಟ್ಟಿನ ಸೂಚನೆಯನ್ನು ನೀಡಿದ್ದರೂ ಸಹಾ ಕ್ಷೇತ್ರೀಯ ಇಲಾಖೆಗಳು ಅದನ್ನು ಪಾಲಿಸದೇ ಹೆಚ್ಚುವರಿ ಕಾರ್ಯಗಳನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ನೀಡುತ್ತಿರುವುದು ಕಂಡುಬಂದಿರುತ್ತದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವತಿಯಿಂದ ಭಾರತ ಸರ್ಕಾರದ ಹಲವಾರು ಜನೋಪಯೋಗಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು ಅವುಗಳ ಕಾರ್ಯವೇ ಸಾಕಷ್ಟು ಇರುವುದರಿಂದ, ಇವರಿಗೆ ಬೇರೆ ಕ್ಷೇತ್ರೀಯ ಇಲಾಖೆಗಳ ಯೋಜನೆಗಳನ್ನು ಅನುಷ್ಠಾನಗೊಳಿಸುವುದಾಗಲೀ ಅಥವಾ ಮೇಲುಸ್ತುವಾರಿ ನೀಡಿದಲ್ಲಿ ನಮ್ಮ ಇಲಾಖೆಯು ನಿಗದಿಗೊಳಿಸಿರುವ ಗುರಿಯನ್ನು ನಿಗದಿತ ಅವಧಿಯಲ್ಲಿ ಕಾರ್ಯಗತಗೊಳಿಸಲು ಸಾಧ್ಯವಾಗುವುದಿಲ್ಲ.

ಈ ಹಿನ್ನೆಲೆಯಲ್ಲಿ ಹಾಗೂ ಉಲ್ಲೇಖ-2 ರ ಮುಖ್ಯ ಕಾರ್ಯದರ್ಶಿಗಳ ಸೂಚನೆಯನ್ವಯ ಕ್ಷೇತ್ರ ಇಲಾಖೆಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯೊಂದಿಗೆ ಸಮಾಲೋಚನೆ ನಡೆಸದೇ ನೀಡಲಾಗಿರುವ ಜವಾಬ್ದಾರಿಗಳನ್ನು ಕೂಡಲೇ ಹಿಂಪಡೆಯುವಂತೆ ಹಾಗೂ ಇನ್ನು ಮುಂದೆ ಯಾವುದೇ ಕ್ಷೇತ್ರೀಯ ಇಲಾಖೆಗಳ ಜವಾಬ್ಧಾರಿಯನ್ನು ವಹಿಸದಂತೆ ಕಟ್ಟುನಿಟ್ಟಾಗಿ ಸೂಚನೆ ನೀಡಲಾಗಿದೆ.

(ಎನ್.ನಾಗಾಂಬಿಕಾ ದೇವಿ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಸುತ್ತೋಲೆ

**ಕರ್ನಾಟಕ ಸರ್ಕಾರ**

ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ,
ಬೆಂಗಳೂರು–1. ದೂ. 080–22372738
E-mail: nregs-ka@nic.in

ಸಂ:ಗ್ರಾಅಪ:03:ಗ್ರಾಪಂಕಾ:2016

ದಿನಾಂಕ: 05–01–2016

# ಸುತ್ತೋಲೆ

**ವಿಷಯ:** ವಿಧಾನ ಸಭೆ/ವಿಧಾನ ಪರಿಷತ್ತು ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯೊಂದಿಗೆ ಒಗ್ಗೂಡಿಸುವಿಕೆಯ ಮೂಲಕ ರಸ್ತೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಕುರಿತು ಮುಂದುವರೆದ ಹೆಚ್ಚುವರಿ ಸೂಚನೆಗಳು

**ಉಲ್ಲೇಖ:**

1. ಈ ಆಯುಕ್ತಾಲಯದ ಸುತ್ತೋಲೆ ಪತ್ರದ ಸಂಖ್ಯೆ ಗ್ರಾಅಪ 81 ಉಖಾಯೋ 2015 ದಿನಾಂಕ: 19–11–2015
2. ಈ ಆಯುಕ್ತಾಲಯದ ಪತ್ರದ ಸಂಖ್ಯೆ: ಗ್ರಾಅಪ 742 ಉಖಾಯೋ 2015 ದಿನಾಂಕ: 18–11–2015
3. ಈ ಆಯುಕ್ತಾಲಯದ ಪತ್ರದ ಸಂಖ್ಯೆ: ಗ್ರಾಅಪ 203 ಉಖಾಯೋ 2012 ದಿನಾಂಕ: 31–01–2014
4. ಸನ್ಮಾನ್ಯ ವಿಧಾನ ಸಭಾ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಗಾರದ ದಿನಾಂಕ: 08–10–2015

~~~~~~

ಕೇಂದ್ರ ಸರ್ಕಾರವು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯೊಂದಿಗೆ ಸಂಸತ್ ಸದಸ್ಯರ ಪ್ರದೇಶಾಭಿವೃದ್ಧಿ ಯೋಜನೆಯನ್ನು ಒಗ್ಗೂಡಿಸುವಿಕೆಯ ಮೂಲಕ ಅನುಷ್ಠಾನಗೊಳಿಸಲು ಮಾರ್ಗಸೂಚಿಗಳನ್ನು ನೀಡಿದ್ದು, ಅದರನ್ವಯ ಕೆಲವು ಬದಲಾವಣೆಗಳೊಂದಿಗೆ ವಿಧಾನ ಸಭೆ/ವಿಧಾನ ಪರಿಷತ್ತು ಸದಸ್ಯರ ಪ್ರದೇಶಾಭಿವೃದ್ಧಿ ಯೋಜನೆಯನ್ನು ನರೇಗಾ ಯೋಜನೆಯೊಂದಿಗೆ ಒಗ್ಗೂಡಿಸುವಿಕೆಯ ಮೂಲಕ ಅನುಷ್ಠಾನಗೊಳಿಸಲು ಉಲ್ಲೇಖ(3)ರಲ್ಲಿ ವಿವರವಾದ ಸೂಚನೆಗಳನ್ನು ನೀಡಿದೆ.

ತರುವಾಯ ಉಲ್ಲೇಖ(4)ರಂತೆ ದಿನಾಂಕ: 08–10–2015ರಂದು ಸನ್ಮಾನ್ಯ ವಿಧಾನ ಸಭಾ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಜರುಗಿದ ಕಾರ್ಯಗಾರದ ಸಭೆಯಲ್ಲಿ ನರೇಗಾ ಯೋಜನೆಯೊಂದಿಗೆ ವಿಧಾನ ಸಭೆ/ವಿಧಾನ ಪರಿಷತ್ತು ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯನ್ನು ಒಗ್ಗೂಡಿಸುವಿಕೆಯ ಅನುಷ್ಠಾನಗೊಳಿಸುವ ಕುರಿತು ಈಗಾಗಲೇ ಹೊರಡಿಸಿರುವ ಸುತ್ತೋಲೆಯನ್ನು ಸರಳೀಕರಿಸಿ, ಕೆಲವು ಬದಲಾವಣೆಗಳೊಂದಿಗೆ ಸೂಚನೆಗಳನ್ನು ನೀಡುವಂತೆ ಸಭೆಯ ಅಧ್ಯಕ್ಷರು ತಿಳಿಸಿರುತ್ತಾರೆ. ಅದರಂತೆಯೇ, ಉಲ್ಲೇಖ(1)ರಲ್ಲಿ ಸುತ್ತೋಲೆಯನ್ನು ಹೊರಡಿಸಿದ್ದು, ಹೊರಡಿಸಿರುವ ಸುತ್ತೋಲೆಯ ಸೂಚನೆಗಳು ಮಾನ್ಯ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯನ್ನು ನರೇಗಾ ಯೋಜನೆಯೊಂದಿಗೆ ಒಗ್ಗೂಡಿಸಿ ಅನುಷ್ಠಾನ ಮಾಡಲು ಪೂರಕವಾಗಿರುವುದಿಲ್ಲ ಹಾಗೂ ಸ್ಥಳೀಯ ಅಗತ್ಯತೆಗಳನ್ನು ಪೂರೈಕೆ ಮಾಡಲು ಸಾಧ್ಯವಾಗದ ಕಾರಣ ಮಾನ್ಯ ಶಾಸಕರಾದ ಅರಸಿಕೇರೆ ಮತ ಕ್ಷೇತ್ರದವರು ವಿಶೇಷವಾಗಿ ಮತ್ತು ಇತರೆ ಶಾಸಕರುಗಳು ಸಿಮೆಂಟ್ ಕಾಂಕ್ರೀಟ್ ರಸ್ತೆಗಳನ್ನು ಗ್ರಾಮಗಳೊಳಗೆ/ಗ್ರಾಮಗಳ ಪರಿಧಿಯಲ್ಲಿ ರೂ. 10.00 ಲಕ್ಷಗಳವರೆಗೆ ಹೆಚ್ಚುವರಿಯಾಗಿ ತೆಗೆದುಕೊಳ್ಳಲು
~~~~~~

ಅವಕಾಶ ಕಲ್ಪಿಸುವಂತೆ, ಸರ್ಕಾರವನ್ನು ಕೋರಿರುತ್ತಾರೆ. ಆದ್ದರಿಂದ ಮಾನ್ಯ ಶಾಸಕರ ಕೋರಿಕೆಯನ್ನು ಪರಿಗಣಿಸಿ, ಸಿ.ಸಿ ರಸ್ತೆ ಕಾಮಗಾರಿಗಳನ್ನು ನರೇಗಾ ಯೋಜನೆಯೊಂದಿಗೆ, ವಿಧಾನ ಸಭೆ/ವಿಧಾನ ಪರಿಷತ್ತು ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯನ್ನು ಈ ಕೆಳಕಂಡ ಷರತ್ತುಗಳ ಅನುಪಾಲನೆಗೆ ಒಳಪಟ್ಟು ಅನುಷ್ಠಾನಗೊಳಿಸಲು ಆದೇಶಿಸಿದೆ.

1. ಪ್ರತಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳ ಪರಿಧಿಯಲ್ಲಿ ರೂ. 10.00 ಲಕ್ಷಗಳವರೆಗೆ ಸಿ.ಸಿ ರಸ್ತೆ ಕಾಮಗಾರಿಗಳನ್ನು ನರೇಗಾ ಯೋಜನೆಯೊಂದಿಗೆ ವಿಧಾನ ಸಭೆ/ವಿಧಾನ ಪರಿಷತ್ತು ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯನ್ನು ಒಗ್ಗೂಡಿಸುವಿಕೆಯ ಮೂಲಕ ಅನುಷ್ಠಾನಗೊಳಿಸುವುದು.
2. ಈ ಒಗ್ಗೂಡಿಸುವಿಕೆಯ ಕಾಮಗಾರಿಗಾಗಿ ರೂ. 10.00 ಲಕ್ಷಗಳನ್ನು ಪ್ರತಿ ಗ್ರಾಮ ಪಂಚಾಯತಿಯ ಕೂಲಿ ಆಯವ್ಯಯದಲ್ಲಿ ಹೆಚ್ಚುವರಿಯಾಗಿ ಪರಿಗಣಿಸುವುದು.
3. ಒಗ್ಗೂಡಿಸುವಿಕೆಯ ಮೂಲಕ ಅನುಷ್ಠಾನಗೊಳಿಸುವ ಸಿ.ಸಿ ರಸ್ತೆ ಕಾಮಗಾರಿಗಳ ವೆಚ್ಚದ ಮೊತ್ತವನ್ನು ಗ್ರಾಮ ಪಂಚಾಯತಿಯ ಹೆಚ್ಚುವರಿ ಕೂಲಿ ಆಯವ್ಯಯನ್ನಾಗಿ ಪರಿಗಣಿಸುವುದು.
4. ಒಗ್ಗೂಡಿಸುವಿಕೆಯ ಮೂಲಕ ಅನುಷ್ಠಾನಗೊಳಿಸುವ ಸಿ.ಸಿ ರಸ್ತೆ ಕಾಮಗಾರಿಗಳನ್ನು ಪ್ರತಿ ಆರ್ಥಿಕ ವರ್ಷದ ಸಾಲಿನಲ್ಲಿ ಹೆಚ್ಚುವರಿಯಾಗಿ ತೆಗೆದುಕೊಳ್ಳಲು ಅವಕಾಶ ಕಲ್ಪಿಸಿ, ಅನುಷ್ಠಾನಕ್ಕೆ ಕ್ರಮವಹಿಸುವುದು.
5. ಪ್ರಸ್ತುತ ಸಾಲಿನಲ್ಲಿ, ಆರ್ಥಿಕ ವರ್ಷವು ಮುಗಿಯಲು ಬೇಗನೆ ಸಮೀಪಸುತ್ತಿರುವುದರಿಂದ, ಸಿ.ಸಿ ರಸ್ತೆ ಕಾಮಗಾರಿಗಳನ್ನು ಗ್ರಾಮ ಸಭೆಯಲ್ಲಿ ಅನುಮೋದಿಸಿಕೊಂಡು, ಹೆಚ್ಚುವರಿ ಕ್ರಿಯಾ ಯೋಜನೆಯಲ್ಲಿ ಸೇರಿಸಿಕೊಂಡು ಒಗ್ಗೂಡಿಸುವಿಕೆಯ ಮೂಲಕ ಅನುಷ್ಠಾನಗೊಳಿಸಲು ಕ್ರಮವಹಿಸುವುದು.
6. ನರೇಗಾ ಯೋಜನೆಯಡಿ ಕೈಗೊಳ್ಳುವ ಇಂತಹ ಕಾಮಗಾರಿಗಳನ್ನು ಸೇರಿಸಿಕೊಂಡು ಒಗ್ಗೂಡಿಸುವಿಕೆಯ ಕಾಮಗಾರಿಗಳೆಂದು ಘೋಷಿಸಲು ಕ್ರಮವಹಿಸಬೇಕು. ಕಾಮಗಾರಿಯ ಅಂದಾಜು ಪತ್ರಿಕೆಯನ್ನು ಫ್ರೀಜ್ ಮಾಡುವಾಗ ಸಂಸತ್ ಸದಸ್ಯರ/ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಿಂದ ದೊರೆಯುವ ಅನುದಾನದ ವಿವರಗಳನ್ನು ನಮೂದಿಸುವುದು.
7. ಇಂತಹ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಒಗ್ಗೂಡಿಸುವಿಕೆಯ ಕಾಮಗಾರಿಯೆಂದು ಅನುಮೋದಿಸತಕ್ಕದ್ದು. ಎರಡು ಯೋಜನೆಗಳಿಂದ ದೊರೆಯುವ ಅನುದಾನದ ಮೊತ್ತವನ್ನು ಕ್ರಿಯಾ ಯೋಜನೆಯಲ್ಲಿ ಮತ್ತು ಸಂಬಂಧಪಟ್ಟ ಕಾಮಗಾರಿಯ ಕಡತದಲ್ಲಿ ದಾಖಲಿಸತಕ್ಕದ್ದು.
8. ಇಂತಹ ಕಾಮಗಾರಿಗಳನ್ನು ಕೈಗೊಳ್ಳುವಾಗ ನರೇಗಾ ಯೋಜನೆಯ ಎಲ್ಲಾ ಮಾರ್ಗಸೂಚಿಗಳು ಮತ್ತು ಕಾಲಕಾಲಕ್ಕೆ ಹೊರಡಿಸಿರುವ ಎಲ್ಲಾ ಸುತ್ತೋಲೆಗಳನ್ನು ಕಡ್ಡಾಯವಾಗಿ ಪಾಲನೆ ಮಾಡತಕ್ಕದ್ದು.
9. ಗುತ್ತಿಗೆದಾರರನ್ನು ಮತ್ತು ಮಾನವ ಮಾಡಬಹುದಾದ ಕೆಲಸಗಳನ್ನು ಯಂತ್ರಗಳಿಂದ ಸ್ಥಾನಪಲ್ಲಟ ಮಾಡುವ ಕ್ರಮವನ್ನು ಯೋಜನೆಯಡಿ ಪೂರ್ಣವಾಗಿ ನಿಷೇದಿಸಲಾಗಿದೆ.
10. ಮಾನ್ಯ ವಿಧಾನ ಸಭಾ/ವಿಧಾನ ಪರಿಷತ್ತು ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯನ್ನು ನರೇಗಾ ಯೋಜನೆಯೊಂದಿಗೆ ಒಗ್ಗೂಡಿಸುವಿಕೆಯ ಮೂಲಕ ಅನುಷ್ಠಾನಗೊಳಿಸುವಾಗ, ಕೂಲಿ ಮತ್ತು ಸಾಮಗ್ರಿಗಳ ವೆಚ್ಚದ ಅನುಪಾತ 60:40ರ ವೆಚ್ಚವನ್ನು ಸಂಪೂರ್ಣವಾಗಿ ನರೇಗಾ ಯೋಜನೆಯಡಿ ಭರಿಸುವುದು. ಶೇಕಡಾ 40ರಷ್ಟು ಮೇಲ್ಪಟ್ಟಿರುವ ಹೆಚ್ಚುವರಿ ಸಾಮಗ್ರಿ ವೆಚ್ಚವನ್ನು ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಅನುದಾನದಿಂದ ಭರಿಸುವುದು.
11. ದಿನಾಂಕ: 19–11–2015ರಂದು ಹೊರಡಿಸಿರುವ ಸಮಗ್ರ ಸುತ್ತೋಲೆಯ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡುವುದು

(ಮುನೀಷ್ ಮೌದ್ಗಿಲ್)
ಆಯುಕ್ತರು ಗ್ರಾಮೀಣಾಭಿವೃದ್ಧಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಹೊಸ ಅನುಷ್ಠಾನ ಇಲಾಖೆಯನ್ನು ಅನುಷ್ಠಾನ ಸಂಸ್ಥೆಯನ್ನಾಗಿ ಸೇರ್ಪಡೆ ಮಾಡುವ, ಹಾಲಿ ಇರುವ ಇಲಾಖೆಗಳನ್ನು ವಿಲೀನಗೊಳಿಸುವ ಮತ್ತು ಹಾಲಿ ಇರುವ ಇಲಾಖೆಯನ್ನು ಕೈಬಿಡಲು ಆದೇಶ ಹೊರಡಿಸುವ ಕುರಿತು.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 186 ಉಖಾಯೋ 2012 ಬೆಂಗಳೂರು ದಿನಾಂಕ: 23–10–2013.
2. ದಿನಾಂಕ: 21–12–2015ರಂದು ಜರುಗಿದ ನರೇಗಾ ಯೋಜನೆಯೊಂದಿಗೆ PMGSY ಯೋಜನೆಯನ್ನು ಒಗ್ಗೂಡಿಸುವಿಕೆಯ ಸಭೆಯಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯವರು ಚರ್ಚಿಸಿದ ಪ್ರಕಾರ.
3. ಸರ್ಕಾರಿ ಆದೇಶ ಸಂಖ್ಯೆ:ಕೃಇ 166 ಕೃಪಸೇ 2011, ಬೆಂಗಳೂರು, ದಿನಾಂಕ: 08–07–2014.

******

**ಪ್ರಸ್ತಾವನೆ:**

ಓದಲಾದ ಉಲ್ಲೇಖ(1)ರ ಸರ್ಕಾರದ ಆದೇಶದಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಒಂಭತ್ತು ಅನು ಷ್ಠಾನ ಇಲಾಖೆಗಳಾದ, ಅರಣ್ಯ, ತೋಟಗಾರಿಕೆ, ಸಣ್ಣ ನೀರಾವರಿ, ಕೃಷಿ, ಜಲಾನಯನ ಅಭಿವೃದ್ಧಿ, ರೇಷ್ಮೆ, ಮೀನುಗಾರಿಕೆ, ಪಶು ಸಂಗೋಪನಾ ಮತ್ತು ಪಂಚಾಯತ್ ರಾಜ್ ಇಂಜನಿಯರಿಂಗ್ ಇವುಗಳನ್ನು ಅನುಷ್ಠಾನ ಸಂಸ್ಥೆಗಳನ್ನಾಗಿ ಗುರುತಿಸಿ ಘೋಷಿಸಿ ಆದೇಶಿಸಲಾಗಿದೆ. ಪಂಚಾಯತ್ ರಾಜ್ ಸಂಸ್ಥೆಗಳು ನಿರ್ವಹಿಸುವ ರೀತಿಯಲ್ಲಿಯೇ, ಸದರಿ ಇಲಾಖೆಗಳು ಕೂಡ ನಿರ್ವಹಿಸುತ್ತಿವೆ. ಕಳೆದ ಎರಡು ವರ್ಷಗಳಲ್ಲಿ ನರೇಗಾ ಯೋಜನೆಯಡಿ ಅನುಷ್ಠಾನ ಇಲಾಖೆಗಳ ಪ್ರಗತಿಯನ್ನು ಗಮನಿಸಿ ದಾಗ, ಪಶುಸಂಗೋಪನಾ ಇಲಾಖೆಯು ಕಾಮಗಾರಿಗಳನ್ನು ಸಮರ್ಪಕವಾಗಿ ನಿರ್ವಹಿಸುತ್ತಿಲ್ಲ ಹಾಗೂ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿಲ್ಲ. ಪ್ರಗತಿಯಲ್ಲಿ ಪಶುಸಂಗೋಪನಾ ಇಲಾಖೆಯ ಕೊಡುಗೆ ಗಣನೀಯವಾಗಿರುವುದಿಲ್ಲ. ಇಲಾಖೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವೈದ್ಯರಿರುತ್ತಾರೆ ಮತ್ತು ಅಭಿಯಂತರರು ಇರುವುದಿಲ್ಲ. ನರೇಗಾ ಯೋಜನೆಯ ಅನುದಾನವನ್ನು ಸಮರ್ಪಕವಾಗಿ ಉಪಯೋಗಿಸಿಕೊಳ್ಳದೇ ಇರುವುದರಿಂದ, ಸದರಿ ಇಲಾಖೆಯನ್ನು ನರೇಗಾ ಯೋಜನೆಯಿಂದ, ಕೈಬಿಡಲು ಗ್ರಾಮೀಣಾಭಿವೃದ್ಧಿ ಇಲಾಖೆಯು ಅಭಿಪ್ರಾಯಿಸಿರುತ್ತದೆ. ಉಲ್ಲೇಖ(3)ರ ಪ್ರಕಾರ ಜಲಾನಯನ ಇಲಾಖೆಯು ಕೃಷಿ ಇಲಾಖೆಗೆ ವಿಲೀನಗೊಂಡಿರುತ್ತದೆ. ಇನ್ನು ಮುಂದೆ, ಜಲಾನಯನ ಕಾಮಗಾರಿಗಳು ಮತ್ತು ಕೃಷಿ ಕಾಮಗಾರಿಗಳನ್ನು ಅನುಷ್ಠಾನಿಸು ವಾಗ ಈ ಎರಡು ಇಲಾಖೆಗಳ ಕಾಮಗಾರಿಗಳನ್ನು ಕೃಷಿ ಇಲಾಖೆಯ ಕಾಮಗಾರಿಗಳೆಂದು ಪರಿಗಣಿಸಿ, ನರೇಗಾ ಯೋಜನೆಯಡಿ ಕೇವಲ, ಕೃಷಿ ಇಲಾಖೆಯನ್ನು ಮಾತ್ರ ಅನುಷ್ಠಾನ ಸಂಸ್ಥೆಯನ್ನಾಗಿ ಗುರುತಿಸಿ ಘೋಷಿಸಬಹುದಾಗಿರುತ್ತದೆ. ಜಲಾನಯನ ಇಲಾಖೆಯು ಕೃಷಿ ಇಲಾಖೆಗೆ ವಿಲೀನಗೊಂಡಿರುವುದರಿಂದ, ಈಗಾಗಲೇ ಘೋಷಿಸಲಾದ ಅನುಷ್ಠಾನ ಸಂಸ್ಥೆ ಯಾದ ಜಲಾನಯನ ಇಲಾಖೆಯನ್ನು ನರೇಗಾ ಯೋಜನೆಯಡಿ ಕೈಬಿಡಬಹುದಾಗಿರುತ್ತದೆ.

ಮುಂದುವರೆಸುತ್ತಾ, ಉಲ್ಲೇಖ(2)ರಂತೆ, ದಿನಾಂಕ: 21–12–2015ರಂದು PMGSY ಯೋಜನೆಯನ್ನು ನರೇಗಾ ಯೋಜನೆಯೊಂದಿಗೆ ಒಗ್ಗೂಡಿಸಿ ಅನುಷ್ಠಾನ ಮಾಡುವ ಸಂಬಂಧ ಜರುಗಿದ ಸಭೆಯಲ್ಲಿ ಸರ್ಕಾರದ ಪ್ರಧಾನ ಕಾರ್ಯ ದರ್ಶಿಗಳು ಗ್ರಾಮಿಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯವರು ಇಲಾಖೆಯ

ಕರ್ನಾಟಕ ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಸಂಸ್ಥೆ ಬೆಂಗಳೂರು ಇವರನ್ನು ಸಹ ನರೇಗಾ ಯೋಜನೆಯ ಕಾರ್ಯಕ್ರಮದಲ್ಲಿ ಭಾಗವಹಿಸಲು ಹಾಗೂ ಕಾಮಗಾರಿಗಳನ್ನು ನರೇಗಾ ಯೋಜನೆಯ ಅನುದಾನವನ್ನು ಬಳಸಿಕೊಂಡು ಅನುಷ್ಠಾನಿಸಲು ಸೂಚಿಸಿ, ಸದರಿ ಇಲಾಖೆಯನ್ನು ನರೇಗಾ ಯೋಜನೆಯಡಿ ಅನುಷ್ಠಾನ ಸಂಸ್ಥೆಯೆಂದು ಗುರುತಿಸಿ, ಆದೇಶಿಸಲು ಸೂಚಿಸಿರುತ್ತಾರೆ. ಕರ್ನಾಟಕ ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಸಂಸ್ಥೆಯನ್ನು ಅನುಷ್ಠಾನ ಸಂಸ್ಥೆಯನ್ನಾಗಿ ಘೋಷಿಸುವ ಮೂಲಕ, ಅನುಷ್ಠಾನ ಸಂಸ್ಥೆಯು ಹಿಂದಿನ ಮತ್ತು ತರುವಾಯದ ಕಾಮಗಾರಿಗಳನ್ನು ಸದರಿ ಯೋಜನೆಯಡಿ ಅನುಷ್ಠಾನಗೊಳಿಸಲು ಅನೂಕೂಲವಾಗುತ್ತದೆ. ಹಾಗೂ ನರೇಗಾ ಯೋಜನೆಯ ಒಟ್ಟಾರೆ ಪ್ರಗತಿಯನ್ನು ಹೆಚ್ಚಿಸಬಹುದಾಗಿರುತ್ತದೆ. ಈ ಎಲ್ಲಾ ಅಂಶಗಳನ್ನು ಚರ್ಚಿಸಿ ತೀರ್ಮಾನಿಸಿದ ಹಿನ್ನೆಲೆಯಲ್ಲಿ ಸರ್ಕಾರವು ಆದೇಶವನ್ನು ಹೊರಡಿಸಲು ತೀರ್ಮಾನಿಸಿದೆ. ಆದ್ದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶದ ಸಂಖ್ಯೆ ಗ್ರಾಅಪ 247 ಉಖಾಯೋ 2014 ಬೆಂಗಳೂರು ದಿನಾಂಕ: 12–01–2016**


ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಈ ಕೆಳಕಂಡ ವಿಷಯಗಳು ತಕ್ಷಣವೇ ಜಾರಿಗೆ ಬರುವಂತೆ ಆದೇಶಿಸಿದೆ.

1. ದಿನಾಂಕ: 23–10–2013ರಂದು ಹೊರಡಿಸಿರುವ ಆದೇಶದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅನುಷ್ಠಾನಸಂಸ್ಥೆಯನ್ನಾಗಿ ಘೋಷಿಸಲಾದ ಪಶು ಸಂಗೋಪನಾ ಇಲಾಖೆ ಯನ್ನು ಮುಂದಿನ ಆದೇಶ ಬರುವವರೆಗೂ ಹಿಂಪಡೆದು ಕೈಬಿಡಲಾಗಿದೆ.

2. ಜಲಾನಯನ ಇಲಾಖೆ ಕೃಷಿ ಇಲಾಖೆಗೆ ವಿಲೀನಗೊಂಡಿರುವುದರಿಂದ ಜಲಾನಯನ ಇಲಾಖೆಯನ್ನು ಅನುಷ್ಠಾನ ಸಂಸ್ಥೆಯೆಂದು ನರೇಗಾ ಯೋಜನೆಯಡಿ ಘೋಷಿಸಿರುವುದನ್ನು ದಿನಾಂಕ: 23–10–2013ರ ಆದೇಶದಿಂದ ಹಿಂಪಡೆದು ಕೃಷಿ ಇಲಾಖೆಯಡಿ ಸೇರಿಸಲಾಗಿದೆ. ಈ ಸಂಬಂಧ ಕೃಷಿ ಇಲಾಖೆಯನ್ನು ಅನುಷ್ಠಾನ ಸಂಸ್ಥೆ ಯೆಂದು ನರೇಗಾ ಯೋಜನೆಯಡಿ ಗುರುತಿಸಿ ಘೋಷಿಸಲಾಗಿದೆ. ಇನ್ನು ಮುಂದೆ ಜಲಾನಯನ ಕಾಮಗಾರಿ ಗಳನ್ನು ಕೃಷಿ ಇಲಾಖೆಯ ಕಾಮಗಾರಿಗಳೊಂದಿಗೆ ನರೇಗಾ ಯೋಜನೆಯಡಿ ಅನುಷ್ಠಾನಗೊಳಿಸಲು ಆದೇಶಿಸಿದೆ.

3. ಈಗಾಗಲೇ ಅನುಷ್ಠಾನ ಸಂಸ್ಥೆಗಳೆಂದು (Implementing agencies) ಘೋಷಿಸಲಾದ ಅನುಷ್ಠಾನ ಇಲಾಖೆಗಳ ಜೊತೆಗೆ ಗ್ರಾಮೀಣಾಭಿವೃದ್ಧಿ ಇಲಾಖೆಯಡಿ ಬರುವ ಕರ್ನಾಟಕ ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಸಂಸ್ಥೆಯನ್ನು ನರೇಗಾ ಯೋಜನೆಯಡಿ ಅನುಷ್ಠಾನ ಸಂಸ್ಥೆಯನ್ನಾಗಿ ಘೋಷಿಸಲಾಗಿದೆ. ಸದರಿ ಸಂಸ್ಥೆಯ ಕಾಮಗಾರಿ ಗಳನ್ನು ನರೇಗಾ ಯೋಜನೆಯ ಮಾರ್ಗಸೂಚಿಗಳನ್ವಯ ಅನುಷ್ಠಾನ ಅಧಿಕಾರಿಗಳ ಮೂಲಕ ದಿನಾಂಕ: 23–10–2013ರ ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 186 ಉಖಾಯೋ 2012, ಬೆಂಗಳೂರು ಇದರ ಆದೇಶದ ಪತ್ರದಲ್ಲಿ ವಿಧಿಸಿರುವ ನಿಯಮಗಳಿಗೆ ಮತ್ತು ಷರತ್ತುಗಳ ಅನುಪಾಲನೆಗೆ ಒಳಪಟ್ಟು ಅನುಷ್ಠಾನ ಗೊಳಿಸಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ



**(ಸಿದ್ದೇಶ್ ಪೋತಲಕಟ್ಟಿ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಗ್ರಾಮ ವಿಕಾಸ ಯೋಜನೆಯಡಿ 189 ಗ್ರಾಮೀಣ ವಿಧಾನ ಸಭಾ ಕ್ಷೇತ್ರಗಳಲ್ಲಿ ಆಯ್ಕೆಯಾಗಿರುವ ಗ್ರಾಮಗಳಲ್ಲಿನ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ 2015-16ನೇ ಸಾಲಿನಲ್ಲಿ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ರೂ.100.00 ಲಕ್ಷಗಳ ಅನುದಾನ ಬಿಡುಗಡೆ ಕುರಿತು.

**ಉಲ್ಲೇಖ**
1. ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ:50:ಸುಗ್ರಾಯೋ:2015, ದಿನಾಂಕ: 20.10.2014.
2. ಗ್ರಾಮ ವಿಕಾಸ ಯೋಜನೆಯ ಮಾರ್ಗಸೂಚಿ ಬಿಡುಗಡೆ ದಿನಾಂಕ: 25.06.2015.
3. ಸರ್ಕಾರಿ ಆದೇಶ ಸಂಖ್ಯೆ : ಗ್ರಾಅಪ: 23 : ಸುಗ್ರಾಯೋ : 2015, ದಿನಾಂಕ : 07.01.2016

* * *

**ಪ್ರಸ್ತಾವನೆ:**

ಗ್ರಾಮ ವಿಕಾಸ ಯೋಜನೆಗಾಗಿ ಮೇಲೆ ಓದಲಾದ (3) ರ ಸರ್ಕಾರದ ನಡವಳಿ ಆದೇಶದಲ್ಲಿ ರಾಜ್ಯದ 189 ಮತ ಕ್ಷೇತ್ರಗಳಿಗೆ ತಲಾ 1 ಕೋಟಿಗಳಂತೆ ಪರಿಶಿಷ್ಠ ಜಾತಿ (SCP) ಮತ್ತು ಪರಿಶಿಷ್ಠ ಪಂಗಡದ (TSP) ಯೋಜನೆಗಳ ಅನುಪಾತವು ಸೇರಿದಂತೆ ಒಟ್ಟು 189 ಕೋಟಿಗಳ ಅನುಪಾತವನ್ನು ಈ ಕೆಳಗಿನಂತೆ ಬಿಡುಗಡೆ ಮಾಡಿ, ಅನುದಾನವನ್ನು ಈ ಕೆಳಕಂಡ ಲೆಕ್ಕ ಶೀರ್ಷಿಕೆಗಳಡಿ ಭರಿಸುವಂತೆಯು

| | |
|---|---|
| 1. 4215-02-800-0-02-132 (ಯೋಜನೆ) ಬಂಡವಾಳ ವೆಚ್ಚಗಳು | - ರೂ. 14226.03 ಲಕ್ಷಗಳು. |
| 2. 4215-02-800-0-02-422(ಯೋಜನೆ) ವಿಶೇಷ ಘಟಕ ಯೋಜನೆ | - ರೂ. 3326.40 ಲಕ್ಷಗಳು. |
| 3. 4215-02-800-0-02-423 (ಯೋಜನೆ) ಗಿರಿಜನ ಉಪ ಯೋಜನೆ | - ರೂ. 1347.57 ಲಕ್ಷಗಳು. |
| **ಒಟ್ಟು** | **- ರೂ. 18900.00 ಲಕ್ಷಗಳು** |

ಮತ್ತು ಮೇಲೆ ಸೂಚಿಸಿದ ರೂ.189.00 ಕೋಟಿಗಳ ಅನುದಾನವನ್ನು ಜಿಲ್ಲಾವಾರು ಮತ್ತು ಗ್ರಾಮವಾರು ಹಂಚಿಕೆಯನ್ನು ಮಾಡಿ ಅದರಂತೆ ಅನುದಾನವನ್ನು ಜಿಲ್ಲಾ ಪಂಚಾಯತಿಗಳು ಖಜಾನೆಯಿಂದ ಸೆಳೆದು ಗ್ರಾಮ ವಿಕಾಸ ಯೋಜನೆಗೆ ಆಯ್ಕೆಯಾದ ಗ್ರಾಮಗಳ ಸಂಬಂಧಪಟ್ಟ ಗ್ರಾಮ ಪಂಚಾಯತಿಗಳಿಗೆ EFMS/RTGS ಮೂಲಕ ಪಂಚಾಯತಿಗಳ ಬ್ಯಾಂಕ್ ಖಾತೆಗೆ ಜಮಾ ಮಾಡಲು ಸೂಚಿಸಲಾಗಿರುತ್ತದೆ. ಆದರೆ

ರಾಜ್ಯ ಖಜಾನೆಯ TNMC ಯಲ್ಲಿ ಉಲ್ಲೇಖ (3) ಆದೇಶದಲ್ಲಿ ಜಿಲ್ಲಾ ಪಂಚಾಯತ್‌ಗಳಿಗೆ ಬಿಡುಗಡೆ ಮಾಡಿದ ಗ್ರಾಮ ವಿಕಾಸ ಯೋಜನೆಯ ಮೊದಲನೇ ಕಂತಿನ ಅನುದಾನವನ್ನು ಅಪ್‌ಲೋಡ್ ಮಾಡಲು ತೆರಳಿದ ಸಂದರ್ಭದಲ್ಲಿ ಈ ಕೆಳಗಿನಂತೆ ಸುವರ್ಣ ಗ್ರಾಮೋದಯ/ ಗ್ರಾಮ ವಿಕಾಸ ಯೋಜನೆಗೆ ಅನುದಾನವು ಲಭ್ಯವಿರುವುದಾಗಿ ತಿಳಿಸಿರುತ್ತದೆ.

| | |
|---|---|
| 1. 4215-02-800-0-02-132 (ಯೋಜನೆ) ಬಂಡವಾಳ ವೆಚ್ಚಗಳು | - ರೂ. 14792.43 ಲಕ್ಷಗಳು. |
| 2. 4215-02-800-0-02-422(ಯೋಜನೆ) ವಿಶೇಷ ಘಟಕ ಯೋಜನೆ | - ರೂ. 3019.56 ಲಕ್ಷಗಳು. |
| 3. 4215-02-800-0-02-423 (ಯೋಜನೆ) ಗಿರಿಜನ ಉಪ ಯೋಜನೆ | - ರೂ. 1088.01 ಲಕ್ಷಗಳು. |
| **ಒಟ್ಟು** | **- ರೂ. 18900.00 ಲಕ್ಷಗಳು** |

**ಅದರಂತೆ ಗ್ರಾಮ ವಿಕಾಸ ಯೋಜನೆಗೆ ಅನುದಾನವನ್ನು ಜಿಲ್ಲಾವಾರು ಮತ್ತು 189 ಗ್ರಾಮೀಣ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಆಯ್ಕೆಯಾದ ಗ್ರಾಮಗಳಿಗೆ ಬಿಡುಗಡೆ ಮಾಡಲು ತಿಳಿಸಿರುವುದರಿಂದ ಉಲ್ಲೇಖ (3) ರಲ್ಲಿ ಬಿಡುಗಡೆ ಮಾಡಿದ ಅನುದಾನದ ಆದೇಶವನ್ನು ಹಿಂದಕ್ಕೆ ಪಡೆದು ಮರು ಹಂಚಿಕೆ ಆದೇಶವನ್ನು ಹೊರಡಿಸಬೇಕಾಗಿರುತ್ತದೆ. ಪ್ರಯುಕ್ತ ಈ ಆದೇಶ.**

**ಸರ್ಕಾರಿ ಆದೇಶ ಸಂಖ್ಯೆ : ಗ್ರಾಅಪ : 23 : ಸುಗ್ರಾಯೋ : 2015, ಬೆಂಗಳೂರು, ದಿನಾಂಕ: 13.01.2016**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಉಲ್ಲೇಖ (3) ರ ಅನುದಾನ ಬಿಡುಗಡೆಯ ಆದೇಶವನ್ನು ಹಿಂದಕ್ಕೆ ಪಡೆಯಲಾಗಿದೆ ಹಾಗೂ ಗ್ರಾಮ ವಿಕಾಸ ಯೋಜನೆಯ ಅನುಷ್ಠಾನಕ್ಕಾಗಿ 2015-16ನೇ ಸಾಲಿಗೆ ಪ್ರಥಮ ಕಂತಿನ ಅನುದಾನ ರೂ. 18900.00 ಲಕ್ಷಗಳನ್ನು (ರೂಪಾಯಿ ಹದಿನೆಂಟು ಸಾವಿರದ ಒಂಭೈನೂರು ಲಕ್ಷಗಳು ಮಾತ್ರ) ಅನುಬಂಧ – 1 ರಲ್ಲಿ ನಮೂದಿಸಿರುವ ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಿದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾತ್ ಇವರು ಅನುಬಂಧ – 1 ರಲ್ಲಿ ಬಿಡುಗಡೆ ಮಾಡಿದ ಜಿಲ್ಲಾವಾರು ಅನುದಾನವನ್ನು ಖಜಾನೆಯಿಂದ ಸೆಳೆದು ಅನುಬಂಧ – 2 ರಲ್ಲಿ ನಮೂದಿಸಿರುವ ಪ್ರತಿ ಗ್ರಾಮೀಣ ವಿಧಾನ ಸಭಾ ಕ್ಷೇತ್ರಕ್ಕೆ ತಲಾ ರೂ. 100.00 ಲಕ್ಷಗಳಂತೆ ಗ್ರಾಮ ವಿಕಾಸ ಯೋಜನೆಯಡಿ ಆಯ್ಕೆಯಾಗಿರುವ ಹಳ್ಳಿಗಳ ಸಂಬಂಧಪಟ್ಟ ಗ್ರಾಮ ಪಂಚಾಯತಿಗಳಿಗೆ ಮಾತ್ರ ಬಿಡುಗಡೆ ಮಾಡುವುದು.

ಬಿಡುಗಡೆ ಮಾಡಿದ ಅನುದಾನವನ್ನು ಈ ಕೆಳಕಂಡ ಲೆಕ್ಕ ಶೀರ್ಷಿಕೆಗಳಡಿ ಭರಿಸತಕ್ಕದ್ದು.

| | |
|---|---|
| 1. 4215-02-800-0-02-132 (ಯೋಜನೆ) ಬಂಡವಾಳ ವೆಚ್ಚಗಳು | – ರೂ. 14792.43 ಲಕ್ಷಗಳು. |
| 2. 4215-02-800-0-02-422(ಯೋಜನೆ) ವಿಶೇಷ ಘಟಕ ಯೋಜನೆ | – ರೂ. 3019.56 ಲಕ್ಷಗಳು. |
| 3. 4215-02-800-0-02-423 (ಯೋಜನೆ) ಗಿರಿಜನ ಉಪ ಯೋಜನೆ | – ರೂ. 1088.01 ಲಕ್ಷಗಳು. |
| **ಒಟ್ಟು** | **– ರೂ. 18900.00 ಲಕ್ಷಗಳು** |

ಈ ಅನುದಾನವನ್ನು ಆಂತರಿಕ ಆರ್ಥಿಕ ಸಲಹೆಗಾರರು ಟಿಪ್ಪಣಿ ಸಂಖ್ಯೆ: ಗ್ರಾಅಪ:658: ಪಿಬಿಎಸ್:2015, ದಿನಾಂಕ:09.11.2015 ರಲ್ಲಿ ನೀಡಿದ ಸಹಮತಿ ಹಾಗೂ ಇಲಾಖಾ ಮುಖ್ಯಸ್ಥರಿಗೆ ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ:04: ಟಿಎಫ್‌ಪಿ :2015 ದಿನಾಂಕ 9.10.2015ರ ಕ್ರಮಸಂಖ್ಯೆ 13ರಲ್ಲಿ ನೀಡಿರುವ ಪ್ರಾಧಿಕಾರದನ್ವಯ ಬಿಡುಗಡೆ ಮಾಡಿ ಆದೇಶ ಹೊರಡಿಸಲಾಗಿದೆ.

**ಷರತ್ತುಗಳು :**

1. ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಗ್ರಾಮ ವಿಕಾಸ ಯೋಜನೆಯಡಿ ಆಯ್ಕೆ ಮಾಡಿದ ಗ್ರಾಮಗಳಲ್ಲಿ ಮಾರ್ಗಸೂಚಿಯಲ್ಲಿ ಗ್ರಾಮ ವಿಕಾಸ ಯೋಜನೆಯ ಅನುದಾನದಲ್ಲಿ ತೆಗೆದುಕೊಳ್ಳ ಬೇಕಾದ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು ಮಾತ್ರ ಅನುದಾನವನ್ನು ವಿನಿಯೋಗಿಸುವುದು.
2. ಗ್ರಾಮ ವಿಕಾಸ ಯೋಜನೆಯಡಿ ಆಯ್ಕೆಯಾದ ಗ್ರಾಮಗಳ ವ್ಯಾಪ್ತಿಯಲ್ಲಿ ಬರುವ ಗ್ರಾಮ ಪಂಚಾಯತಿಗಳು ಗ್ರಾಮ ವಿಕಾಸ ಯೋಜನೆಯ ಅನುದಾನವನ್ನು ನಿರ್ವಹಣೆ ಮಾಡಲು ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ತೆರೆಯಲು ಕ್ರಮ ಕೈಗೊಳ್ಳುವಂತೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ತಕ್ಷಣವೇ ಸೂಚಿಸುವುದು ಮತ್ತು
3. ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರು ಈ ಅನುದಾನ ಬಿಡುಗಡೆ ಆದೇಶವನ್ನು ಪಡೆದ ಕೂಡಲೇ ಅನುದಾನವನ್ನು ಖಜಾನೆಯಿಂದ ಸೆಳೆದು ತಕ್ಷಣವೇ ಗ್ರಾಮ ಪಂಚಾಯತಿಗಳಲ್ಲಿ ತೆರೆಯಲಾದ ಗ್ರಾಮ ವಿಕಾಸ ಯೋಜನೆಯ ಪ್ರತ್ಯೇಕ ಬ್ಯಾಂಕ್ ಖಾತೆಗೆ ವಿಳಂಬವಾಗದಂತೆ EFMS/RTGS ಮೂಲಕ ಅನುದಾನವನ್ನು ಒಂದು ವಾರದೊಳಗೆ ಕಡ್ಡಾಯವಾಗಿ ಜಮಾ ಮಾಡತಕ್ಕದ್ದು.
4. ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರು ಆರ್ಥಿಕ ಮತ್ತು ಭೌತಿಕ ಪ್ರಗತಿಯ ವರದಿಯನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಂದ ವಿಧಾನ ಸಭಾ ಕ್ಷೇತ್ರವಾರು ಪಡೆದು ಕ್ರೋಢೀಕರಿಸಿ ವರದಿಯನ್ನು ಮತ್ತು ಉಪಯುಕ್ತತಾ ಪತ್ರವನ್ನು ಕೂಡಲೇ ಸರ್ಕಾರಕ್ಕೆ ಸಲ್ಲಿಸುವುದು.
5. ಗ್ರಾಮ ವಿಕಾಸ ಯೋಜನೆಯಡಿ ಆಯ್ಕೆಯಾಗಿರುವ ಗ್ರಾಮದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಾಂಗದವರು ಇಲ್ಲದಂತಹ ಸಂದರ್ಭದಲ್ಲಿ ಒಂದು ವಿಧಾನ ಸಭಾ ಕ್ಷೇತ್ರಕ್ಕೆ ನಿಗದಿಪಡಿಸಿರುವ ರೂ.3.75 ಕೋಟಿಗಳ ಅನುದಾನದಲ್ಲಿ ಎಸ್.ಸಿ.ಪಿ. & ಟಿ.ಎಸ್.ಪಿ ಗೆ ನಿಗದಿಪಡಿಸಿರುವ ಅನುದಾನವನ್ನು ಅದೇ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಆಯ್ಕೆ ಮಾಡಿರುವ ಹೆಚ್ಚು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ

ಪಂಗಡದ ಜನಾಂಗದ ವಾಸಿಸುವ ಗ್ರಾಮಗಳಲ್ಲಿ ಅನುದಾನವನ್ನು ಬಳಸಿಕೊಳ್ಳುವುದು.

6. ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ಜನರು ವಾಸಿಸುತ್ತಿಲ್ಲವೆಂಬ ಕಾರಣಕ್ಕಾಗಿ ಎಸ್.ಸಿ.ಪಿ. & ಟಿ.ಎಸ್.ಪಿ ಯೋಜನೆಗೆ ನಿಗಧಿಪಡಿಸಿರುವ ಅನುದಾನವನ್ನು ಯಾವುದೇ ಕಾರಣಕ್ಕೂ ಸಾಮಾನ್ಯ ವರ್ಗಕ್ಕೆ ಮಾರ್ಗಪಲ್ಲಟ ಮಾಡಿ ಕಾಮಗಾರಿಗಳನ್ನು ಕೈಗೊಳ್ಳುವಂತಿಲ್ಲ. ಎಸ್.ಸಿ.ಪಿ. & ಟಿ.ಎಸ್.ಪಿ ಯೋಜನೆಯಡಿ ಸಾಧಿಸಿದ ಆರ್ಥಿಕ ಮತ್ತು ಭೌತಿಕ ಪ್ರಗತಿಯ ವಿವರವಾದ ವರದಿಯನ್ನು ಪ್ರತ್ಯೇಕವಾಗಿ ಪ್ರತಿ ಮಾಹೆ ಸರ್ಕಾರಕ್ಕೆ ಸಲ್ಲಿಸುವುದು.

7. ಗ್ರಾಮ ಪಂಚಾಯತಿಗಳು ಕಾಮಗಾರಿಗಳ ಬಿಲ್ಲುಗಳ ಹಣವನ್ನು ಪಾವತಿಸುವಾಗ ಸಂಬಂಧಪಟ್ಟ ಅನುಷ್ಠಾನ ಸಂಸ್ಥೆಗಳು ಪ್ರಗತಿಯ ಎಲ್ಲಾ ವಿವರಗಳನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಕಡ್ಡಾಯವಾಗಿ ಅಳವಡಿಸಿದ ನಂತರವೇ ಬಿಲ್ಲುಗಳ ಪಾವತಿಗೆ ಕ್ರಮ ವಹಿಸುವುದು.

8. ಗ್ರಾಮ ಪಂಚಾಯತಿಗಳು ಪೂರ್ಣಗೊಂಡ ಕಾಮಗಾರಿಗಳ ಹಣವನ್ನು ಸಂಬಂಧಪಟ್ಟ ಅನುಷ್ಠಾನ ಸಂಸ್ಥೆಗಳಿಗೆ ಬ್ಯಾಂಕ್ ಚೆಕ್ ಮೂಲಕ ಮಾತ್ರವೇ ಕಡ್ಡಾಯವಾಗಿ ಕೂಡಲೇ ಪಾವತಿಸತಕ್ಕದ್ದು. ಯಾವುದೇ ಸಂದರ್ಭದಲ್ಲಿಯೂ ನಗದುರೂಪದಲ್ಲಿ ಹಣ ಪಾವತಿಗೆ ಅವಕಾಶವಿರುವುದಿಲ್ಲ. ಅನುದಾನ ಲಭ್ಯವಿದ್ದ ಸಂದರ್ಭದಲ್ಲಿಯೂ ಸಹ ಹಣ ಪಾವತಿಮಾಡಲು ವಿಳಂಬ ನೀತಿ ಅನುಸರಿಸಿದಲ್ಲಿ ವಿಳಂಬಕ್ಕೆ ಕಾರಣರಾದವರ ಮೇಲೆ ಸೂಕ್ತ ಕ್ರಮ ಜರುಗಿಸಲಾಗುವುದು.

9. ಮುಖ್ಯ ಇಂಜಿನಿಯರ್, ಪಿಆರ್ಇಡಿ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕೆಆರ್ಐಡಿಎಲ್ ರವರು ಗ್ರಾಮ ವಿಕಾಸ ಯೋಜನೆಯ ಎಲ್ಲಾ ಅನುಮೋದಿತ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅನುಷ್ಠಾನದ ಜವಾಬ್ದಾರಿಯನ್ನು ನಿರ್ವಹಿಸುವುದು.

10. ಅನುಷ್ಠಾನಾಧಿಕಾರಿಗಳು ಆರ್ಥಿಕ ಮತ್ತು ಭೌತಿಕ ಪ್ರಗತಿಯ ವಿವರವಾದ ವರದಿಯನ್ನು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳಿಗೆ, ಮುಖ್ಯ ಇಂಜಿನಿಯರ್, ಪಿಆರ್ಇಡಿ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕೆಆರ್ಐಡಿಎಲ್ ಇವರುಗಳಿಗೆ ಪ್ರತಿ ಮಾಹೆ ಸಲ್ಲಿಸುವುದು.

11. ಮುಖ್ಯ ಇಂಜಿನಿಯರ್, ಪಿಆರ್ಇಡಿ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕೆಆರ್ಐಡಿಎಲ್ ರವರು ಕಾರ್ಯಪಾಲಕ ಅಭಿಯಂತರರು, ಪಿಆರ್ಇಡಿ / ಉಪ ನಿರ್ದೇಶಕರು, ಕೆಆರ್ಐಡಿಎಲ್ ಇವರುಗಳಿಂದ ಕಾಮಗಾರಿಗಳ ಪ್ರಗತಿಯ ವರದಿಗಳನ್ನು ಪಡೆದು ಸರ್ಕಾರಕ್ಕೆ ಕಾಲಕಾಲಕ್ಕೆ ನಿಗಧಿತ ನಮೂನೆಯಲ್ಲಿ ಸಲ್ಲಿಸುವುದು.

12. ಅನುಷ್ಠಾನಾಧಿಕಾರಿಗಳು ಹಣ ಬಳಕೆಯು ಉಪಯುಕ್ತತಾ ಪತ್ರವನ್ನು ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರುಗಳಿಗೆ ವಿಳಂಬಕ್ಕೆ ಅವಕಾಶವಿಲ್ಲದಂತೆ ಸಲ್ಲಿಸುವುದು.

13. ಈ ಆದೇಶವನ್ನು ಇಲಾಖಾ ವೆಬ್‌ಸೈಟ್ http://rdpr.kar.nic.in/ ನಲ್ಲಿ ಅಪ್‌ಲೋಡ್ ಮಾಡಲಾಗಿದ್ದು, ಅದರ ಪ್ರತಿಯನ್ನು ತೆಗೆದುಕೊಳ್ಳಲು ಕೋರಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಬೂವನಹಳ್ಳಿ ನಾಗರಾಜ್)**
ನಿರ್ದೇಶಕರು(ಸುಗ್ರಾಯೋ) ಹಾಗೂ
ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

# ಅನುಬಂಧ – 1

**2015-16ನೇ ಸಾಲಿಗೆ ಗ್ರಾಮ ವಿಕಾಸ ಯೋಜನೆಗೆ ಜಿಲ್ಲಾವಾರು ಅನುದಾನ ಬಿಡುಗಡೆ**

**ಸರ್ಕಾರಿ ಆದೇಶ ಸಂಖ್ಯೆ : ಗ್ರಾಅಪ : 23 : ಸುಗ್ರಾಯೋ : 2015, ಬೆಂಗಳೂರು, ದಿನಾಂಕ: 13.01.2016**

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಜಿಲ್ಲೆ | ಬಂಡವಾಳ ವೆಚ್ಚ | ಎಸ್‌ಸಿಪಿ | ಟಿಎಸ್‌ಪಿ | ಒಟ್ಟು |
|---|---|---|---|---|---|
| 1 | ಬೆಳಗಾವಿ | 1330.59 | 271.58 | 97.84 | 1700.00 |
| 2 | ಬಾಗಲಕೋಟೆ | 547.84 | 111.88 | 40.29 | 700.00 |
| 3 | ಬಿಜಾಪುರ | 626.10 | 127.80 | 46.10 | 800.00 |
| 4 | ಗುಲಬರ್ಗಾ | 626.10 | 127.80 | 46.10 | 800.00 |
| 5 | ಬೀದರ್ | 469.62 | 95.85 | 34.53 | 600.00 |
| 6 | ರಾಯಚೂರು | 469.62 | 95.85 | 34.53 | 600.00 |
| 7 | ಕೊಪ್ಪಳ | 391.35 | 79.88 | 28.78 | 500.00 |
| 8 | ಗದಗ | 313.00 | 63.90 | 23.10 | 400.00 |
| 9 | ಧಾರವಾಡ | 313.08 | 63.90 | 23.02 | 400.00 |
| 10 | ಉತ್ತರ ಕನ್ನಡ | 469.62 | 95.85 | 34.53 | 600.00 |
| 11 | ಹಾವೇರಿ | 469.62 | 95.85 | 34.53 | 600.00 |
| 12 | ಬಳ್ಳಾರಿ | 626.10 | 127.80 | 46.10 | 800.00 |
| 13 | ಚಿತ್ರದುರ್ಗ | 469.62 | 95.85 | 34.53 | 600.00 |
| 14 | ದಾವಣಗೆರೆ | 626.10 | 127.80 | 46.10 | 800.00 |
| 15 | ಶಿವಮೊಗ್ಗ | 469.62 | 95.85 | 34.53 | 600.00 |
| 16 | ಉಡುಪಿ | 391.35 | 79.88 | 28.78 | 500.00 |
| 17 | ಚಿಕ್ಕಮಗಳೂರು | 391.35 | 79.88 | 28.78 | 500.00 |
| 18 | ತುಮಕೂರು | 782.70 | 159.75 | 57.55 | 1000.00 |
| 19 | ಚಿಕ್ಕಬಳ್ಳಾಪುರ | 391.35 | 79.88 | 28.78 | 500.00 |
| 20 | ಕೋಲಾರ | 469.62 | 95.85 | 34.53 | 600.00 |
| 21 | ಬೆಂಗಳೂರು ನಗರ | 469.62 | 95.85 | 34.53 | 600.00 |
| 22 | ಬೆಂಗಳೂರು (ಗ್ರಾ) | 313.08 | 63.90 | 23.02 | 400.00 |
| 23 | ರಾಮನಗರ | 313.08 | 63.90 | 23.02 | 400.00 |
| 24 | ಮಂಡ್ಯ | 547.80 | 111.90 | 40.30 | 700.00 |
| 25 | ಹಾಸನ | 547.82 | 111.90 | 40.29 | 700.00 |
| 26 | ದಕ್ಷಿಣ ಕನ್ನಡ | 547.82 | 111.90 | 40.28 | 700.00 |
| 27 | ಕೊಡಗು | 156.55 | 31.95 | 11.50 | 200.00 |
| 28 | ಮೈಸೂರು | 626.16 | 127.80 | 46.04 | 800.00 |
| 29 | ಚಾಮರಾಜನಗರ | 313.08 | 63.90 | 23.02 | 400.00 |
| 30 | ಯಾದಗಿರ್ | 313.08 | 63.90 | 23.02 | 400.00 |
| | **ಒಟ್ಟು** | **14792.43** | **3019.56** | **1088.01** | **18900.00** |

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು (ಸುಗ್ರಾಯೋ) ಹಾಗೂ
ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

## ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 01.02.2016

ಸಂಖ್ಯೆ: ಗ್ರಾಅಪ 123 ಗ್ರಾಪಂಅ 2016

**ಇಂದ:**

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು.

**ಇವರಿಗೆ:**

ಹಿರಿಯ ತಾಂತ್ರಿಕ ನಿರ್ದೇಶಕರು,
ಎನ್.ಐ.ಸಿ., ಬೆಂಗಳೂರು.

**ಮಾನ್ಯರೆ,**

**ವಿಷಯ:** ಪಂಚತಂತ್ರದಲ್ಲಿ ಬಿಟ್ಟು ಹೋಗಿರುವ ಆಸ್ತಿಗಳನ್ನು ಸೇರ್ಪಡೆ ಮಾಡಲು ಹಾಗೂ ತೆರಿಗೆ ವಿವರಗಳನ್ನು ಬದಲಾವಣೆ ಮಾಡಲು ಅವಕಾಶ ಕಲ್ಪಿಸುವ ಬಗ್ಗೆ.

**ಉಲ್ಲೇಖ:** ದಿನಾಂಕ 25.01.2016 ರಂದು ನಡೆದ ಜಿಲ್ಲಾ ಪಂಚಾಯತಿಯ ಉಪಕಾರ್ಯದರ್ಶಿಗಳ ಸಭಾ ನಡವಳಿಗಳು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ 25.01.2016 ರಂದು ನಡೆದ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿ ಉಪಕಾರ್ಯದರ್ಶಿಗಳ ಸಭೆಯಲ್ಲಿ ರಾಜ್ಯದ ಹಲವಾರು ಗ್ರಾಮ ಪಂಚಾಯತಿಗಳು ಕಾರ್ಯ ಒತ್ತಡದಿಂದ ಪೂರ್ಣ ಪ್ರಮಾಣದಲ್ಲಿ ಪಂಚತಂತ್ರ ತಂತ್ರಾಂಶದಲ್ಲಿ ಆಸ್ತಿಗಳನ್ನು ದಾಖಲಿಸದೇ ಇರುವುದರಿಂದ, ಕರ ವಸೂಲಿ ಮಾಹಿತಿಯು ವಸೂಲಿಯಾದ ಮೊತ್ತಕ್ಕೆ ಸಮನಾಗಿ ಪಂಚತಂತ್ರ ತಂತ್ರಾಂಶದಲ್ಲಿ ಸೇರ್ಪಡೆ ಮಾಡಲು ಸಾಧ್ಯವಾಗುತ್ತಿಲ್ಲವೆಂದು ತಿಳಿಸಿ, ವಾಸ್ತವವಾಗಿ ಕರ ವಸೂಲಿಯಲ್ಲಿ ಪ್ರಗತಿ ಸಾಧಿಸಿದರೂ ಪಂಚತಂತ್ರ ತಂತ್ರಾಂಶದಲ್ಲಿ ಪ್ರಗತಿಯು ಗೋಚರವಾಗುತ್ತಿಲ್ಲವಾದ್ದರಿಂದ ಪಂಚತಂತ್ರ ತಂತ್ರಾಂಶದಲ್ಲಿ ಕೈಬಿಟ್ಟು ಹೋಗಿರುವ ಆಸ್ತಿಗಳನ್ನು ಸೇರ್ಪಡೆ ಮಾಡಲು ಅವಕಾಶ ನೀಡುವಂತೆ ಜಿಲ್ಲಾ ಪಂಚಾಯತಿಗಳ ಉಪಕಾರ್ಯದರ್ಶಿಗಳು ಕೋರಿರುತ್ತಾರೆ.

ಅಲ್ಲದೆ, ಈ ಹಿಂದೆ ಪಂಚತಂತ್ರ ತಂತ್ರಾಂಶದಲ್ಲಿ ದಾಖಲಾಗಿರುವ ಆಸ್ತಿಗಳ ತೆರಿಗೆ ವಿವರಗಳನ್ನು ತಪ್ಪಾಗಿ ನಮೂದು ಮಾಡಿರುವುದರಿಂದ ಪಂಚತಂತ್ರ ತಂತ್ರಾಂಶದಲ್ಲಿರುವ ಡಿಸಿಬಿ ವಿವರಗಳಿಗೂ, ವಾಸ್ತವ ಡಿಸಿಬಿ ವಿವರಗಳಿಗೂ ತಾಳೆಯಾಗುತ್ತಿಲ್ಲವೆಂದು, ಇದರಿಂದ ಪಂಚತಂತ್ರ ತಂತ್ರಾಂಶದಲ್ಲಿ ಡಿಸಿಬಿ ಪ್ರಗತಿ ಹಾಗೂ ಆರ್.ಎಫ್.ಡಿ. ಪ್ರಗತಿಗಳು ಕುಂಠಿತವಾಗುತ್ತಿರುವುದರಿಂದ ಹಾಲಿ ಪಂಚತಂತ್ರದಲ್ಲಿ ದಾಖಲಾಗಿರುವ ಆಸ್ತಿಗಳ ತೆರಿಗೆ ವಿವರಗಳನ್ನು ಬದಲಾವಣೆ ಮಾಡಲು (DCB Modification) ಪಂಚತಂತ್ರ ತಂತ್ರಾಂಶದಲ್ಲಿ ಅವಕಾಶ ನೀಡುವಂತೆಯೂ ಸಹ ಜಿಲ್ಲಾ ಪಂಚಾಯತಿಗಳ ಉಪಕಾರ್ಯದರ್ಶಿಗಳು ಸಭೆಯಲ್ಲಿ ಕೋರಿರುತ್ತಾರೆ.

ಆದುದರಿಂದ, ಗ್ರಾಮ ಪಂಚಾಯತಿಗಳು ಪಂಚತಂತ್ರ ತಂತ್ರಾಂಶದಲ್ಲಿ ನಮೂದಿಸದೆ ಇರುವ ನಿಯಮಾನುಸಾರವಿರುವ ಆಸ್ತಿಗಳನ್ನು ದಾಖಲಿಸಲು ಹಾಗೂ ಆಸ್ತಿ ವಿವರಗಳನ್ನು ಬದಲಾವಣೆ ಮಾಡಲು (DCB Modification) ದಿನಾಂಕ 15.03.2016 ರ ವರೆಗೆ ಕೆಳಗಿನಂತೆ ಅವಕಾಶ ಕಲ್ಪಿಸಬೇಕಾಗಿ ಕೋರಿದೆ.

1. ಗ್ರಾಮ ಪಂಚಾಯತಿಗಳು ಪಂಚತಂತ್ರ ತಂತ್ರಾಂಶದಲ್ಲಿ ನಮೂದಿಸಿರುವ ಆಸ್ತಿಗಳ ತೆರಿಗೆ ವಿವರಗಳನ್ನು ಬದಲಾವಣೆ ಮಾಡಲು ಪಂಚತಂತ್ರ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸುವುದು.

   – ಪಂಚತಂತ್ರ ತಂತ್ರಾಂಶದಲ್ಲಿ ನಮೂದಿಸಿರುವ ಆಸ್ತಿಗಳ ತೆರಿಗೆ ವಿವರಗಳನ್ನು ಬದಲಾವಣೆ ಮಾಡಿ ದಾಖಲಿಸಲು ಗಣಕ ಯಂತ್ರ ನಿರ್ವಾಹಕರಿಗೆ ಅವಕಾಶ ಕಲ್ಪಿಸುವುದು ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಪಂಚತಂತ್ರ ತಂತ್ರಾಂಶದಲ್ಲಿ ಒಮ್ಮೆಲೇ ಅನುಮೋದಿಸಲು ಅವಕಾಶ ಕಲ್ಪಿಸುವುದು.

2. ಪಂಚತಂತ್ರ ತಂತ್ರಾಂಶದಲ್ಲಿ ನಿಯಮಾನುಸಾರವಿದ್ದು, ಕೈಬಿಟ್ಟು ಹೋಗಿರುವ ಆಸ್ತಿಗಳನ್ನು ಸೇರ್ಪಡೆ ಮಾಡಲು ಈ ಹಿಂದೆ ಇದ್ದಂತೆ ಇ–ಸ್ವತ್ತು ತಂತ್ರಾಂಶದ ಮೂಲಕ ಅವಕಾಶ ಕಲ್ಪಿಸುವುದು.

   – ಪಂಚಾಯತಿಗಳು ಇ–ಸ್ವತ್ತು ತಂತ್ರಾಂಶದ ಮೂಲಕ ದಾಖಲಿಸಿದ ಆಸ್ತಿಗಳನ್ನು ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು, ತಮ್ಮ ತಾಲ್ಲೂಕು ಲಾಗಿನ್‌ನಲ್ಲಿ ಅನುಮೋದಿಸಿದ ನಂತರ ಹಾಗೂ ಈ ಆಸ್ತಿಗಳಿಗೆ ತೆರಿಗೆ ವಿವರಗಳನ್ನು ದಾಖಲಿಸಿದ ನಂತರ ಗ್ರಾಮ ಪಂಚಾಯತಿಗಳ ಪಂಚತಂತ್ರ ತಂತ್ರಾಂಶದಲ್ಲಿ ಸದರಿ ಆಸ್ತಿಗಳು ನಮೂದಾಗುವುದು/ಗೋಚರವಾಗತಕ್ಕದ್ದು.

ನಿಮ್ಮ ನಂಬುಗೆಯ,

**(ಕೆ. ಯಾಲಕ್ಕಿಗೌಡ)**
ನಿರ್ದೇಶಕರು(ಪಂ.ರಾಜ್–1) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

# ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 01.02.2016

ಸಂಖ್ಯೆ: ಗ್ರಾಅಪ 123 ಗ್ರಾಪಂಅ 2016

**ಇಂದ:**

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು.

**ಇವರಿಗೆ:**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳು.

**ಮಾನ್ಯರೆ,**

**ವಿಷಯ:** ಪಂಚತಂತ್ರದಲ್ಲಿ ಬಿಟ್ಟು ಹೋಗಿರುವ ಆಸ್ತಿಗಳನ್ನು ಸೇರ್ಪಡೆ ಮಾಡಲು ಹಾಗೂ ತೆರಿಗೆ ವಿವರಗಳನ್ನು ಬದಲಾವಣೆ ಮಾಡಲು ಅವಕಾಶ ಕಲ್ಪಿಸುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 85 ಗ್ರಾಪಂಅ 2014. ದಿನಾಂಕ 25.04.2014
2. ದಿನಾಂಕ 25.01.2016 ರಂದು ನಡೆದ ಜಿಲ್ಲಾ ಪಂಚಾಯತಿಯ ಉಪಕಾರ್ಯದರ್ಶಿಗಳ ಸಭಾ ನಡವಳಿಗಳು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ 25.01.2016 ರಂದು ನಡೆದ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿ ಉಪಕಾರ್ಯದರ್ಶಿಗಳ ಸಭೆಯಲ್ಲಿ ರಾಜ್ಯದ ಹಲವಾರು ಗ್ರಾಮ ಪಂಚಾಯತಿಗಳು ಕಾರ್ಯ ಒತ್ತಡದಿಂದ ಪೂರ್ಣ ಪ್ರಮಾಣದಲ್ಲಿ ಪಂಚತಂತ್ರ ತಂತ್ರಾಂಶದಲ್ಲಿ ಆಸ್ತಿಗಳನ್ನು ದಾಖಲಿಸದೇ ಇರುವುದರಿಂದ, ಕರ ವಸೂಲಿ ಮಾಹಿತಿಯು ವಸೂಲಿಯಾದ ಮೊತ್ತಕ್ಕೆ ಸಮನಾಗಿ ಪಂಚತಂತ್ರ ತಂತ್ರಾಂಶದಲ್ಲಿ ಸೇರ್ಪಡೆ ಮಾಡಲು ಸಾಧ್ಯವಾಗುತ್ತಿಲ್ಲವೆಂದು ತಿಳಿಸಿ, ವಾಸ್ತವವಾಗಿ ಕರ ವಸೂಲಿಯಲ್ಲಿ ಪ್ರಗತಿ ಸಾಧಿಸಿದರೂ ಪಂಚತಂತ್ರ ತಂತ್ರಾಂಶದಲ್ಲಿ ಪ್ರಗತಿಯು ಗೋಚರವಾಗುತ್ತಿಲ್ಲವಾದ್ದರಿಂದ ಪಂಚತಂತ್ರ ತಂತ್ರಾಂಶದಲ್ಲಿ ಕೈಬಿಟ್ಟು ಹೋಗಿರುವ ಆಸ್ತಿಗಳನ್ನು ಸೇರ್ಪಡೆ ಮಾಡಲು ಅವಕಾಶ ನೀಡುವಂತೆ ಜಿಲ್ಲಾ ಪಂಚಾಯತಿಗಳ ಉಪಕಾರ್ಯದರ್ಶಿಗಳು ಕೋರಿರುತ್ತಾರೆ.

ಅಲ್ಲದೆ, ಈ ಹಿಂದೆ ಪಂಚತಂತ್ರ ತಂತ್ರಾಂಶದಲ್ಲಿ ದಾಖಲಾಗಿರುವ ಆಸ್ತಿಗಳ ತೆರಿಗೆ ವಿವರಗಳನ್ನು ತಪ್ಪಾಗಿ ನಮೂದು ಮಾಡಿರುವುದರಿಂದ ಪಂಚತಂತ್ರ ತಂತ್ರಾಂಶದಲ್ಲಿರುವ ಡಿಸಿಬಿ ವಿವರಗಳಿಗೂ, ವಾಸ್ತವ ಡಿಸಿಬಿ ವಿವರಗಳಿಗೂ ತಾಳೆಯಾಗುತ್ತಿಲ್ಲವೆಂದು, ಇದರಿಂದ ಪಂಚತಂತ್ರ ತಂತ್ರಾಂಶದಲ್ಲಿ ಡಿಸಿಬಿ ಪ್ರಗತಿ ಹಾಗೂ ಆರ್.ಎಫ್.ಡಿ. ಪ್ರಗತಿಗಳು ಕುಂಠಿತವಾಗುತ್ತಿರುವುದರಿಂದ ಹಾಲಿ ಪಂಚತಂತ್ರದಲ್ಲಿ ದಾಖಲಾಗಿರುವ ಆಸ್ತಿಗಳ ತೆರಿಗೆ ವಿವರಗಳನ್ನು ಬದಲಾವಣೆ ಮಾಡಲು (DCB Modification) ಪಂಚತಂತ್ರ ತಂತ್ರಾಂಶದಲ್ಲಿ ಅವಕಾಶ ನೀಡುವಂತೆಯೂ ಸಹ ಜಿಲ್ಲಾ ಪಂಚಾಯತಿಗಳ ಉಪಕಾರ್ಯದರ್ಶಿಗಳು ಸಭೆಯಲ್ಲಿ ಕೋರಿರುತ್ತಾರೆ.

ಈ ಹಿಂದೆ ಆಸ್ತಿಗಳ ತೆರಿಗೆ ವಿವರಗಳನ್ನು ಬದಲಾವಣೆ ಮಾಡಲು (DCB Modification) ಹಾಗೂ ಪಂಚತಂತ್ರ ತಂತ್ರಾಂಶದಲ್ಲಿ ಬಿಟ್ಟು ಹೋಗಿರುವ ಆಸ್ತಿಗಳನ್ನು ಇ–ಸ್ವತ್ತು ತಂತ್ರಾಂಶದಲ್ಲಿ ದಾಖಲಿಸಲು ಉಲ್ಲೇಖ (1) ರಲ್ಲಿ ಅವಕಾಶ ಕಲ್ಪಿಸಲಾಗಿತ್ತು. ಹಲವಾರು ಕಾರಣಗಳಿಂದ ಗ್ರಾಮ ಪಂಚಾಯತಿಗಳು ನಿಗಧಿತ ಕಾಲಾವಧಿಯಲ್ಲಿ ದಾಖಲು ಮಾಡಿರುವುದಿಲ್ಲ. ಆದ್ದರಿಂದ, ಹಾಲಿ ಪಂಚತಂತ್ರ ತಂತ್ರಾಂಶದಲ್ಲಿ ದಾಖಲಾಗಿರುವ ಆಸ್ತಿಗಳ ತೆರಿಗೆ ವಿವರಗಳನ್ನು ಬದಲಾವಣೆ ಮಾಡಲು(DCB Modification) ಹಾಗೂ ಪಂಚತಂತ್ರ ತಂತ್ರಾಂಶದಲ್ಲಿ ಬಿಟ್ಟು ಹೋಗಿರುವ, ನಿಯಮಾನುಸಾರವಿರುವ ಆಸ್ತಿಗಳನ್ನು ಇ–ಸ್ವತ್ತು ತಂತ್ರಾಂಶದ ಮೂಲಕ ದಾಖಲಿಸಲು ದಿನಾಂಕ 15.03.2016 ರವರೆಗೆ ಅವಕಾಶ ಕಲ್ಪಿಸಲಾಗಿದೆ.

ಗ್ರಾಮ ಪಂಚಾಯತಿಗಳು ಪಂಚತಂತ್ರ ತಂತ್ರಾಂಶದಲ್ಲಿ ಇದುವರೆಗೂ ನಮೂದಿಸದೆ ಇರುವ ನಿಯಮಾನುಸಾರವಿರುವ ಆಸ್ತಿಗಳನ್ನು ದಾಖಲಿಸಲು ಹಾಗೂ ಆಸ್ತಿ ತೆರಿಗೆ ವಿವರಗಳನ್ನು ಬದಲಾವಣೆ ಮಾಡಲು (DCB Modification) ಈ ಕೆಳಗಿನಂತೆ ಅವಕಾಶ ಕಲ್ಪಿಸಲಾಗಿದೆ.

1. ಗ್ರಾಮ ಪಂಚಾಯತಿಗಳು ಪಂಚತಂತ್ರ ತಂತ್ರಾಂಶದಲ್ಲಿ ನಮೂದಿಸಿರುವ ಆಸ್ತಿಗಳ ತೆರಿಗೆ ವಿವರಗಳನ್ನು ಬದಲಾವಣೆ ಮಾಡಲು ಪಂಚತಂತ್ರ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ.
   - ಪಂಚತಂತ್ರ ತಂತ್ರಾಂಶದಲ್ಲಿ ನಮೂದಿಸಿರುವ ಆಸ್ತಿಗಳ ತೆರಿಗೆ ವಿವರಗಳನ್ನು ವಾಸ್ತವ ಡಿಸಿಬಿ ವಿವರಗಳಂತೆ ಬದಲಾವಣೆ ಮಾಡಿ ಗಣಕ ಯಂತ್ರ ನಿರ್ವಾಹಕರು ದಾಖಲಿಸುವುದು ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಪರಿಶೀಲಿಸಿ, ಪಂಚತಂತ್ರ ತಂತ್ರಾಂಶದಲ್ಲಿ ಒಮ್ಮೆಲೇ ಅನುಮೋದನೆ ನೀಡುವುದು.
2. ನಿಯಮಾನುಸಾರವಿದ್ದು ಇದುವರೆಗೂ ಪಂಚತಂತ್ರ ತಂತ್ರಾಂಶದಲ್ಲಿ ನಮೂದಿಸದೇ ಇರುವ ಆಸ್ತಿಗಳನ್ನು ಸೇರ್ಪಡೆ ಮಾಡಲು ಈ ಹಿಂದೆ ಇದ್ದಂತೆ ಇ–ಸ್ವತ್ತು ತಂತ್ರಾಂಶದ ಮೂಲಕ ಅವಕಾಶ ಕಲ್ಪಿಸಲಾಗಿದೆ.

– ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಇ–ಸ್ವತ್ತು ತಂತ್ರಾಂಶದ ಮೂಲಕ ನಿಯಮಾನುಸಾರವಿರುವ ಆಸ್ತಿಗಳನ್ನು ದಾಖಲಿಸುವುದು. ಈ ಆಸ್ತಿಗಳಿಗೆ ತೆರಿಗೆ ವಿವರಗಳನ್ನು ಕಡ್ಡಾಯವಾಗಿ ದಾಖಲಿಸುವುದು.

– ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಪರಿಶೀಲಿಸಿ, ತಮ್ಮ ತಾಲ್ಲೂಕು ಲಾಗಿನ್‌ನಲ್ಲಿ ಅನುಮೋದಿಸುವುದು.

**ಪಂಚತಂತ್ರ ತಂತ್ರಾಂಶದಲ್ಲಿ ಇದುವರೆಗೂ ನಮೂದಿಸದೆ ಇರುವ, ನಿಯಮಾನುಸಾರವಿರುವ ಆಸ್ತಿಗಳನ್ನು ಇ–ಸ್ವತ್ತು ತಂತ್ರಾಂಶದಲ್ಲಿ ದಾಖಲಿಸುವಲ್ಲಿ ಅನುಸರಿಸಬೇಕಾದ ಮಾರ್ಗಸೂಚಿಗಳು.**

- ದಿನಾಂಕ 14.06.2013 ರ ಪೂರ್ವದಲ್ಲಿ ಸೃಷ್ಟಿಯಾದ, ಗ್ರಾಮ ಪಂಚಾಯತಿ ಕರ ಆಕರಣೆಕೆಯ ರಿಜಿಸ್ಟರಿನಲ್ಲಿ (ಡಿಸಿಬಿ ವಹಿ) ನಮೂದಾದ ನಿಯಮಾನುಸಾರವಿರುವ (ಸರ್ಕಾರಿ ಜಮೀನುಗಳಲ್ಲಿ, ಸ್ಥಳೀಯ ಸಂಸ್ಥೆಗಳ ಸ್ವತ್ತಿನಲ್ಲಿ, ಸರ್ಕಾರಿ ಸ್ವಾಮ್ಯದ ಶಾಸನಬದ್ಧ ನಿಕಾಯ ಅಥವಾ ಸಂಸ್ಥೆಗಳ ಸ್ವತ್ತಿನಲ್ಲಿ ಇರುವ ಆಸ್ತಿಗಳನ್ನು ಹೊರತುಪಡಿಸಿ) ಆಸ್ತಿಗಳನ್ನು ಮಾತ್ರ ದಾಖಲಿಸಬಹುದು.
- ದಿನಾಂಕ 14.06.2013 ರ ನಂತರ ನಿಯಮಾನುಸಾರ ಸೃಷ್ಟಿಯಾದ ಆಸ್ತಿಗಳನ್ನು ಕಡ್ಡಾಯವಾಗಿ ಇ–ಸ್ವತ್ತು ತಂತ್ರಾಂಶದ ಮೂಲಕ ದಾಖಲಿಸಬಹುದು.
- ನಿಯಮಾನುಸಾರವಿರುವ ಗ್ರಾಮಠಾಣಾ ಆಸ್ತಿಗಳನ್ನು, ವಸತಿ ಯೋಜನೆಗಳಡಿಯಲ್ಲಿ ವಿತರಣೆಯಾದ ನಿವೇಶನ ಹಾಗೂ ಮನೆಗಳ ಆಸ್ತಿಗಳನ್ನು, ದಿನಾಂಕ 14.06.2013 ರ ಹಿಂದೆ ಭೂಪರಿವರ್ತನೆಗೊಂಡು ನಿಯಮಾನುಸಾರ ಸಕ್ಷಮ ಪ್ರಾಧಿಕಾರಗಳಿಂದ ನಕ್ಷೆ ಅನುಮೋದನೆಗೊಂಡು ಬಡಾವಣೆಗಳಾಗಿರುವ ಆಸ್ತಿಗಳನ್ನು ದಾಖಲಿಸಬಹುದು.
- ದಿನಾಂಕ 14.06.2013 ರ ಪೂರ್ವದಲ್ಲಿ ಕೃಷಿ ಭೂಮಿಯಲ್ಲಿ ಮನೆ ನಿರ್ಮಿಸಿಕೊಂಡು, ದಿನಾಂಕ 14.06.2013 ರ ಪೂರ್ವದ ವಿದ್ಯುತ್ ಬಿಲ್ ಹೊಂದಿರುವ ಆಸ್ತಿಗಳನ್ನು ದಾಖಲಿಸಬಹುದು.
- ಭೂಪರಿವರ್ತನೆಯಾಗದ ಪ್ರದೇಶದಲ್ಲಿರುವ ಬಡಾವಣೆಗಳಲ್ಲಿರುವ ಆಸ್ತಿಗಳು, ಗೋಮಾಳದಲ್ಲಿರುವ ಹಾಗೂ ಕೆರೆ ಪ್ರದೇಶದಲ್ಲಿರುವ ಆಸ್ತಿಗಳು, ಭೂಪರಿವರ್ತನೆಯಾಗದ ಪ್ರದೇಶಗಳಲ್ಲಿ (ಕೃಷಿ ಭೂಮಿ) ರಚನೆಯಾಗಿರುವ ಬಡಾವಣೆಗಳಲ್ಲಿರುವ ಆಸ್ತಿಗಳನ್ನು ದಾಖಲಿಸುವಂತಿಲ್ಲ.
- 1992 ರ ನಂತರ ಭೂಪರಿವರ್ತನೆಗೊಂಡು, ನಿಯಮಾನುಸಾರ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ/ಅಭಿವೃದ್ಧಿ ಪ್ರಾಧಿಕಾರಗಳಿಂದ ಬಡಾವಣೆ ನಕ್ಷೆ ಅನುಮೋದನೆಗೊಳ್ಳದ ಬಡಾವಣೆಗಳಲ್ಲಿರುವ, ದಿನಾಂಕ 14.06.2013 ಕ್ಕಿಂತ ಹಿಂದೆ ಕನಿಷ್ಠ ಒಂದು ಬಾರಿಯೂ ಮಾರಾಟವಾಗದ (Transaction) ಆಸ್ತಿಗಳನ್ನು ದಾಖಲಿಸುವಂತಿಲ್ಲ ಅಥವಾ ಮನೆಯಾಗಿದ್ದಲ್ಲಿ ದಿನಾಂಕ 14.06.2013 ಕ್ಕಿಂತ ಹಿಂದಿನ ಒಂದು ತಿಂಗಳ ವಿದ್ಯುತ್ ಬಿಲ್ ಇರುವ ಮನೆಗಳನ್ನು ದಾಖಲಿಸಬಹುದಾಗಿದೆ.
- ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಇಂತಹ ಆಸ್ತಿಗಳನ್ನು ನಮೂದಿಸುವಾಗ ಆಸ್ತಿಗಳು ನಕಲು ಆಗದಂತೆ ಖಾತರಿಪಡಿಸಿಕೊಳ್ಳತಕ್ಕದ್ದು.

ಮೇಲೆ ತಿಳಿಸಿರುವ ಷರತ್ತುಗಳನ್ವಯ ಹಾಗೂ ಕಾಲಕಾಲಕ್ಕೆ ಸರ್ಕಾರದಿಂದ ಹೊರಡಿಸಲಾಗುವ ನಿರ್ದೇಶನ/ಮಾರ್ಗಸೂಚಿಗಳನ್ವಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಇ–ಸ್ವತ್ತು ಮೂಲಕ ದಾಖಲಿಸಿದ ಆಸ್ತಿಗಳನ್ನು ನಿಯಮಾನುಸಾರ ಪರಿಶೀಲಿಸಿ, ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕಾಧಿಕಾರಿಗಳು ತಾಲ್ಲೂಕು ಪಂಚತಂತ್ರ ತಂತ್ರಾಂಶದಲ್ಲಿ ಅನುಮೋದಿಸಲು ಕ್ರಮವಹಿಸುವುದು.

ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು ವಿಷಯವನ್ನು ಮೊದಲ ಆದ್ಯತೆಯ ಮೇರೆಗೆ ಗಂಭೀರವಾಗಿ ಪರಿಗಣಿಸಿ, ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಪಂಚತಂತ್ರದಲ್ಲಿ ಬಿಟ್ಟು ಹೋಗಿರುವ ನಿಯಮಾನುಸಾರವಿರುವ ಆಸ್ತಿಗಳನ್ನು ಹಾಗೂ ಆಸ್ತಿಗಳ ತೆರಿಗೆ ವಿವರಗಳನ್ನು ಬದಲಾಯಿಸಲು ಶೀಘ್ರ ಕ್ರಮವಹಿಸುವಂತೆ ಸೂಕ್ತ ನಿರ್ದೇಶನ ನೀಡುವುದು ಹಾಗೂ ಪ್ರಗತಿ ಪರಿಶೀಲನಾ ಸಭೆಗಳಲ್ಲಿ ಈ ಬಗ್ಗೆ ಕಡ್ಡಾಯವಾಗಿ ಪರಿಶೀಲಿಸಿ, ದಾಖಲು ಮಾಡಲು ಶೀಘ್ರ ಕ್ರಮವಹಿಸುವಂತೆ ಕಟ್ಟುನಿಟ್ಟಾಗಿ ಸೂಚಿಸುವಂತೆ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕಾಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡುವುದು.

**ಈಗ ನೀಡಿರುವ ನಿಗಧಿತ ಕಾಲಾವಧಿಯಲ್ಲಿ ಗ್ರಾಮ ಪಂಚಾಯತಿಗಳು ಆಸ್ತಿಗಳ ತೆರಿಗೆ ವಿವರಗಳನ್ನು ನಮೂದಿಸದೆ, ವಾಸ್ತವ ಕರವಸೂಲಾತಿಗೂ ಮತ್ತು ಪಂಚತಂತ್ರದಲ್ಲಿ ದಾಖಲಾದ ಕರವಸೂಲಾತಿಯ ವಿವರಗಳಿಗೂ ವ್ಯತ್ಯಾಸ ಕಂಡುಬಂದಲ್ಲಿ ಹಾಗೂ ನಿಯಮಾನುಸಾರವಿಲ್ಲದ ಆಸ್ತಿಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ದಾಖಲಿಸಿದಲ್ಲಿ ಸಂಬಂಧಪಟ್ಟ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ವಿರುದ್ಧ ತಮ್ಮ ಹಂತದಲ್ಲಿಯೇ ಶಿಸ್ತು ಕ್ರಮ ಜರುಗಿಸುವುದು ಹಾಗೂ ಸಂಬಂಧಿಸಿದ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಕೋರಿದೆ.**

ನಿಮ್ಮ ನಂಬುಗೆಯ,

**(ಕೆ.ಯಾಲಕ್ಕಿಗೌಡ)**

ನಿರ್ದೇಶಕರು(ಪಂ.ರಾಜ್–1) ಹಾಗೂ

ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 01.02.2016

ಸಂಖ್ಯೆ: ಗ್ರಾಅಪ 440 ಗ್ರಾಪಂಅ 2015.

# ಸುತ್ತೋಲೆ

**ವಿಷಯ:** ಗ್ರಾಮ ಪಂಚಾಯತ್ ನಿಧಿಯಲ್ಲಿ ಶೇ.25 ಕ್ಕಿಂತ ಕಡಿಮೆ ಇರದಷ್ಟು ಮೊತ್ತವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಕಲ್ಯಾಣ ಕಾರ್ಯಕ್ರಮಗಳಿಗೆ ಬಳಸಲು ಹೆಚ್ಚುವರಿ ಮಾರ್ಗಸೂಚಿಗಳನ್ನು ಹೊರಡಿಸುವ ಬಗ್ಗೆ.

**ಉಲ್ಲೇಖ:** 1. ಸಮಸಂಖ್ಯೆಯ ಸುತ್ತೋಲೆ, ದಿನಾಂಕ 22.07.2015

2. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 130 ಗ್ರಾಪಂಅ 2003, ದಿನಾಂಕ 30.04.2003

***

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 213 ರಡಿ ಗ್ರಾಮ ಪಂಚಾಯತಿಗೆ ಎಲ್ಲಾ ಮೂಲಗಳಿಂದ ಲಭ್ಯವಾಗುವ ಅನುದಾನಗಳಲ್ಲಿ ಶೇಖಡ 25 ಕ್ಕಿಂತ ಕಡಿಮೆ ಇಲ್ಲದಂತೆ ಅನುದಾನವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಕಲ್ಯಾಣ ಕಾರ್ಯಕ್ರಮಗಳಿಗಾಗಿ ವಿನಿಯೋಗಿಸಲು ಮಾರ್ಗಸೂಚಿಗಳನ್ನು ಈಗಾಗಲೇ ಉಲ್ಲೇಖ (1) ರ ಸುತ್ತೋಲೆಯಲ್ಲಿ ಹೊರಡಿಸಲಾಗಿದೆ.

ಉಲ್ಲೇಖ (1) ರ ಸುತ್ತೋಲೆಯಲ್ಲಿ ನೀಡಿರುವ ಮಾರ್ಗಸೂಚಿಗಳಲ್ಲದೆ, ಪ್ರದೇಶಿಕ ಭಿನ್ನತೆಯ ಕಾರಣದಿಂದ ಇನ್ನಾವುದೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಲ್ಯಾಣ ಕಾರ್ಯಕ್ರಮಗಳು ಮುಖ್ಯವೆನಿಸಿದಲ್ಲಿ ಗ್ರಾಮ ಪಂಚಾಯಿತಿಗಳು ತಮ್ಮ ತಮ್ಮ ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ನಿರ್ಣಯಿಸಿ, ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿದಲ್ಲಿ ಅವುಗಳನ್ನು ಸಹ ಪರಿಗಣಿಸಲು ಅಗತ್ಯ ಸುತ್ತೋಲೆಯನ್ನು ಹೊರಡಿಸಲಾಗುವುದೆಂದು ತಿಳಿಸಲಾಗಿತ್ತು. ಅದರಂತೆ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸಲ್ಲಿಸಿರುವ ಪ್ರಸ್ತಾವನೆಗಳನ್ನು ಪರಿಗಣಿಸಿ, ಉಲ್ಲೇಖ (1) ರ ಸುತ್ತೋಲೆಯಲ್ಲಿ ನೀಡಿರುವ ಮಾರ್ಗಸೂಚಿಗಳಲ್ಲದೆ, ಈ ಕೆಳಕಂಡ ಮಾರ್ಗಸೂಚಿಗಳಂತೆಯೂ ಸಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಕಲ್ಯಾಣ ಕಾರ್ಯಕ್ರಮಗಳಿಗಾಗಿ ಮೀಸಲಿರಿಸಿದ ಅನುದಾನವನ್ನು ವಿನಿಯೋಗಿಸಬಹುದು.

1. ಗ್ರಾಮ ಪಂಚಾಯತಿಗಳ ವ್ಯಾಪ್ತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವರ್ಗದ ವಿದ್ಯಾರ್ಥಿಗಳಿಗೆ ಓದುವ ಕಲಿಕಾ ಸಾಮಗ್ರಿಗಳು ಹಾಗೂ ಪುಸ್ತಕಗಳನ್ನು ಹೊರತುಪಡಿಸಿ, ರೀಡಿಂಗ್ ಟೇಬಲ್, ಹೆಚ್ಚುವರಿ ಸಮವಸ್ತ್ರ, ಬ್ಯಾಗ್, ಕೊಡೆ ಇತ್ಯಾದಿಗಳಿಗಾಗಿ ಗರಿಷ್ಠ ರೂ.1,000/- ರಂತೆ ಪ್ರತಿ ವಿದ್ಯಾರ್ಥಿಗೆ ಒಮ್ಮೆ ಸಹಾಯಧನ ನೀಡಬಹುದು.
2. ಗ್ರಾಮ ಪಂಚಾಯತಿಗಳ ವ್ಯಾಪ್ತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದ ವರ್ಗದವರು ರಸ್ತೆ ಹಾಗೂ ಇನ್ನಿತರೆ ಅಪಘಾತಕ್ಕೊಳಗಾದ ಪ್ರಕರಣಗಳಲ್ಲಿ ಚಿಕಿತ್ಸೆಗಾಗಿ ಗರಿಷ್ಠ ರೂ.5,000/- ಸಹಾಯಧನ ನೀಡಬಹುದು.
3. ದೀರ್ಘಕಾಲದ ಕಾಯಿಲೆಗಳಿಂದ ಬಳಲುತ್ತಿರುವ ಗ್ರಾಮ ಪಂಚಾಯತಿಗಳ ವ್ಯಾಪ್ತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದವರು ಸಕಾರಣಗಳಿಂದ ಸರ್ಕಾರೇತರ ಆಸ್ಪತ್ರೆಗಳಲ್ಲಿ ಚಿಕಿತ್ಸೆಗಾಗಿ ದಾಖಲಾದ ಪ್ರಕರಣಗಳಿಗೆ ರೂ.3,000/- ರಂತೆ ಸಹಾಯಧನ ನೀಡಬಹುದು.
4. ಗ್ರಾಮ ಪಂಚಾಯತಿಗಳ ವ್ಯಾಪ್ತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದವರು ಸ್ವತಃ ನಿರ್ಮಿಸಿಕೊಂಡ ಹಾಗೂ ವಿವಿಧ ಯೋಜನೆಗಳಡಿ ನಿರ್ಮಿಸಿದ ದುರಸ್ಥಿಗಾಗಿ(ಮನೆ ನಿರ್ಮಿಸಿ ಕನಿಷ್ಠ ಹತ್ತು ವರ್ಷ ನಂತರ) ರೂ.15,000/- ಸಹಾಯ ಧನ ನೀಡಬಹುದು.

5. ಗ್ರಾಮ ಪಂಚಾಯತಿಗಳ ವ್ಯಾಪ್ತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದವರಿಗೆ ವಿದ್ಯುತ್ ಸಂಪರ್ಕಗಳನ್ನು ಭಾಗ್ಯ ಜ್ಯೋತಿ, ಕುಟೀರ ಜ್ಯೋತಿ, ಆರ್.ಜಿ.ಎಚ್.ಸಿ.ಎಲ್., ಯೋಜನೆಯಡಿ ಒಂದು ಪಾಯಿಂಟ್ ಮಾತ್ರ ನೀಡುತ್ತಿದ್ದು, ಹೆಚ್ಚುವರಿ ವಿಸ್ತರಣೆಗಾಗಿ ರೂ.4,000/– ಸಹಾಯ ಧನವನ್ನು ಕುಟುಂಬಕ್ಕೆ ಒಂದು ಬಾರಿಗೆ ನೀಡಬಹುದು.


6. ಗ್ರಾಮ ಪಂಚಾಯತಿಗಳ ವ್ಯಾಪ್ತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದ ಹೆಣ್ಣು ಮಕ್ಕಳ ಸರಳ ಮದುವೆಗೆ ರೂ.2,000/– ಸಹಾಯಧನ ನೀಡಬಹುದು.

7. ಗ್ರಾಮ ಪಂಚಾಯತಿಗಳ ವ್ಯಾಪ್ತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದವರ ಶವ ಸಂಸ್ಕಾರಕ್ಕೆ ರೂ.1,000/– ಸಹಾಯಧನ ನೀಡಬಹುದು.

8. ಗ್ರಾಮ ಪಂಚಾಯತಿಗಳ ವ್ಯಾಪ್ತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದವರಿಗೆ ನಲ್ಲಿ ನೀರು ಸಂಪರ್ಕದ ಮೀಟರ್ ಅಳವಡಿಕೆಗೆ ಹಾಗೂ ಖಾಸಗಿ ನಲ್ಲಿ ನೀರು ಪಡೆಯಲು ಗ್ರಾಮ ಪಂಚಾಯತಿಗೆ ಪಾವತಿಸುವ ವಾಸ್ತವಿಕ ಠೇವಣಿ ರೂ.1,000/–ಮೊತ್ತವನ್ನು ಸಹಾಯಧನವನ್ನಾಗಿ ನೀಡಬಹುದು.

9. ಗ್ರಾಮ ಪಂಚಾಯತಿಗಳ ವ್ಯಾಪ್ತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದವರು ರೂ.2,500/– ಗಳಿಗಿಂತ ಕಡಿಮೆ ಸಹಾಯಧನ ಪಡೆದು ನಿರ್ಮಿಸಿದ ಶೌಚಾಲಯ ದುರಸ್ಥಿಗಾಗಿ ಕನಿಷ್ಟ ರೂ. 5,000/– ಗಳವರೆಗೆ ಒಂದು ಬಾರಿಗೆ ಸಹಾಯಧನ ನೀಡಬಹುದು.

10. ಗ್ರಾಮ ಪಂಚಾಯತಿಗಳ ವ್ಯಾಪ್ತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದ ಮಕ್ಕಳಿಗೆ ಲಸಿಕೆ ಅಳವಡಿಕೆಗಾಗಿ (ಸರ್ಕಾರದಿಂದ ಉಚಿತವಾಗಿ ಅಳವಡಿಸುವ ಲಸಿಕೆಗಳನ್ನು ಹೊರತುಪಡಿಸಿ) ವಾಸ್ತವ ವೆಚ್ಚವನ್ನು ಸಹಾಯಧನವನ್ನಾಗಿ ನೀಡಬಹುದು.



**(ಕೆ. ಯಾಲಕ್ಕಿಗೌಡ)**
ನಿರ್ದೇಶಕರು(ಪಂ.ರಾಜ್–1) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.



ದಿನಾಂಕ: 01.01.2016 ರಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ಪಂಚಾಯತ್ ರಾಜ್ ತಿದ್ದುಪಡಿ ಕಾಯ್ದೆಗೆ ಸಂಬಂಧಿಸಿದಂತೆ ಪತ್ರಿಕಾಗೋಷ್ಠಿ ನಡೆಸಲಾಯಿತು.







ದಿನಾಂಕ: 05.01.2016 ರಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಗ್ರಾಮೀಣ ನೀರು ಸರಬರಾಜು ಕುರಿತು ರಾಜ್ಯದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳೊಂದಿಗೆ ವೀಡಿಯೋ ಕಾನ್ಫರೆನ್ಸ್ ನಡೆಸುತ್ತಿರುವುದು.

# KARNATAKA VIKAS : FEBRUARY 2016

A Monthly Magazine for Rural Development and Panchayath Raj Department, Government of Karnataka
Regd. KA / BGGPO / 2531 / 2015-17, License to Post "without Prepayment" WPP - 32
RNI No. : 28103 / 1974 Total No. Pages 52, Posted at Bengaluru PSO, Mysore Road,
Bengaluru on 9th, 10th, 11th of Every Month

## ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ



Published & Owned by :
**DIRECTOR**
**(PANCHAYAT RAJ)**
Rural Development and
Panchayat Raj Department

Name of the Editor
**Y. Mahankalappa**

Place & Publication
**Karnataka Vikas**
No. 309, 3rd Floor, Gate No.1
M.S. Building, Dr. Ambedkar Veedhi,
Bengaluru - 560 001.

Printed by
**KAVERI PRINTS INDIA**
Chamaraja Pete
Bengaluru, Karnataka
Mob:+91 95919 88347

Price : ಬೆಲೆ : ₹10.00